ಪ್ರಜೋದನೆ

ಲಂಕೇಶ್

ಮೇ 9, 2012 ಪುಟ 20 ರೂ. 14/-

ಪದವೀಧರ ಕ್ಷೇತ್ರ ರಾಮಚಂದ್ರಗೌಡ ಕಾದಿದೆ ಸೋಲು



500 ಕೋಟಿಯ ಆಸ್ತಿಗಾಗಿ ಕೊಂದನಂತೆ!

ಸೂರಿ ಹಂತಕ ಭಾನು ಅರೆಸ್ಟ್



ವಿಶ್ವನಾಥ್ ಕ್ರೌರ್ಯ

ನಿರ್ಗತಿಕರ ನರಕ ಯಲಹಂಕ



ಕಸಾಪ


ಕೇಸರಿ ಕಸರತ್ತು



ಏಪ್ರಿಲ್ 30ಕ್ಕೆ ಬಿಜೆಪಿಯಲ್ಲಿ

ಪ್ರಳಯವಂತೆ?

ಶಂಕರ್ ಬಿದರಿ ದೋಷಮುಕ್ತರಲ್ಲ



ಚಾರ್ವಾಕ



• ಶಿವಸುಂದರ್

ಶಂಕರ್ ಬಿದರಿಯವರನ್ನು ಡಿಜಿಪಿಯನ್ನಾಗಿ ನೇಮಕ ಮಾಡಿದ್ದ ಆದೇಶವನ್ನು ರದ್ದುಪಡಿಸಿದ್ದ ಕರ್ನಾಟಕ ಹೈಕೋರ್ಟಿನ ಆದೇಶಕ್ಕೆ ಸುಪ್ರೀಂಕೋರ್ಟು ಸ್ಟೇ ನೀಡಿದೆ. ಸುಪ್ರೀಂಕೋರ್ಟಿನ ದ್ವಿಸದಸ್ಯ ಪೀಠವು ಕೂಡಲೇ ಬಿದರಿಯವರನ್ನು ಡಿಜಿಪಿಯಾಗಿ ನೇಮಕ ಮಾಡಬೇಕೆಂದು ಹೇಳಿಲ್ಲವಾದರೂ ತನ್ನ ಆದೇಶವನ್ನು ಪುನರ್ ಪರಿಶೀಲಿಸಿ ಮೇ 31 ರೊಳಗೆ ಆದೇಶವನ್ನು ನೀಡಬೇಕೆಂದು ಹೈಕೋರ್ಟಿಗೆ ಸೂಚಿಸಿದೆ.

ಇದನ್ನು ಶಂಕರ್ ಬಿದರಿ ಮತ್ತು ಕರ್ನಾಟಕ ಸರ್ಕಾರ ತಮಗೆ ಸಿಕ್ಕ ಜಯವೆಂದು ಬಣ್ಣಿಸಿಕೊಂಡಿದ್ದಾರೆ. ಬಿದರಿಯವರಂತೂ ತಾವು 41 ವರ್ಷಗಳಿಂದ ಮಾಡಿದ ಪ್ರಾಮಾಣಿಕ ಸೇವೆಗೆ ಹೈಕೋರ್ಟ್ ತೀರ್ಪು ಹಚ್ಚಿದ ಕಳಂಕವನ್ನು ಸುಪ್ರೀಂ ಕೋರ್ಟು ಒರೆಸಿಹಾಕಿದೆ ಎಂದು ಹೇಳಿದ್ದಾರೆ. ಆದರೆ, ಸುಪ್ರೀಂಕೋರ್ಟು ಇಷ್ಟೆಲ್ಲಾ ಸಂಭ್ರಮಕ್ಕೆ ಕಾರಣವಾಗುವಂತೆ ಎನ್‌ಹೆಚ್‌ಆರ್‌ಸಿ ಆಯೋಗದ ಮತ್ತು ಸದಾಶಿವ ಆಯೋಗದ ವರದಿಯನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ "ಶಂಕರ್ ಬಿದರಿಯವರು ಕಳಂಕರಹಿತರು. ಅವರು ಯಾವುದೇ ಮಾನವ ಹಕ್ಕು ದೌರ್ಜನ್ಯಗಳನ್ನು ನಡೆಸಿಲ್ಲ" ಎಂದೇನೂ ಹೇಳಿಲ್ಲ. ಆ ವರದಿಯಲ್ಲಿ ಮೇಲ್ನೋಟಕ್ಕೆ ಶಂಕರ್ ಬಿದರಿಯವರ ಮೇಲೆ ನೇರ ಆರೋಪ ಇದ್ದಂತೆ ಕಾಣುತ್ತಿಲ್ಲ ಎಂದು ಹೇಳಿದೆ. ಹಾಗೆಯೇ ಹೈಕೋರ್ಟು ಆದೇಶ ನೀಡುವಾಗ ಆ ವರದಿಯನ್ನು ಕೂಲಂಕಷವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದೆ. ಅದೇನೇ ಇದ್ದರೂ ಅವೆಲ್ಲವನ್ನೂ ಪುನರ್ ಪರಿಶೀಲಿಸಿ ಮೇ 31ರೊಳಗೆ ಪುನರಾದೇಶ ನೀಡುವಂತೆ ಸೂಚಿಸಿದೆ ಅಷ್ಟೆ.

ಶಂಕರ್ ಬಿದರಿಯವರಿಗೆ ಸುಪ್ರೀಂಕೋರ್ಟ್ ಕ್ಲೀನ್ ಚಿಟ್ ಕೊಟ್ಟಿಲ್ಲ ಎನ್ನುವುದು ಎಷ್ಟು ನಿಜವೋ ಅಷ್ಟೇ ನಿಜವಾದದ್ದು ವೀರಪ್ಪನ್ ಕಾರ್ಯಾಚರಣೆಯ ಅವಧಿಯಲ್ಲಿ ಬಿದರಿ ಅವರಿದ್ದ ಹುದ್ದೆ ಮತ್ತು ಅವರಿಗೆ ನೀಡಿದ್ದ ಜವಾಬ್ದಾರಿಯನ್ನು ನಿರ್ವಹಿಸದೆ ಮಾನವ ಹಕ್ಕು ಉಲ್ಲಂಘನೆಗಳಿಗೆ ಕಾರಣರಾಗಿದ್ದರು ಎಂಬುದಾಗಿದೆ. ಈ ನ್ಯಾಯಿಕ ವಿಷಯಗಳನ್ನು ಪರಿಗಣಿಸದೆ ಸದಾಶಿವ ವರದಿಯಲ್ಲಿ ನೇರವಾಗಿ ಅವರ ಹೆಸರು ಇದೆಯೋ ಇಲ್ಲವೋ ಎಂಬ ತಾಂತ್ರಿಕ ಅಂಶಗಳನ್ನು ಮಾತ್ರ ಸುಪ್ರೀಂಕೋರ್ಟ್ ಪರಿಗಣಿಸಿರುವುದು ಅತ್ಯಂತ ಕಳವಳಕಾರಿಯಾಗಿದೆ.

ಸದಾಶಿವ ಆಯೋಗ 1993-96ರ ನಡುವೆ ವೀರಪ್ಪನ್ ಕಾರ್ಯಾಚರಣೆಯಲ್ಲಿ ಹಲವಾರು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆಯೆಂದು ಅನುಮಾನಕ್ಕೆಡೆಯಿಲ್ಲದಂತೆ ವರದಿ ನೀಡಿದೆ. ಅದರ ಪ್ರಕಾರ ಈ ಅವಧಿಯಲ್ಲಿ ನಡೆದ 66 ಎನ್‌ಕೌಂಟರ್‌ಗಳಲ್ಲಿ 33 ಅನುಮಾನಾಸ್ಪದವಾದವು. ಒಬ್ಬ ಮಹಿಳೆಯ ಮೇಲೆ ಸತತವಾಗಿ ಒಂದು ತಿಂಗಳ ಅತ್ಯಾಚಾರ ನಡೆಸಲಾಗಿದೆ. ಮೂವರು ಮಹಿಳೆಯರನ್ನು ವಾರಕ್ಕೂ ಹೆಚ್ಚು ಕಾಲ ಅಕ್ರಮ ಬಂಧನದಲ್ಲಿರಿಸಿಕೊಂಡು ಎಲೆಕ್ಟ್ರಿಕ್ ಶಾಕ್ ಇತ್ಯಾದಿ ಚಿತ್ರಹಿಂಸೆಗಳನ್ನು ನೀಡಲಾಗಿದೆ. ವೀರಪ್ಪನ್ ಸಹಚರರು ಎಂಬುವರ ಮೇಲೆ ಕೇವಲ ಅನುಮಾನದಿಂದ ಹಲವಾರು ಚಿತ್ರಹಿಂಸೆ ನೀಡಲಾಗಿದೆ. ಮತ್ತು ಹಲವರು ಈ ಅವಧಿಯಲ್ಲಿ ಕಣ್ಮರೆಯಾಗಿದ್ದು ಈವರೆಗೆ ಪತ್ತೆಯಿಲ್ಲ. ಸದಾಶಿವ ಆಯೋಗದ ವರದಿಯನ್ನು ರಾಷ್ಟ್ರೀಯ ಮಾನವ ಹಕ್ಕು ಆಯೋಗವೂ ಒಪ್ಪಿಕೊಂಡಿದೆ ಮತ್ತು ಪರಿಹಾರಕ್ಕೆ ಮತ್ತು ಇತರ ಕ್ರಮಗಳಿಗೆ ಸರ್ಕಾರಕ್ಕೆ ಸೂಚನೆ ನೀಡಿದೆ.

ಈ ಎಲ್ಲಾ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಸರ್ಕಾರಿ ಕೊಲೆಗಳು ಬಹುಪಾಲು ನಡೆದಿರುವುದು ಶಂಕರ್ ಬಿದರಿಯವರು ವೀರಪ್ಪನ್ ನಿಗ್ರಹ ಪಡೆಯ ಡೆಪ್ಯೂಟ್ ಕಮಾಂಡೆಂಟ್ ಆಗಿದ್ದಾಗ. ಸಾಕ್ಷಾತ್ ಶಂಕರ್ ಬಿದರಿಯವರೇ ತಾನು ಅಧಿಕಾರ ವಹಿಸಿಕೊಂಡ ಕಾಲಾವಧಿಯಲ್ಲಿ 300ರಷ್ಟಿದ್ದ ವೀರಪ್ಪನ್ ಪಡೆಯ ಶಕ್ತಿಯನ್ನು 4ಕ್ಕಿಳಿಸಿದ್ದು ತನ್ನ ಅತಿದೊಡ್ಡ ಸಾಧನೆಯೆಂದು ಹಲವಾರು ಸಂದರ್ಶನಗಳಲ್ಲಿ ಕೊಚ್ಚಿಕೊಂಡಿದ್ದಾರೆ. ಆದರೆ ತಾವು ಅದನ್ನು ಜನರ ಸಾತ್ವಿಕ ಶಕ್ತಿಗೆ ಅಪೀಲ್ ಮಾಡುವ ಮೂಲಕ ಮಾಡಿದೆ ಎಂದು ಕೊಚ್ಚಿಕೊಳ್ಳುತ್ತಾರೆ. ಆದರೆ ಸರ್ಕಾರವೇ ಒಪ್ಪಿಕೊಂಡಿರುವ ಸದಾಶಿವ ವರದಿ ಪ್ರಕಾರ ಈ 'ಸಾತ್ವಿಕ' ಪ್ರಯತ್ನ 66 ಜನರನ್ನು ಕೊಂದಿದೆ. ಎಲೆಕ್ಟ್ರಿಕ್ ಶಾಕ್, ಅತ್ಯಾಚಾರ ಇತ್ಯಾದಿ 'ಸಾತ್ವಿಕ' ಪ್ರಯತ್ನಗಳನ್ನು ಪೊಲೀಸರು ನಡೆಸಿದ್ದಾರೆ ಎಂದು ನಿಸ್ಸಂದೇಹವಾಗಿ ಸಾಬೀತುಪಡಿಸಿದೆ. ಇವೆಲ್ಲವನ್ನೂ ಶಂಕರ್ ಬಿದರಿಯವರೇ ನೇರವಾಗಿ ಮಾಡಿದ್ದಾರೆ ಎಂದು ವರದಿ ಹೇಳಿಲ್ಲ, ನಿಜ. ಆದರೆ ಆ ಕ್ರಮಗಳಿಗೆ ಆದೇಶಿಸುವ ಅಥವಾ ಅದನ್ನು ತಡೆಯಲು ಕ್ರಮ ತೆಗೆದುಕೊಳ್ಳುವ **Operational command** ಹುದ್ದೆಯಲ್ಲಿ ಅವರಿದ್ದರು. ಹೀಗಾಗಿ ಅವರು ಆ ಎಲ್ಲಾ ಕ್ರಮಗಳಿಗೂ ಹೊಣೆಯಾಗುವುದಿಲ್ಲವೇ? ಆದರ ಕೀರ್ತಿ ಮಾತ್ರ ಬೇಕು ಆದರೆ ಪಾಪದ ಹೊರೆ ಬೇಡವೆಂದರೆ ಹೇಗೆ?

ಇರಲಿ. ಇದು ನೈತಿಕ ವಿಷಯ ಮಾತ್ರವಲ್ಲ, ಇಲ್ಲಿ ಕಾನೂನು, ನ್ಯಾಯ, ಹೊಣೆಗಾರಿಕೆ ಮತ್ತು ಅಧಿಕಾರದ ಪ್ರಶ್ನೆಗಳಿವೆ. ವಾಸ್ತವವಾಗಿ ಈ ಪ್ರಶ್ನೆಗಳ ಬಗ್ಗೆ ಸುಪ್ರೀಂಕೋರ್ಟು ಪಟ್ಟಿರುವ ಅಭಿಪ್ರಾಯ ಅತ್ಯಂತ ಕಳವಳಕಾರಿಯಾಗಿದೆ. ಕೋರ್ಟು ತನ್ನ ಆದೇಶದಲ್ಲಿ:

ಡಿಜಿಪಿ ಹುದ್ದೆಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸದಾಶಿವ ಆಯೋಗದಂತಹ ವರದಿಗಳು **"not relevant"** ಎಂದು ಹೇಳಿದೆ. ಆದರ ಪ್ರಕಾರ ಮೇಲ್ನೋಟಕ್ಕೆ ಶಂಕರ್ ಬಿದರಿಯವರನ್ನೇನೂ ಸದಾಶಿವ ವರದಿ ಹೊಣೆಗಾರನನ್ನಾಗಿ ಮಾಡಿದಂತೆ ಕಾಣುವುದಿಲ್ಲ.

ದೇಶದ ಅತ್ಯುಚ್ಚ ನ್ಯಾಯಿಕ ಸಂಸ್ಥೆ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮತ್ತು ಅದಕ್ಕೆ ಪ್ರಧಾನವಾಗಿ ಕಾರಣವಾಗುವ ಪೊಲೀಸ್ ವ್ಯವಸ್ಥೆಯೊಂದರ ಮುಖ್ಯಸ್ಥನನ್ನು ನೇಮಕ ಮಾಡುವಾಗ ಗಮನಿಸಬೇಕಾದ ಅಂಶಗಳ ಬಗ್ಗೆ ಇಷ್ಟು ಸಲೀಸಾದ ಅಭಿಪ್ರಾಯವನ್ನು ನೀಡಿರುವುದು ಕಳವಳವನ್ನೇ ಹುಟ್ಟಿಸುತ್ತದೆ. ಒಂದು ರಾಜ್ಯದ ಇಡೀ ಜನತೆಯ ಮಾನವ ಹಕ್ಕುಗಳನ್ನು ಮತ್ತು ನೆಮ್ಮದಿಯನ್ನು ಕಾಪಾಡುವ ಜವಾಬ್ದಾರಿ ಪೊಲೀಸ್ ವ್ಯವಸ್ಥೆಗಿದೆಯೆಂದು ಈ ಪ್ರಜಾಪ್ರಭುತ್ವದಲ್ಲಿ ಭಾವಿಸಲಾಗುತ್ತದೆ. ಅಂಥ ಪೊಲೀಸ್ ವ್ಯವಸ್ಥೆಗೆ ಆಡಳಿತಾತ್ಮಕ ನಾಯಕತ್ವವನ್ನು ಮಾತ್ರವಲ್ಲದೇ ನೈತಿಕ ನಾಯಕತ್ವವನ್ನು ನೀಡಬೇಕಿರುವುದು ಡಿಜಿಪಿ ಹುದ್ದೆ. ಇವೆಲ್ಲವೂ ಪುಸ್ತಕದ ಮಾತುಗಳೇ ಆದರೂ ಕನಿಷ್ಠ ಸಂವಿಧಾನಕರ್ತರ ಆಶಯವನ್ನಾದರೂ ಪ್ರತಿಫಲಿಸುತ್ತದೆ. ಸುಪ್ರೀಂಕೋರ್ಟು ಸರ್ಕಾರಗಳ ಯಾವುದೇ ಕ್ರಮ ಆಡಳಿತಾತ್ಮಕ ಸಂಪ್ರದಾಯ ಮತ್ತು ನಿಯಮಾವಳಿಗಳಿಗೆ ತಕ್ಕಂತೆ ನಡೆದಿದೆಯೇ ಎಂದು ಮಾತ್ರ ಪರಿಗಣಿಸದೆ-ಅವು ಸಂವಿಧಾನದ ಆಶಯಗಳಿಗೆ ತಕ್ಕಂತೆಯೂ ನಡೆದಿದೆಯೇ ಇಲ್ಲವೇ ಎಂಬುದನ್ನೂ ಪ್ರಧಾನವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು.

ಜೀವಿಸುವ ಹಕ್ಕು ಸಂವಿಧಾನ ನೀಡಿರುವ ಅತ್ಯಂತ ಮೂಲಭೂತ ಹಕ್ಕು. ಅದನ್ನು ಕಾಪಾಡಬೇಕಾದದ್ದು ಪ್ರಭುತ್ವದ ಕರ್ತವ್ಯ. ಅದನ್ನು ಆಚರಣೆಯಲ್ಲಿ ರಕ್ಷಿಸಬೇಕಾದ್ದು ಪೊಲೀಸ್ ವ್ಯವಸ್ಥೆಯ ಹೊಣೆಗಾರಿಕೆ. ಹೀಗಾಗಿ ಒಂದು ರಾಜ್ಯದ ಪೊಲಿಸ್ ವ್ಯವಸ್ಥೆಗೆ ಮುಖ್ಯಸ್ಥನಾಗುವವರು – ಅಂದರೆ ನಾಯಕತ್ವ ನೀಡುವವರು – ಈ ಸಂವಿಧಾನಬದ್ಧ ಜವಾಬ್ದಾರಿಯನ್ನು ಹೊರುವ ಬಗ್ಗೆ ಯಾವುದೇ ಅನುಮಾನಕ್ಕೆಡೆಯಿಲ್ಲದಂತೆ ನಡೆದುಕೊಂಡಿರಬೇಕು. ಒಂದು ವೇಳೆ ಅನುಮಾನಕ್ಕೆ ಆಸ್ಪದವಾಗುವಂತೆ ನಡೆದುಕೊಂಡಿದ್ದರೆ ಅನುಮಾನವಿದೆಯೆಂಬ ಕಾರಣಕ್ಕೆ ಅನರ್ಹಗೊಳಿಸಬೇಕಿಲ್ಲವಾದರೂ ಆದರ ಸತ್ಯಾಸತ್ಯತೆಯನ್ನು ಮಾತ್ರ ಪರಿಶೀಲಿಸುವುದು ಅತ್ಯಂತ **"relevant"** ಆದ ವಿಷಯ.

ಮೇಲ್ನೋಟಕ್ಕೆ, ಸದಾಶಿವ ವರದಿ ಶಂಕರ್ ಬಿದರಿಯವರನ್ನು ಹೊಣೆಗಾರರನ್ನಾಗಿ ಮಾಡಿಲ್ಲವಾದ್ದರಿಂದ ಶಂಕರ್ ಬಿದರಿಯವರು ಹೊಣೆಗಾರರು ಹೇಗಾಗುತ್ತಾರೆ? ಆ ತರ್ಕದಲ್ಲಿ ರಾಜ್ಯವೊಂದರಲ್ಲಿ ನಡೆಯುವ ಎಲ್ಲಾ ಮಾನವ ಹಕ್ಕು ಉಲ್ಲಂಘನೆಗಳಿಗೂ ಡಿಜಿಪಿಯೇ ಜವಾಬ್ದಾರರಾಬೇಕೆ ಎಂದು ಸುಪ್ರೀಂಕೋರ್ಟು ಆಕ್ಷೇಪವೆತ್ತಿದೆ. ಆದರೆ ಇದರಲ್ಲಿ ಬಹು ಮುಖ್ಯವಾದ ವಿಷಯವೊಂದಿದೆ. ಡಿಜಿಪಿ ಒಂದು ರಾಜ್ಯದ ಪೊಲೀಸ್ ವ್ಯವಸ್ಥೆಯ ಮುಖ್ಯಸ್ಥ. ಆ ಕಾರಣಕ್ಕಾಗಿ ಆ ರಾಜ್ಯದಲ್ಲಿ ನಡೆಯುವ ಎಲ್ಲಾ ಪೊಲೀಸ್ ಕಾರ್ಯಾಚರಣೆಯ ಪದನಿಮಿತ್ತ (**Notional**) ಜವಾಬ್ದಾರ. ರಾಜ್ಯದ ಯಾವುದೋ ಮೂಲೆಯಲ್ಲಿರುವ ಠಾಣೆಯೊಂದರಲ್ಲಿ ಸಬ್ ಇನ್ಸ್‌ಪೆಕ್ಟರ್ ನಡೆಸುವ ಲಾಕಪ್‌ಡೆತ್‌ಗೆ ನೇರವಾಗಿ ಡಿಜಿಪಿ ಹೊಣೆಗಾರನಲ್ಲ, ಆ ಸಂದರ್ಭದಲ್ಲಿ ಅಲ್ಲಿನ ಠಾಣಾಧಿಕಾರಿಯೇ ಅಲ್ಲಿನ **Operational** ಜವಾಬ್ದಾರ. ಹೀಗಾಗಿ ಆ ಲಾಕಪ್‌ಡೆತ್‌ಗೆ ಠಾಣಾಧಿಕಾರಿ ಅಪರಾಧಿಯೇ ವಿನಃ ಡಿಜಿಪಿಯಲ್ಲ, ನಿಜ. ಆದರೆ ಆತನ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವಲ್ಲಿ ಸರಿಯಾದ ತೀರ್ಮಾನ ತೆಗೆದುಕೊಳ್ಳದಿದ್ದರೆ ಖಂಡಿತಾ ಡಿಜಿಪಿ ಕೂಡಾ ತಪ್ಪಿತಸ್ಥ


ಹಾಗೆಯೇ ಇಡೀ ರಾಜ್ಯಾದ್ಯಂತ ಹಿಂಸಾಚಾರ ಸಂಭವಿಸುತ್ತಿದ್ದಾಗ – ಗುಜರಾತಿನಲ್ಲಿ ನಡೆದಂತೆ – ಅದನ್ನು ತಡೆಗಟ್ಟಲು ಬೇಕಾದ ರಾಜ್ಯವ್ಯಾಪಿ ಮಾರ್ಗದರ್ಶನವನ್ನು ನೀಡದಿದ್ದರೆ ಆ ಡಿಜಿಪಿ ನೇರವಾಗಿ ಹಿಂಸಾಚಾರ ಮುಂದುವರೆಯಲು ಕಾರಣಕರ್ತನಲ್ಲದಿದ್ದರೂ ಹೊಣೆಗಾರನಾಗಿರುತ್ತಾರೆ. ಇತ್ತೀಚಿನ ಕೋಮು ಹಿಂಸಾಚಾರ ನಿಯಂತ್ರಣ ಮಸೂದೆಯಲ್ಲಂತೂ ಒಂದು ಜಿಲ್ಲೆಯಲ್ಲಿ ಸತತವಾಗಿ ಮತ್ತು ವ್ಯಾಪಕವಾಗಿ ಹಿಂಸಾಚಾರ ನಡೆಯುತ್ತಿದ್ದರೆ ಅದನ್ನು ನಿಗ್ರಹಿಸಲಾಗದ ಅಪರಾಧದ ಮೇಲೆ ಆ ಜಿಲ್ಲೆಯ ಪೊಲೀಸ್ ಮುಖ್ಯಸ್ಥನ ಮೇಲೆ ಪ್ರಕರಣ ದಾಖಲಿಸುವ ಅವಕಾಶವನ್ನು ಕೊಟ್ಟಿದೆ. ಹಾಗೆಯೇ ಒಂದು ರಾಜ್ಯಾದ್ಯಂತ ಅವ್ಯಾಹತವಾದ ಹಿಂಸಾಚಾರ ತಡೆಯದಿದ್ದರೆ ಆ ರಾಜ್ಯದ ಡಿಜಿಪಿ **Notional** ಮತ್ತು **Operational** ಜವಾಬ್ದಾರ ಎರಡೂ ಆಗಿರುತ್ತಾನೆ. ಇದು ಇತ್ತೀಚೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲೆಡೆ ನಾಗರಿಕ ಮತ್ತು ಪ್ರಜಾತಂತ್ರ ದೇಶಗಳು ಅನುಸರಿಸುತ್ತಿರುವ ನಾಗರಿಕ ಸಂಹಿತೆ.

ಆದರೆ ಶಂಕರ್ ಬಿದರಿಯವರ ಪ್ರಕರಣದಲ್ಲಿ ಅಷ್ಟೊಂದು ಕೂದಲು ಸೀಳುವ ತರ್ಕವೂ ಅಗತ್ಯವಿಲ್ಲ. ಅವರು ಈ ಮಾನವ ಹಕ್ಕುಗಳ ಉಲ್ಲಂಘನೆ ನಡೆಯುವ ಸಂದರ್ಭದಲ್ಲಿ ಅಲ್ಲಿನ ಡೆಪ್ಯುಟಿ ಕಮ್ಯಾಂಡೆಂಟ್ ಆಗಿದ್ದರು. ಅದು **Notional command** ಅಲ್ಲ, ಬದಲಿಗೆ **Operational command**. ಹೀಗಾಗಿ ಆ ಅವಧಿಯಲ್ಲಿ ನಡೆದ ಎಲ್ಲಾ ಮಾನವ ಹಕ್ಕು ಪ್ರಕರಣಗಳಲ್ಲಿ ಇವರೇ ಖುದ್ದಾಗಿ ಟ್ರಿಗರ್ ಒತ್ತಿ ಅಮಾಯಕರನ್ನು ಸಾಯಿಸಿಲ್ಲದೆ ಇದ್ದರೂ ಸತತವಾಗಿ ಮೂರು ವರ್ಷಗಳು ನಡೆದ ಮಾನವ ಹಕ್ಕು ಉಲ್ಲಂಘನೆಯ ಸಂದರ್ಭದಲ್ಲಿ ಅದನ್ನು ತಡೆಗಟ್ಟಲು ಇವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದು ಮಾನವ ಹಕ್ಕುಗಳ ಬಗ್ಗೆ ಅವರಿಗಿರುವ ಅಸಡ್ಡೆಯನ್ನು ಸಾಬೀತುಪಡಿಸುವುದಿಲ್ಲವೇ? ಸದಾಶಿವ ಆಯೋಗವು ಮೌನದ ಮೂಲಕ ಹೇಳುವ ಪ್ರಮುಖ ಅಂಶ ಇದೇ ಅಲ್ಲವೇ?

ಹೀಗಾಗಿ ಆ ಅವಧಿಯಲ್ಲಿ ನಡೆದ ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳಲ್ಲಿ ಸದಾಶಿವ ವರದಿಯಲ್ಲಿ ಶಂಕರ್ ಬಿದರಿಯವರ ಹೆಸರು ಪ್ರಸ್ತಾಪವಾಗಿಲ್ಲ ಅಥವಾ ಅವರನ್ನು ದೂಷಿಸಿ ಮಾಡಿಲ್ಲ ಎಂಬುದು ಅವರ ಮೇಲೆ ಅಪರಾಧ ಸಂಹಿತೆ ಮೇಲೆ ಕ್ರಮ ಜರುಗಿಸಲು ಸಾಧ್ಯವಿಲ್ಲ ಎಂಬುದನ್ನು ಸೂಚಿಸುತ್ತದೆಯೇ ವಿನಃ ಅವರನ್ನು **Operational command** ಜವಾಬ್ದಾರಿ ಮತ್ತು ಹೊಣೆಗಾರಿಕೆಯಿಂದ ಮುಕ್ತಗೊಳಿಸುವುದಿಲ್ಲ. ಹೀಗಾಗಿ ಒಂದು ರಾಜ್ಯದ ಪೊಲೀಸ್ ಮುಖ್ಯಸ್ಥ ಹುದ್ದೆಯನ್ನು ಶಂಕರ್ ಬಿದರಿಯವರಂಥ ವ್ಯಕ್ತಿಗೆ ಕೊಡಬಹುದೇ ಎಂದು ತೀರ್ಮಾನಿಸುವಾಗ ಸುಪ್ರೀಂ ಕೋರ್ಟು ಶಂಕರ್ ಬಿದರಿಯವರು ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳು ಸಂಭವಿಸುತ್ತಿರುವಾಗ ಅಲ್ಲಿ ಕೇವಲ **Notional command** ಆಗಿರಲಿಲ್ಲ ಬದಲಿಗೆ **Operational command** ಆಗಿದ್ದರು ಎಂಬುದನ್ನೂ ಮತ್ತು ಆದರಿಂದಾಗಿ ಅಲ್ಲಿ ಅವರ ಅವಧಿಯಲ್ಲಿ ನಿರಂತರವಾಗಿ ನಡೆದಿದೆ ಎಂದು ಸಾಬೀತಾಗಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಪ್ರತ್ಯಕ್ಷ ಮತ್ತು ಪರೋಕ್ಷ ಹೊಣೆಗಾರರು ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ನಿಜಕ್ಕೂ ವಿಷಾದನೀಯ. ಕಳವಳಕಾರಿ. ಇದಾಗಬಾರದಿತ್ತು.

ನೋ ಕಾಮೆಂಟ್ಸ್

"ಪತ್ರಿಕಾ ವೃತ್ತಿ ಇದೀಗ ಉದ್ಯಮವಾಗಿ ಬದಲಾಗಿದೆ. ಪತ್ರಕರ್ತ, ಓದುಗ, ಮಾಲೀಕರೂ ಬದಲಾಗಿದ್ದಾರೆ. ಇದರ ಮಧ್ಯೆಯೂ ಪತ್ರಕರ್ತರು ತಮ್ಮ ಆತ್ಮಸಾಕ್ಷಿಯನ್ನು ಬದಲಿಸಿಕೊಳ್ಳಬಾರದು. ಎರಡು ದಶಕದ ಹಿಂದೆ ಭ್ರಷ್ಟ ಪತ್ರಕರ್ತರು ಅಲ್ಪಸಂಖ್ಯಾತರಾಗಿದ್ದರು. ಆದರೆ ಇಂದು ಪ್ರಾಮಾಣಿಕ ಪತ್ರಕರ್ತರೇ ಅಲ್ಪಸಂಖ್ಯಾತರಾಗಿದ್ದಾರೆ."



- ದಿನೇಶ್ ಅಮೀನ್ ಮಟ್ಟು

"ವಾಲ್ ಸ್ಟ್ರೀಟ್ ಆಕ್ರಮಿಸಿ ಹೋರಾಟಕ್ಕೆ ಒಂದು ವರ್ಷವಾಯಿತು. ಅದರ ಪಾಠಗಳೇನು? ವಾಲ್‌ಸ್ಟ್ರೀಟಿನ ಪೋಷರು ಮತ್ತು ಚಳವಳಿಯೊಳಗಿನ ನೈತಿಕವಾದಿಗಳು ಇಡೀ ಚಳವಳಿಯನ್ನು ಬಿಕ್ಕಟ್ಟಿಗೆ ಪ್ರಧಾನ ಕಾರಣವಾಗಿರುವ ಬಂಡವಾಳಶಾಹಿಯ ವಿರುದ್ಧ ತಿರುಗದೇ ವ್ಯಕ್ತಿಗತ ಭ್ರಷ್ಟರ ವಿರುದ್ಧ ಅಥವಾ ನೈತಿಕ ಅಧಃಪತನದ ವಿರುದ್ಧ ತಿರುಗಿಸಲು ಪ್ರಯತ್ನಿಸಿದರು. ಚಳವಳಿಗಾರರು ಕೇವಲ ಶತ್ರುಗಳ ಬಗ್ಗೆ ಮಾತ್ರವಲ್ಲ, ಚಳವಳಿಯನ್ನು ಬೆಂಬಲಿಸುವ ನಾಟಕವಾಡುತ್ತಲೇ ಅದನ್ನು ಒಳಗಿಂದಲೇ ದುರ್ಬಲಗೊಳಿಸುವ ಪೊಳ್ಳು ಸ್ನೇಹಿತರ ಬಗ್ಗೆಯೂ ಎಚ್ಚರದಿಂದಿರಬೇಕು. ಏಕೆಂದರೆ, ಕೆಫೀನ್ ಇಲ್ಲದ ಕಾಫಿ ಸಿಗುವ ರೀತಿ, ಆಲ್ಕೋಹಾಲ್ ಇಲ್ಲದ ಬೀರಿನಂತೆ, ಕೊಬ್ಬಿಲ್ಲದ ಐಸ್‌ಕ್ರೀಮಿನಂತೆ ಅವರು ಹೋರಾಟಗಳನ್ನು ನಿರುಪದ್ರವಿ ನೈತಿಕ ಹಪಹಪಿಕೆಯ ಮಟ್ಟಕ್ಕೆ ಇಳಿಸಿಬಿಡುತ್ತಾರೆ."

- ಸ್ಲಾವೋಜ್ ಜಿಜೆಕ್



"ಕರ್ನಾಟಕದ ಬಹುಪಾಲು ದಲಿತ ಸಂಶೋಧನೆಗಳು ಪದವಿಗಾಗಿ ಮತ್ತು ಅಕಾಡೆಮಿಕ್ ಕಾರಣಕ್ಕಾಗಿ ನಡೆಯುತ್ತಿವೆ. ಇವುಗಳಲ್ಲಿ ಹೆಚ್ಚಿನವು ದಲಿತ ಸಾಹಿತ್ಯ ಕೇಂದ್ರಿತ ಅಧ್ಯಯನಗಳು. ಸದ್ಯದ ಬದುಕಿನ ಕಟುವಾಸ್ತವಗಳನ್ನು ಹುಡುಕುವ ಅಧ್ಯಯನಗಳ ಸಂಖ್ಯೆ ವಿರಳ. ಇಂತಹ ಅಧ್ಯಯನಗಳು ಪದವಿಯ ಅಕಾಡೆಮಿಕ್ ಚೌಕಟ್ಟಿನ ಅಧ್ಯಯನದೊಳಗೆ ದಲಿತ ಬದುಕನ್ನು ತುರುಕುತ್ತವೆ. ಹೀಗೆ ಬಲವಂತವಾಗಿ ತುರುಕಿದ ಕಾರಣ ಸಾಂಪ್ರದಾಯಿಕವಾಗಿ ನೀಡುವ ಫಲಿತವನ್ನೇ ದಲಿತ ಸಂಶೋಧನೆಗಳು ನೀಡುತ್ತವೆ. ಹಾಗಾಗಿ ದಲಿತರ ನಿಜ ಬದುಕನ್ನು ಕಾಣಿಸುವಲ್ಲಿ ಇಂತಹ ಸಂಶೋಧನೆಗಳು ಸೋಲುತ್ತಿವೆ."

- ಅರುಣ್ ಜೋಳದ ಕೂಡ್ಲಗಿ
(ಯುವ ಲೇಖಕ)

ನಂಬಿದ್ರೆನಂಬಿ ಬಿಟ್ರೆಬಿಡಿ

"ವಿದ್ಯುತ್ ಪೋಲು ಮತ್ತು ಕಳ್ಳತನ ತಡೆಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ವಿದ್ಯುತ್ ಅಭಾವ ತೀವ್ರವಾಗಿದ್ದು ನಾಗರಿಕರು ಅನಗತ್ಯವಾಗಿ ವಿದ್ಯುತ್ ಬಳಕೆ ಕಡಿಮೆ ಮಾಡಬೇಕು. ಹವಾನಿಯಂತ್ರಿತ ವ್ಯವಸ್ಥೆಗೆ ಕಡಿವಾಣ ಹಾಕಬೇಕು."

- ಶೋಭಾ ಕರಂದ್ಲಾಜೆ

"ಬಜೆಟ್ ಮಂಡನೆಯಾಗಿ ತಿಂಗಳಾಗುತ್ತಾ ಬಂದಿದೆ. ಬಜೆಟ್‌ನಲ್ಲಿ ಹೊಸದಾಗಿ ಹಲವಾರು ಕಾರ್ಯಕ್ರಮಗಳ ಘೋಷಣೆಯನ್ನೂ ಮಾಡಲಾಗಿದೆ. ಅದರಂತೆ ಏಪ್ರಿಲ್ 1 ರಿಂದ ಜಾರಿಗೆ ಬರಬೇಕಾದ ಬಡ್ಡಿ ರಹಿತ ಸಾಲ, ಬಿತ್ತನೆ ಬೀಜಕ್ಕೆ ಸಬ್ಸಿಡಿ, ವಾಜಪೇಯಿ ಆರೋಗ್ಯ ಶ್ರೀ, ಸುವರ್ಣ ಭೂಮಿ ಯೋಜನೆ, ಪಿಂಚಣಿ ಹೆಚ್ಚಳ ಸೇರಿದಂತೆ ಪ್ರಮುಖ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಇನ್ನೂ ಆದೇಶ ಹೊರಬಿದ್ದಿಲ್ಲ. ಜಡ್ಡುಗಟ್ಟಿದ ಆಡಳಿತ ಯಂತ್ರಕ್ಕೆ ಇದು ಕನ್ನಡಿ ಹಿಡಿದಂತಿದೆ."

- ಪತ್ರಿಕಾ ವರದಿ

"ಸೌಹಾರ್ದಯುತ ಮಾತುಕತೆಗೆ ಸಿಎಂ ಕರೆದಿರುವುದರಿಂದ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಗಿದೆ. ರೈತರ ಸಮಸ್ಯೆಗಳಿಗೆ ಸರಕಾರ ಸ್ಪಂದಿಸದಿದ್ದರೆ ಚಳವಳಿ ಉಗ್ರರೂಪ ತಾಳುತ್ತದೆ. ಪ್ರತಿ ಜಿಲ್ಲೆಯಲ್ಲೂ ಜೈಲ್ ಭರೋ ನಡೆಸಲಾಗುವುದು."

- ಕೋಡಿಹಳ್ಳಿ ಚಂದ್ರಶೇಖರ್

ೋಳುವಾರು ಅವರ ಮುತ್ತುಪ್ಪಾಡಿಯಲ್ಲಿ ಒಂದು ಮಧ್ಯಾಹ್ನ

ಕಂಡಹಾಗೆ



• ಗೌರಿ ಲಂಕೇಶ್

ೋಳುವಾರು ಅವರು ಬರೆದಿರುವ 'ಸ್ವಾತಂತ್ರ್ಯದ ಎಂಬ ಬೃಹತ್ ಕಾದಂಬರಿಯ ಕೊನೆಯ 1086 ಓದಿ ಮುಗಿಸಿದಾಗ "ಅಯ್ಯೋ, ಮುಗಿದೇ ಯಿತಾ?" ಎಂದು ನನಗೆ ಅನ್ನಿಸಿತು ಎಂದರೆ ನಿಮಗೆ ಆಗಬಹುದು. ಆದರೆ ಅದು ನಿಜ. ಮೊದಲನೆ ಂದ ಕೊನೆಯ ಪುಟದ ತನಕ ಆರಾಮಾಗಿ ಕೊಂಡು ಹೋಗುವ ಈ ಕಾದಂಬರಿಯನ್ನು ಅಷ್ಟು ಬರೆದಿದ್ದಾರೆ ಬೋಳುವಾರು. ಎರಡು ವಾರಗಳ ಈ ಕಾದಂಬರಿಯು ಅದೆಷ್ಟು ಮಾನವೀಯವಾಗಿದೆ, ಹೃದಯಸ್ಪರ್ಶಿಯಾಗಿದೆ ಎಂದು ವಿವರವಾಗಿ ದ್ದು ನಿಮಗೆ ನೆನಪಿರಬಹುದು.

ಜವಾಗಲೂ ಈ ಕಾದಂಬರಿಯಲ್ಲಿರುವ ಮುತ್ತುಪ್ಪಾಡಿ ಕಾಲ್ಪನಿಕ ಊರು ಮುತ್ತಿನಂತಹ ಊರು. ಬರಿಯಲ್ಲಿ ಒಮ್ಮೆ ಚಾಂದಜ್ಜ ತನ್ನ ಮೊಮ್ಮಗಳು ಾಳಿಗೆ "ನಿನಗೆ ಗೊತ್ತಿಲ್ಲ ಮಗು, ಇಲ್ಲಿ ಇರುವಷ್ಟು ರು ಜನರು ಎಲ್ಲಿಯೂ ಇರಲಿಕ್ಕೆ ಸಾಧ್ಯವಿಲ್ಲ. ಹುವಿನ ಸೃಷ್ಟಿಯಲ್ಲಿ ಜನ್ನತ್ ಅಂತ ಇದ್ದರೆ ಅದು ತ್ತುಪ್ಪಾಡಿ ಮಾತ್ರ. ನಾನು ಈ ಊರನ್ನು ಹೋಗುವುದು ಖಬರ್ ಗುಂಡಿಗೆ ಮಾತ್ರ ಮಗು" ತ್ತಾನೆ. ಆ ಊರು ಅಷ್ಟು ಚಂದವಾದದ್ದು. ಅಲ್ಲಿ ಿಗೂ ಅನ್ಯಾಯವಾಗದಂತೆ, ಊರಿನ ವಿವಿಧ ದಾಯಗಳ ನಡುವೆ ಬಿರುಕುಗಳು ಮೂಡದಂತೆ ಕೆ ವಹಿಸುವ ಹಿರಿಯರು ಆ ಊರಿನಲ್ಲಿದ್ದಾರೆ.

ಇವತ್ತು ನಮ್ಮ ಎಲ್ಲ ಊರು-ಕೇರಿಗಳು ನಮ್ಮ ೀಯದಂತೆ, ನಮ್ಮ ಸಮಾಜದಂತೆ ಗಬ್ಬೆದ್ದು ಗುತ್ತಿರುವಾಗ ಮುತ್ತುಪ್ಪಾಡಿ ಒಂದು ಆದರ್ಶದಂತೆ ಕಣ್ಣೆದುರು ನಿಲ್ಲುತ್ತದೆ. ಹೌದು, ಇದೊಂದು ಕಾಲ್ಪನಿಕ), ಅಲ್ಲಿನ ಆಗುಹೋಗುಗಳನ್ನು ಕಾದಂಬರಿಕಾರ ಬೇಕಾದಂತೆ ನಿಗ್ರಹಿಸಬಹುದು, ಆದ್ದರಿಂದಲೇ ಅದು ರ್ಶವಾಗಿ ಉಳಿಯುತ್ತದೆ ಎಂದು ವಾದಿಸಬಹುದು. ಯಾವುದೇ ಒಂದು ಉತ್ತಮ ಬರಿಯಲ್ಲಿ ಎಲ್ಲವೂ ಅದರ ಿನ ನಿಯಂತ್ರಣದಲ್ಲಿರುವುದಿಲ್ಲ ಬದು ಎಲ್ಲರಿಗೂ ಗೊತ್ತು. ದ್ದರೂ ಮುತ್ತುಪ್ಪಾಡಿ ಸ್ವರ್ಗಕ್ಕೆ ಾಗಿ ನಿಲ್ಲುವುದಕ್ಕೆ ಕಾರಣ ಳುವಾರು ಅವರ ಸ್ವಚ್ಛ ಮನಸ್ಸು ದು ಸ್ಪಷ್ಟ. ಆದ್ದರಿಂದ ಅವರಂತೆ ಶೂ ಸ್ವಚ್ಛ ಮನಸ್ಸಿನವರಾದರೆ ಸುತ್ತಲಿನ ಸಮಾಜದಲ್ಲಿ, ುಕೇರಿಗಳಲ್ಲಿ ಮುತ್ತುಪ್ಪಾಡಿ ರುವ ನೆಮ್ಮದಿ, ಸಹಬಾಳ್ವೆ, ನಿಷ್ಠೆಗಳನ್ನು ಸ್ಥಾಪಿಸಲಾಗು ಲ್ಲವೆ ಎಂದು ಓದುಗನಿಗೆ ಅನ್ನಿಸುತ್ತದೆ.

ಅಂದಮಾತ್ರಕ್ಕೆ ಈ ಕಾದಂಬರಿ ರುವ ಎಲ್ಲರೂ ಸ್ವಚ್ಛಹಸ್ತರು, ನು ಪಾಲಕರು, ತಪ್ಪೇ ದವರು ಎಂದರ್ಥವಲ್ಲ. ಅವರು ನಿಮ್ಮಂತೆ ಸಾಮಾನ್ಯ ಜನರು. ್ ಅಲಿ ಎಷ್ಟೇ ಒಳ್ಳೆಯವನಾಗಿದ್ದರೂ ಸರ್ಕಾರಿ ಯನ್ನು ತನ್ನ ತೋಟದೊಂದಿಗೆ ಸೇರಿಸಿಕೊಂಡು ವಾಗಿ ಬೇಲಿ ಹಾಕಿಕೊಂಡಿರುವವನು. ದೊಡ್ಡವಳಾದ ರಿಝೀನತ್ ತನ್ನ ಬುದ್ಧಿ ಮಾಂದ್ಯ ಸಹೋದರನನ್ನೂ ೊಳ್ಳುವವನನ್ನು ಮಾತ್ರ ಮದುವೆಯಾಗುವೆ ಎಂದು ಮಾಡಿದರೂ ಆಕೆ ಚಿಕ್ಕವಳಾಗಿದ್ದಾಗ ಆ ಪ್ರಾಯಕ್ಕೆ ಕೆ ಚೆಲ್ಲುಚೆಲ್ಲಾಗಿದ್ದ ಯುವತಿ. ಬರ್ಕ್ಲ ಉಸ್ಮಾನ್ ಬ ಜಮಾತನ್ನು ತನ್ನ ಸ್ವಹಿತಾಸಕ್ತಿಗೆ ಬಳಸಲು ಿಸಿದರೂ ಕೊನೆಗೆ ಸರಿದಾರಿಗೆ ಬರುವ ಮನುಷ್ಯ. ಮಸೀದಿಯನ್ನು ಕೆಡವಿ ಅಲ್ಲಿ ರಾಮಮಂದಿರವನ್ನು ಸಬೇಕೆಂದು ಅಯೋಧ್ಯೆಗೆ ಹೊರಟವರ ಜೊತೆ ಗುವ ಚಂದ್ರಣ್ಣ ಬಾಬ್ರಿ ಮಸೀದಿಯ ಗೋಡೆಯ ತುಂಡಿನೊಂದಿಗೆ ವಾಪಸ್ ಬರುತ್ತಾನೆ. ಆದರೆ ಹಾಗೆ ರುಗಿದ ನಂತರ ತನ್ನ ಊರಿನ ರೊಟ್ಟಿಪಾತುಮ್ಮಳನ್ನು ತನ್ನ ಬಗ್ಗೆಯೇ ಜಿಗುಪ್ಸೆ ಪಡುತ್ತಾನೆ. ಆದಕ್ಕೇ ದ್ದು, ಈ ಕಾದಂಬರಿಯಲ್ಲಿರುವ ಜನರು ಕಾಲ್ಪನಿಕ ಗಳಲ್ಲ, ಬದಲಾಗಿ ನಮ್ಮ ಸುತ್ತಲೂ ಇರುವಂತಹವರು; ಆಗಿರುವಂತಹವರು.

ಮುತ್ತುಪ್ಪಾಡಿ ಮತ್ತು ಅಲ್ಲಿರುವ ಜನ ಮತ್ತು ಅವರ ನ್ನು ಬಿಂಬಿಸುವ ಒಂದು ಚಿಕ್ಕಭಾಗವನ್ನು ಇಲ್ಲಿ ತ್ತೇನೆ....

ಅದು ದೂರದರ್ಶನದಲ್ಲಿ 'ರಾಮಾಯಣ' ಗೊಳ್ಳು ತ್ತಿದ್ದ ಕಾಲ. ಆ ಧಾರಾವಾಹಿ ಅದೆಷ್ಟು ಯವಾಗಿತ್ತೆಂದರೆ ಭಾರತದ ಬಹಳಷ್ಟು ಊರುಗಳಲ್ಲಿಯಂತೆ ಮುತ್ತುಪ್ಪಾಡಿ ಯಲ್ಲೂ ಎಲ್ಲ ಧರ್ಮದವರೂ ಅದನ್ನು ತಪ್ಪದೇ ನೋಡು ತ್ತಿದ್ದರು. ಆದ್ದರಿಂದ ಅವತ್ತಿನ ಕಂತು - ಸೀತೆ ಅಗ್ನಿಪರೀಕ್ಷೆಗೆ ಒಳಪಡುವ ಭಾಗ - ಪ್ರಸಾರವಾದ ನಂತರವೇ ಬಡ ರಿಝೀನತ್ ಮತ್ತು ಸಾಹುಕಾರ ಅಸ್ಲಮ್ ನಡುವಿನ ಮದುವೆ ಕಾರ್ಯಕ್ರಮ ನಡೆಯುತ್ತದೆ. ಆ ಮದುವೆಗೆ ಊರಿನ ಎಲ್ಲರೂ ಹಾಜರಾಗಿರುತ್ತಾರೆ.

ಮದುವೆ ಸಮಾರಂಭ ಮುಗಿದನಂತರ ಚಾಂದ್ ಅಲಿ ಮತ್ತು ಅನಂತಣ್ಣ ಪಟ್ಟಾಂಗ ಕೂರುತ್ತಾರೆ. ಆಗ ಅನಂತಣ್ಣ ಬೇಕಂತಲೇ ಚಾಂದ್ ಅಲಿಯನ್ನು ಚುಡಾಯಿಸಲು "ನಿಮ್ಮ ದೇವರು ಅಲ್ಲಾಹು ಏನೇನೂ ಪ್ರಯೋಜನವಿಲ್ಲ ಅಲೀಯವರೇ" ಎನ್ನುತ್ತಾರೆ.


"ಅದ್ಯಾಕೆ ಅನಂತಣ್ಣ ಹಾಗೆ ಹೇಳ್ತಾ ಇದ್ದೀರಿ?" ಎಂದು ಚಾಂದ್ ಅಲಿಯ ಸ್ನೇಹಿತ ರಾಘವ ಪಂಡಿತ ಕೇಳುತ್ತಾನೆ.

ಆಗ ಅನಂತಣ್ಣ ಹೀಗೆ ಹೇಳುತ್ತಾರೆ:

"ಇವತ್ತು ಜನ್ನತ್ ಮಹಲಿನಲ್ಲಿ ಆದದ್ದು ಬರೇ ಮದುವೆಯಲ್ಲ. ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗ್ತದೆ ಅಂತ ಹೇಳ್ತಾರಲ್ಲ, ಆದ್ರೆ, ಈ ಮದುವೆ ನಡೆದ ಸ್ಥಳವೇ ಸ್ವರ್ಗವಾಗಿಬಿಟ್ಟಿತು ನೋಡಿ. ಅಲ್ಲಿ ಆ ದೇವಲೋಕದ ಅಗ್ನಿ ಪರೀಕ್ಷೆಯಲ್ಲಿ ಸೀತೆ ಗೆದ್ದಳು; ಇಲ್ಲಿ ಭೂಲೋಕದ ಪರೀಕ್ಷೆಯಲ್ಲಿ ಈ ಹುಡುಗಿ ಗೆದ್ದಳು. ಅದಕ್ಕೇ ಅಲ್ವಾ? ಅಸ್ಲಮನ ಕೈಗೆ ಅಷ್ಟು ಬೆಲೆಯ ವಾಚು ಕಟ್ಟುವಂತೆ ದೇವರು ಆ ಸೋಮನಾಥನಿಗೆ ಬುದ್ಧಿ ಕೊಟ್ಟದ್ದು? ನಮ್ಮ ಕಟ್ಟೆ ಆಚಾರ್ರು ಬಂದು ಉಂಗುರ ಕೊಟ್ಟು ಕೃತಾರ್ಥ ರಾದವರಂತೆ ಕಣ್ಣೊರೆಸಿಕೊಂಡು ಹೋದದ್ದೂ? ಆದ್ರಿಂದ್ಲೆ ಅಲ್ವಾ ಕಳೆದ ಎಲೆಕ್ಷನ್‌ನಲ್ಲಿ ಹಾವು ಮುಂಗುಸಿಗಳಂತೆ ಜಗಳ ಮಾಡ್ತಿದ್ದ ಪುತ್ತೂರಿನ ಆ ಇಬ್ರು ವಕೀಲ್ರುಗಳೂ ಒಟ್ಟೊಟ್ಟಿಗೆ ಒಂದೇ ಕಾರಲ್ಲಿ ಬಂದದ್ದೂ? ಅದೆಲ್ಲ ಹೋಗ್ಲಿ, ಆ ಉಸ್ಮಾನ್ ಸಾಹೇಬ್ರು ಅವ್ರ ಆಸ್ತಿಯನ್ನೆಲ್ಲ ಹೆಣ್ಣುಮಗಳ ಹೆಸ್ರಿಗೆ ಉಯಿಲು ಬರೆದದ್ದೂ? ಒಳ್ಳೆಯ ಸಂಗತಿಗಳೆಲ್ಲ ಒಂದರ ಹಿಂದೆ ಮತ್ತೊಂದು ನಡೆದದ್ದಕ್ಕೆ ಏನೂ ಕಾರಣವೇ ಇಲ್ಲ ಅಂತ ಹೇಳ್ತೀರಾ? ಸ್ವರ್ಗದಲ್ಲಿ ಇದಕ್ಕಿಂತ ಒಳ್ಳೆಯ ಜನ ಇರ್ತಾರಾ?" ಖಂಡಿತಾ ಇಲ್ಲ, ಆದ್ರೂ ನನ್ಗೆ ಬೇಜಾರು ಯಾಕೆ ಗೊತ್ತುಂಟಾ? ಮಾತು ನಿಲ್ಲಿಸಿ ಚಾಂದಜ್ಜನವರನ್ನು ಅಣಕಿಸುವವರಂತೆ ದಿಟ್ಟಿಸಿದ ಅನಂತಣ್ಣ "ಈ ಅಲೀ ಸಾಹೇಬ್ರು, ಅಲ್ಲಾನ ಒಟ್ಟಿಗೆ ಬೇರೆ ದೇವತೆಗಳೂ ಇಲ್ಲ, ಅವ್ನ ಒಂಟಿಯಾಗಿಯೇ ಇರುವುದು ಅಂತ ನಾನೂ ಒಪ್ತೇನೆ. ಆದ್ರೂ ಇರುವ ಒಬ್ಬನಾದ್ರೂ ಬಂದು, ನಿಖಾ ಮಂಟಪದ ಮೇಲೆ ಹೂಮಳೆ ಸುರಿಸ್ಬೇಕಿತ್ತಾ ಬೇಡ್ವಾ?" ಎಂದು ತೀರಾ ಗಂಭೀರವಾಗಿಯೇ ಪ್ರಶ್ನಿಸಿದ್ದರು.

ಅಷ್ಟೊ ಹೊತ್ತು ಸುಮ್ಮನಿದ್ದ ಚಾಂದಜ್ಜ ತಟ್ಟನೆ, "ಈ ಮಳೆಗಾಲದ ದಿನ ಮದುವೆಯ ಊಟ ಮುಗಿಯುವವರೆಗೆ ಅವ್ನ ಮಳೆ ಸುರಿಸ್ಲಿಲ್ಲ ನೋಡಿ; ಅದಕ್ಕಿಂತ ದೊಡ್ಡ ಉಪಕಾರ ಎಂಥದ್ದು ಬೇಕು ಅನಂತಣ್ಣಾ?" ಎಂದು ಪ್ರಶ್ನಿಸಿದಾಗ, ಗೆಳೆಯನ ಜಾಣ್ಮೆಯನ್ನು ಮೆಚ್ಚಿದ ಪಂಡಿತರ ಜೊತೆಗೆ ಅನಂತಣ್ಣನವರೂ ಜೋರಾಗಿ ನಕ್ಕಿದ್ದರು...

ಈ ಕಾದಂಬರಿ ಇಷ್ಟವಾಗುವುದಕ್ಕೆ ಮುಖ್ಯ ಕಾರಣಗಳು ಹಲವು. ಮೊದಲನೆಯದಾಗಿ ಇದು ಉದ್ದಕ್ಕೂ ಆಶಾವಾದಿ, ಭಾವನೆಯನ್ನು ಪ್ರೋತ್ಸಾಹಿಸುತ್ತಾ ಹೋಗುವುದು. ಎರಡನೆಯದಾಗಿ ಇದರಲ್ಲಿ ಹೆಚ್ಚಾಗಿ ಬ್ಯಾರಿ ಮುಸಲ್ಮಾನರ ಪಾತ್ರಗಳೇ ಇದ್ದರೂ ಅವರೆಲ್ಲ ನಮ್ಮಂತೆ ಬದುಕಿನಲ್ಲಿ ಕಷ್ಟ, ನಷ್ಟ, ನೋವು, ನಲಿವು, ಬೇಸರ, ಕನಸು, ಆಶೆ, ನಿರಾಶೆ, ಎಲ್ಲವನ್ನೂ ಅನುಭವಿಸುವವರು. ಎಲ್ಲಕ್ಕಿಂತ ಮುಖ್ಯವಾಗಿ ಇದು ತನ್ನ ಓದುಗರಲ್ಲಿ ಮನುಷ್ಯತ್ವವನ್ನು ಉದ್ದೀಪಿಸುವ ಕೃತಿ.



ಬೋಳುವಾರು ಮತ್ತು ಅವರ ಮೊಮ್ಮಗನ ಜೊತೆ ಗೌರಿ

ಇದನ್ನು ಓದಿ ಮುಗಿಸಿದ ನಂತರ ಕಳೆದ ಶುಕ್ರವಾರ ನಾನು ಮತ್ತು ಶಿವಸುಂದರ್ ಬೋಳುವಾರು ಅವರನ್ನು ಭೇಟಿ ಆಗಲು ಅವರ ಮನೆಗೆ ಹೋದೆವು. ಬೋಳುವಾರು ಅವರ ಜೀವನ ಸಂಗಾತಿ ಜುಬೇದಾ ಅವರು ಅವತ್ತು ಸೊಗಸಾದ ಬಿರಿಯಾನಿ, ಚಿಕನ್ ಕಬಾಬ್ ಇತ್ಯಾದಿಗಳನ್ನು ಮಾಡಿದ್ದರು. ಬೋಳುವಾರು ಅವರ ಮಗಳು, ಅಳಿಯ, ಮೊಮ್ಮಗ ಕೂಡ ಬಂದಿದ್ದರು. ಎಲ್ಲರೂ ಜೊತೆಯಾಗಿ ಊಟ ಮಾಡಿದೆವು.

ಬೋಳುವಾರು ಅವರು ಈ ಹಿಂದೆ ಹಲವಾರು ಕತೆಗಳನ್ನು, ಒಂದು ಕಾದಂಬರಿಯನ್ನು, ಮಕ್ಕಳ ಸಾಹಿತ್ಯವನ್ನು ಬರೆದಿದ್ದಾರೆ. ಹಲವಾರು ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ಆದರೆ 1995 ರಲ್ಲಿ 'ಸ್ವಾತಂತ್ರ್ಯದ ಓಟ' ಎಂಬ 24 ಪುಟಗಳ ಕತೆಯನ್ನು ಬರೆದ ನಂತರ ಅವರು ಏನನ್ನೂ ಬರೆಯಲಿಲ್ಲ.

ಊಟವಾದ ನಂತರ ನಾವೆಲ್ಲ ಮಾತನಾಡುತ್ತ ಕೂತಿದ್ದಾಗ ಅವರು ಕಳೆದ 17 ವರ್ಷಗಳಿಂದ ಯಾಕೆ ಏನನ್ನೂ ಬರೆಯಲಿಲ್ಲ ಎಂದು ಕೇಳಿದ್ದಕ್ಕೆ ಬೋಳುವಾರು ಅವರು ಕೊಟ್ಟ ಉತ್ತರ: "ಆ ಸಣ್ಣ ಕತೆಯಲ್ಲಿ ದೇಶದ ವಿಭಜನೆ ಸಂದರ್ಭದಲ್ಲಿ ನಾನು ಪಾಕಿಸ್ತಾನದಿಂದ ಚಾಂದ್ ಅಲಿ ಎಂಬ ಯುವಕನನ್ನು ಭಾರತಕ್ಕೆ ಕರೆ ತಂದು ಅವನನ್ನು ದೆಹಲಿಯ ರೈಲ್ವೆ ಪ್ಲಾಟ್‌ಫಾರಮ್‌ನಲ್ಲಿ ಬಿಟ್ಟುಬಿಟ್ಟಿದ್ದೆ. ಅದಾದ ನಂತರ ನಾನು ಏನನ್ನೇ ಬರೆಯಲು ಹೋದರೂ ಆ ಚಾಂದ್ ಅಲಿ 'ನಾನೆಲ್ಲಿಗೆ ಹೋಗುವುದು?' ಎಂದು ನನ್ನನ್ನು ಕೇಳುತ್ತಿದ್ದ. ಆದ್ದರಿಂದ ನಾನು ಬೇರೆ ಏನನ್ನೂ ಬರೆಯದೆ ಅವನ ಬಗ್ಗೆಯೇ ಚಿಂತಿಸುತ್ತಿದ್ದೆ. ಈಗ ಅವನ ಕತೆಯನ್ನು ದೆಹಲಿಯ ರೈಲ್ವೆ ಪ್ಲಾಟ್‌ಫಾರಮ್‌ನಿಂದ ಮುಂದುವರೆಸಿ ಹೇಳಿದ್ದೇನೆ..."

ನಾವು ಕೇಳಿದ ಮುಂದಿನ ಪ್ರಶ್ನೆ: "ಚಾಂದ್ ಅಲಿ ಜೊತೆ ತನ್ವೀರ್ ಎಂಬ ಯುವತಿಯೂ ಭಾರತಕ್ಕೆ ಬರುತ್ತಾಳೆ. ಆದರೆ ಚಾಂದ್ ಅಲಿಗೆ ಸಿಗುವಂತಹ ಮುತ್ತುಪ್ಪಾಡಿಯನ್ನು ಆಕೆಗೆ ನಿರಾಕರಿಸಿದ್ದು ಯಾಕೆ?"

ಬೋಳುವಾರು: "ಆಕೆಯ ಕತೆಯನ್ನೂ ಹೇಳುತ್ತಾ ಹೋಗಿದ್ದರೆ ಈ ಕಾದಂಬರಿ 1,500 ಪುಟವನ್ನು ಮೀರುತ್ತಿತ್ತು. ಜೊತೆಗೆ ಚಾಂದ್ ಅಲಿಯ ಮುತ್ತುಪ್ಪಾಡಿ ಗೊತ್ತಿರುವಷ್ಟು ಚೆನ್ನಾಗಿ ಆಕೆಯ ಊರಿನ ಪರಿಚಯ ನನಗಿಲ್ಲ!"

ನಾವು: "ಈ ಕಾದಂಬರಿಯಲ್ಲಿ ನೀವು ಸ್ವತಂತ್ರ ಭಾರತದ ಮೊದಲ ಐವತ್ತು ವರ್ಷಗಳ ಇತಿಹಾಸವನ್ನು, ಪ್ರಮುಖ ವಿದ್ಯಮಾನಗಳನ್ನು, ಸಾಮಾಜಿಕ ಪಲ್ಲಟಗಳನ್ನು ಬಿಂಬಿಸಲು ಪ್ರಯತ್ನಿಸಿದ್ದೀರಿ. ಅದಕ್ಕೆ ಎಷ್ಟು ಸಿದ್ಧತೆ ಬೇಕಾಯಿತು?"

ಬೋಳುವಾರು: "ತುಂಬಾ ಸಿದ್ಧತೆ ಬೇಕಾಯಿತು. ಕತೆ ಜೊತೆಗೆ ಅಂದಿನ ವಿದ್ಯಮಾನಗಳನ್ನು ಹೊಂದಿಸಿ ಬರೆದಿದ್ದೇನೆ. ಹಜ್ ಒಂದನ್ನು ಬಿಟ್ಟು ಈ ಕಾದಂಬರಿಯಲ್ಲಿ ಬರುವ ಎಲ್ಲಾ ಊರುಗಳನ್ನು ಸುತ್ತಿದ್ದೇನೆ, ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಕಾದಂಬರಿಯಲ್ಲಿ ಒಮ್ಮೆ ಅನಂತಣ್ಣನ ಪಾತ್ರ 'ಹೊಸ ದಿಗಂತ' ಪತ್ರಿಕೆಯಿಂದ ಒಂದು ವರದಿಯನ್ನು ಓದುತ್ತಾನೆ. ನಾನು ಆ ಪತ್ರಿಕೆಯ ಪ್ರತಿಯಿಂದಲೇ ಆ ವರದಿಯನ್ನು ಯಥಾವತ್ತಾಗಿ ಬರೆದಿದ್ದೇನೆ."

ನಾವು: "ನಿಮ್ಮ ಮುತ್ತುಪ್ಪಾಡಿ ದಕ್ಷಿಣ ಕನ್ನಡದ ಒಂದು ಊರು. ಅದೇ ದಕ್ಷಿಣ ಕನ್ನಡದಲ್ಲಿ ಬೀಡಿ ಕಾರ್ಖಾನೆ, ಹೆಂಚಿನ ಕಾರ್ಖಾನೆಗಳಿಂದಾಗಿ ಸಾಮಾಜಿಕ ಬದಲಾವಣೆಗಳಾದವು. ಅಲ್ಲಿನ ರಾಜಕೀಯದಲ್ಲಿ ಎಡಪಂಥೀಯರ ಪ್ರಭಾವವೂ ಹೆಚ್ಚಾಗಿತ್ತು. ಆದರೆ ಅದೆಲ್ಲ ಕಾದಂಬರಿಯಲ್ಲಿ ವ್ಯಕ್ತವಾಗಿಲ್ಲ ಯಾಕೆ?"

ಬೋಳುವಾರು: "ಇದು ಒಂದು ಕತೆ. ಅದಕ್ಕೆ."

ನಾವು: "ನಿಮ್ಮ ಬಹಳಷ್ಟು ಪಾತ್ರಗಳು ಜೀವನಕ್ಕೆ ಹತ್ತಿರವಾಗಿವೆ. ಅದು ಹೇಗೆ ಸಾಧ್ಯವಾಯಿತು?"

ಬೋಳುವಾರು: "ಅದಕ್ಕೆ ಕಾರಣ ಅಲ್ಲಿರುವ ಪಾತ್ರಗಳು ನಿಜ ಜೀವನದಲ್ಲೂ ಇದ್ದದ್ದು ಇರಬಹುದು. ಉದಾಹರಣೆಗೆ ನನ್ನ ಊರಿನಲ್ಲೇ ಒಮ್ಮೆ ಒಬ್ಬ ಮೌಲ್ವಿ ಅಪಘಾತದಲ್ಲಿ ತೀರಿಹೋದರು. ಆಗ ಊರಿನ ಜನರೇ ಮುಂದೆ ನಿಂತು ಆತನ ಯುವ ಮಡದಿಗೆ ಮತ್ತೊಂದು ಮದುವೆಯನ್ನು ಮಾಡಿಸಿದ್ದರು. ಆ ಪ್ರಸಂಗವು ಹಲವು ಬದಲಾವಣೆಗಳೊಂದಿಗೆ ಕಾದಂಬರಿಯಲ್ಲಿ ಮೂಡಿಬಂದಿದೆ."

ನಾವು: "ಚಾಂದ್ ಅಲಿ ಪಾತ್ರಕ್ಕೆ ಮಾಡೆಲ್ ಯಾರು?"

ಬೋಳುವಾರು: "ನನ್ನ ಅಪ್ಪ. ನಾವು ಚಿಕ್ಕವರಾಗಿದ್ದಾಗ ನನ್ನ ಅಮ್ಮನ ಕಡೆ ಹಲವಾರು ಸಂಬಂಧಿಕರಿದ್ದರು. ಆದರೆ ಅಪ್ಪನ ಕಡೆಯ ಸಂಬಂಧಿಕರೇ ಇರಲಿಲ್ಲ. ಆತ ಎಲ್ಲಿಯವರು, ಅವರ ಅಪ್ಪ-ಅಮ್ಮ ಯಾರು ಎಂಬುದೇ ನಮಗೆ ಗೊತ್ತಿರಲಿಲ್ಲ. ಒಂದು ರೀತಿಯಲ್ಲಿ ಚಾಂದ್ ಅಲಿ ಕೂಡ ಹಾಗೆಯೇ."

ನಾವು: "ನಿಮ್ಮ ಕತೆಯಲ್ಲಿರುವ ಎಲ್ಲಾ ಬ್ಯಾರಿ ಮಹಿಳೆಯರು ಅಪ್ರತಿಮ ಸುಂದರಿಯರಾಗಿದ್ದಾರಲ್ಲ?"

ಬೋಳುವಾರು: "ಹೌದು ಕಣ್ರೀ. ಬ್ಯಾರಿ ಮಹಿಳೆಯರು ಬೆಳ್ಳಗೆ, ಸುಂದರವಾಗಿರುತ್ತಾರೆ. ಆದರೆ ಬ್ಯಾರಿ ಪುರುಷರ ಬಗ್ಗೆ ಹಾಗೆ ಹೇಳುವುದಕ್ಕೆ ಬರಲ್ಲ!"

ನಾವು: "ತಮಾಷೆಗೆ ಈ ಪ್ರಶ್ನೆ. ನಿಮ್ಮ ಈ ಕಾದಂಬರಿಯಲ್ಲಿ ಹತ್ತಾರು ದಂಪತಿಗಳಿದ್ದಾರೆ. ಹಲವು ಪ್ರೇಮಕತೆಗಳೂ ಇವೆ. ಕನ್ನಡದ ಬೇರೆ ಪ್ರಮುಖ ಲೇಖಕರಿಗೆ ಇಂತಹ ಪಾತ್ರಗಳು ಮತ್ತು ಸನ್ನಿವೇಶಗಳು ಸಿಕ್ಕಿದ್ದರೆ ಕನಿಷ್ಠ ಐದಾರು ಬೆಡ್ ರೂಮ್ ದೃಶ್ಯಗಳಿರುತ್ತಿದ್ದವು. ಆದರೆ ಅಂತಹದ್ದಕ್ಕೆಲ್ಲ ನೀವು ನಿಷೇಧ ಹೇರಿದ್ದೀರಲ್ಲ ಯಾಕೆ?!"

ಬೋಳುವಾರು: "ನನ್ನ ಯಾವ ಕತೆಯಲ್ಲೂ ಅಂತಹ ದೃಶ್ಯಗಳಿಲ್ಲ ಕಣ್ರೀ. ಅದಕ್ಕೆ ನನಗೆ ಇಬ್ಬರು ಹೆಣ್ಣುಮಕ್ಕಳಿರುವುದೇ ಕಾರಣವಿರಬಹುದು ಅಥವಾ ಅವೆಲ್ಲ ಕತೆಗೆ ಮುಖ್ಯ ಎಂದು ನನಗೆ ಅನ್ನಿಸದೇ ಇರುವುದೂ ಕಾರಣವಾಗಿರಬಹುದು. ಅದಕ್ಕಿಂತ ಮುಖ್ಯ ಯಾವುದು ಗೊತ್ತಾ? ನಾನು ಅರ್ಧ ಪುಟ ಬರೆದು ಹೊರಗೆ ಹೋದರೂ ಸಾಕು ನನ್ನ ಹೆಂಡತಿ ಅದನ್ನು ಓದುತ್ತಾಳೆ. ನಾನು ಅಂತಹದ್ದನ್ನೆಲ್ಲ ಹೇಗೆ ಬರೆಯುವುದು?!"

ನಾವು: "ಈ ಕತೆಯನ್ನು ಓದುವಾಗ ಹಲವಾರು ಕಡೆ ಕಣ್ಣೀರು ಬರುತ್ತದೆ..."

ಬೋಳುವಾರು: "ಇದನ್ನು ಬರೆಯುವಾಗ ನಾನೂ ಹಲವಾರು ಬಾರಿ ಕಣ್ಣೀರಿಟ್ಟಿದ್ದೇನೆ. ಆದರೆ ನಾನು ಅಳುತ್ತಿರುವುದು ನನ್ನ ಹೆಂಡತಿಗೆ ಗೊತ್ತಾಗಬಾರದೆಂದು ನಾನು ಬಾತ್‌ರೂಮಿಗೆ ಹೋಗಿ ಮುಖಕ್ಕೆ ನೀರು ಹಾಕಿಕೊಂಡು ಬರುತ್ತಿದ್ದೆ. ನಾನು ತುಂಬ ಭಾವುಕ ಕಣ್ರೀ. ಸಿನಿಮಾ ನೋಡುವಾಗ ನಾನು ಅಳುತ್ತೇನೆ ಗೊತ್ತಾ?"

ನಾವು: "ಈ ಪುಸ್ತಕಕ್ಕೆ ಬಂದಿರುವ ಪ್ರತಿಕ್ರಿಯೆ ನೋಡಿ ಏನನ್ನಿಸುತ್ತೆ?"

ಬೋಳುವಾರು: "ನಾನು ಕಷ್ಟಪಟ್ಟು ಬರೆದದ್ದು ಸಾರ್ಥಕವೆನಿಸುತ್ತದೆ. ಮೊನ್ನೆ ದಕ್ಷಿಣ ಕನ್ನಡದಿಂದ ಹಿಂದೂ ಹಿರಿಯರೊಬ್ಬರು ಫೋನ್ ಮಾಡಿ 'ನಾವು ಬ್ಯಾರಿಗಳನ್ನು ಕೆಟ್ಟದಾಗಿ ನೋಡುತ್ತಿದ್ದೆವು. ಆ ಸಮುದಾಯದವರನ್ನು ನಮ್ಮ ಭಾಷೆಯಲ್ಲಿ ಹೆಣಗಳು ಎಂದು ಕರೆಯುತ್ತಿದ್ದೆವು. ಆದರೆ ನಿಮ್ಮ ಕಾದಂಬರಿ ಓದಿದ ನಂತರ ನೀವೂ ಮನುಷ್ಯರು, ನಿಮಗೂ ಹೆಂಡತಿ, ಮಕ್ಕಳು, ಕನಸು, ಬದುಕು ಇದೆ ಎಂದು ಅರ್ಥವಾಯಿತು. ಅದಕ್ಕೆ ಧನ್ಯವಾದಗಳು' ಎಂದರು. ಇಂತಹ ಹಲವಾರು ಪ್ರತಿಕ್ರಿಯೆಗಳು ಬಂದಿವೆ. ಇದನ್ನು ಓದಿ ಮುಗಿಸಿರುವವರು ಮೆಚ್ಚಿದ್ದಾರೆ. ಅದು ಸಂತೋಷ ಕೊಟ್ಟಿದೆ."

ಬೋಳುವಾರು ಅವರು ತುಂಬಾ ಸರಳ ವ್ಯಕ್ತಿತ್ವದ, ತಮಾಷೆಯ, ಭಾವುಕತೆಯ, ಆದರೆ ಜಾತ್ಯತೀತತೆಗೆ ಬದ್ಧರಾಗಿರುವ ಮನುಷ್ಯ. ಮಾತಿನ ಮಧ್ಯೆ ತಮ್ಮನ್ನೇ ಗೇಲಿ ಮಾಡಿಕೊಳ್ಳುತ್ತಾ, ಪತ್ನಿ ಜುಬೇದಾ ಅವರನ್ನು ಕಿಚಾಯಿಸುತ್ತಾ ರಾಜಕೀಯ ಮತ್ತು ರಾಜಕಾರಣಿಗಳ ಬಗ್ಗೆ ತಮಾಷೆ ಮಾಡುತ್ತಿದ್ದರು. ಸಮಯ ಹೋಗಿದ್ದೇ ಗೊತ್ತಾಗಲಿಲ್ಲ. ಊಟ, ಹಲವಾರು ಟೀ, ಹತ್ತಾರು ವಿಷಯ ಕುರಿತ ಮಾತುಕತೆ, ಬೋಳುವಾರು ಅವರ ಕುಟುಂಬದ ಆತ್ಮೀಯತೆ... ಎಲ್ಲವೂ ಹೇಗಿತ್ತೆಂದರೆ.....

ಹೇಗಿತ್ತೆಂದರೆ....

ನಾವು ಮುತ್ತುಪ್ಪಾಡಿಯಲ್ಲಿದ್ದಂತಿತ್ತು!!!


ಅದಕ್ಕೆ ಬೋಳುವಾರು ಅವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಎಮ್ಮೆಲ್ಲೆ ವಿಶ್ವನಾಥ್ ಕ್ರೌರ್ಯದ ಸ್ಯಾಂಪಲ್ಲುಗಳು

ನಿರ್ಗತಿಕರ ನರಕ ಯಲಹಂಕ

ಬಡ ದಲಿತನನ್ನು ಬೀದಿಪಾಲು ಮಾಡಿ ಆತನ ಮನೆ ನೆಲಸಮಗೊಳಿಸಿ ಅಲ್ಲಿ ತನ್ನ ಬಂಗಲೆಗೆ ಹೂದೋಟ ನಿರ್ಮಿಸಿದ ಬಿಜೆಪಿ ಶಾಸಕ ಅಂತಿದ್ದರೆ ಅದು ವಿಶ್ವನಾಥ್ ಮಾತ್ರ. ಗಣಿ ಲೂಟಿ ಗೈದವರುಂಟು, ಲಂಚಕ್ಕೆ ಕೈಚಾಚಿ ಜೈಲು ಕಂಡವರುಂಟು, ರೇಪ್ ಮಾಡಿ ಜೈಲು ಸೇರಿದವರುಂಟು. ಆದರೆ ಬಡ ದಲಿತನನ್ನು ಬೀದಿಪಾಲು ಮಾಡಿ ಆತನ ಮನೆ ಜಾಗದಲ್ಲಿ ಬಂಗಲೆ ನಿರ್ಮಿಸಿದ ಕೀರ್ತಿಗೆ ಪಾತ್ರನಾಗಿದ್ದು ಯಲಹಂಕದ ಶಾಸಕ ವಿಶ್ವನಾಥ್ ಮಾತ್ರ. ಶಾಸಕನೊಬ್ಬ ಇದಕ್ಕಿಂತ ದುಷ್ಟನಾಗಲು ಸಾಧ್ಯವೆ?

• ರಾ. ಸೋಮನಾಥ್



ದುಷ್ಟ ಶಾಸಕ ವಿಶ್ವನಾಥ್

ರೇಪ್ ಮಾಡಿ ಜೈಲು ಪಾಲಾದ, ಜೈಲು ಪಾಲಾಗದೆ ನರ್ಸ್ ಜೊತೆ ಸಿಕ್ಕಿಬಿದ್ದ, ವಿಧಾನಸಭೆಯಲ್ಲಿ ಬ್ಲೂಫಿಲ್ಮ್ ವೀಕ್ಷಿಸಿದ, ಕೆಐಎಡಿಬಿಗೆ ವಂಚಿಸಿ ಜೈಲು ಸೇರಿದ, ಲಂಚ ತಿಂದು ಜೈಲು ಕಂಡ ಬಿಜೆಪಿ ಶಾಸಕರ ವ್ಯಭಿಚಾರ, ದುರಾಚಾರಗಳ ನಡುವೆ ಇದಕ್ಕೆ ಸರಿಸಮನಾಗಿ ಅನ್ಯಾಯ, ದೌರ್ಜನ್ಯ ಎಸಗಿಯೂ ಸುದ್ದಿಯಾಗದ ಶಾಸಕರದ್ದೇ ಮತ್ತೊಂದು ಗುಂಪಿದೆ.



ಪತ್ನಿ ವಾಣಿಶ್ರೀ ಮತ್ತು ಮಕ್ಕಳೊಂದಿಗೆ ವಿಶ್ವನಾಥ್

ಬಹುಶಃ ಮೇಲ್ಕಂಡವರ್‍ಯಾರೂ ಈ ಮಟ್ಟದ ಕ್ರೂರಿಗಳಾಗಿರಲಿಕ್ಕಿಲ್ಲ. ಆ ಮಟ್ಟದ ಕ್ರೌರ್ಯ ಮತ್ತು ಅಟ್ಟಹಾಸವನ್ನು ಲೆಕ್ಕ ಹಾಕುವುದಾದರೆ, ಆ ಸಾಲಿನಲ್ಲಿ ಮೊದಲ ರ್‍ಯಾಂಕ್ ಅಂತ ನೀಡುವುದಾದರೆ ಆ ಎಲ್ಲಾ ಅರ್ಹತೆ, ಯೋಗ್ಯತೆ, ದಾರ್ಷ್ಟ್ಯ ಯಲಹಂಕದ ಬಿಜೆಪಿ ಶಾಸಕ ಎಸ್.ಆರ್. ವಿಶ್ವನಾಥ್‌ರಲ್ಲಿ ಯಥೇಚ್ಛವಾಗಿದೆ. ಗೆದ್ದು ನಾಲ್ಕು ವರ್ಷಗಳೇ ಸಂದರೂ ಯಲಹಂಕ ಕ್ಷೇತ್ರಕ್ಕಾಗಲಿ, ಅಲ್ಲಿನ ನಾಗರಿಕರಿಗಾಗಲಿ ವಿಶ್ವನಾಥ್ ಮಾಡಿದ ಮಹದುಪಕಾರವೇನೆಂದು ಪಟ್ಟಿ ಮಾಡಹೊರಟರೆ ಅಲ್ಲಿ ಕಾಣಿಸುವುದು ದಲಿತರ ನಿಟ್ಟುಸಿರು ಮತ್ತು ಅಸಹಾಯಕರ ಕಣ್ಣೀರು ಮಾತ್ರ.

ಶಾಸಕನಾಗುವುದಕ್ಕೂ ಮುನ್ನ ವಿಶ್ವನಾಥ್ ಹೆಚ್‌ಎಎಲ್ ಕಾರ್ಮಿಕ ನಾಯಕ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯ. ಕಳೆದ ಚುನಾವಣೆಯಲ್ಲಿ ಸರಿಸುಮಾರು 20 ಸಾವಿರದಷ್ಟು ಅಧಿಕ ಮತಕೊಟ್ಟು ಜನ ಗೆಲ್ಲಿಸಿದರು. ಎಮ್ಮೆಲ್ಲೆಯಾದ ವಿಶ್ವನಾಥ್ ಯಡ್ಡಿಯ ಕಟ್ಟಾ ಹಿಂಬಾಲಕರಾಗಿ ಯಲಹಂಕಕ್ಕೆಂದೇ ಸರಿಸುಮಾರು 800 ಕೋಟಿಯಷ್ಟು ಅನುದಾನ ಗಿಟ್ಟಿಸಿದರು. ಈ ಪಾಟಿ ದುಡ್ಡಲ್ಲಿ ಸ್ವರ್ಗವನ್ನೇ ಯಲಹಂಕಕ್ಕೆ ಇಳಿಸುತ್ತಾರೆಂದು ಜನರು ನಿರೀಕ್ಷೆ ಮಾಡಿದ್ದಾಯಿತು. ವರ್ಕ್‌ಕೋಡ್ ಹಗರಣ, ಬೋಗಸ್ ಬಿಲ್ ಕರ್ಮಕಾಂಡ, ಕಳಪೆ ಕಾಮಗಾರಿ ವಂಚನೆಯಲ್ಲೇ ತನ್ನ ಇಡೀ ಎಮ್ಮೆಲ್ಲೆಗಿರಿಯನ್ನು ಕಳೆದ ವಿಶ್ವನಾಥ್ ಯಲಹಂಕಕ್ಕೆ ಮಾಡಿದ ಅತೀ ದೊಡ್ಡ ಉಪಕಾರವೆಂದರೆ ತನ್ನ ಪತ್ನಿ ವಾಣಿಶ್ರೀಯವರನ್ನು ಜಿಲ್ಲಾ ಪಂಚಾಯ್ತಿ ಸದಸ್ಯೆಯಾಗಿಸಿದ್ದು!

ವಾಜಪೇಯಿ ಹೆಸರಲ್ಲಿ

ತನ್ನನ್ನು ಗೆಲ್ಲಿಸಲು ಹೆಣಗಾಡಿದ ಅಸಂಖ್ಯಾತ ಕಾರ್ಯಕರ್ತರಲ್ಲಿ ಯಾರಾದರೂ ಒಬ್ಬರನ್ನು ಜಿ.ಪಂ. ಸದಸ್ಯರನ್ನಾಗಿಸುವ ಬದಲು ತನ್ನ ಪತ್ನಿಯನ್ನೇ ಜಿಲ್ಲಾ ಪಂಚಾಯ್ತಿಗೆ ಗೆಲ್ಲಿಸಿದ ವಿಶ್ವನಾಥ್ ಅವರ ಕಾಳಜಿ ಮತ್ತು ಶಾಸಕತ್ವದ ಗುರಿಯೇನೆಂಬುದನ್ನು ಸಾರಿ ಹೇಳುವಂತಿತ್ತು.

ತನ್ನ ರಕ್ತ ಸಂಬಂಧಿಗಳು, ನೆಂಟರು, ಕುಲಸ್ಥರ ಕುರಿತ ಶಾಸಕರ ಕಾಳಜಿಯೊಂದೇ ಅವರ ರಾಜಕೀಯದ ಮಾನದಂಡವೇನೆಂಬುದನ್ನು ಸಾಬೀತುಪಡಿಸುತ್ತದೆ. ಬೇರೇನೂ ಬೇಡ ಅವರ ಹುಟ್ಟೂರು ಸಿಂಗನಾಯಕನಹಳ್ಳಿಯಲ್ಲಿ ವಿಶ್ವನಾಥ್ ಮಾಡಿದ ದುರಾಚಾರ ಮತ್ತು ದೌರ್ಜನ್ಯವೊಂದೇ ಸಾಕು. ಓರ್ವ ದುರುಳ ಬಿಜೆಪಿ ಶಾಸಕ ಅದೆಂಥಾ 'ರಾಮರಾಜ್ಯ'ವನ್ನು ಸೃಷ್ಟಿಸಬಲ್ಲ ಎಂಬುದನ್ನು ಬಯಲುಗೊಳಿಸುತ್ತದೆ!



ಊರು ಬಿಟ್ಟ ಅನ್ವರ್ ಭಾಷಾ

ವಿಶ್ವನಾಥ್ ಶಾಸಕನಾಗಿ ಪತ್ನಿ ವಾಣಿಶ್ರೀ ಜಿಲ್ಲಾ ಪಂಚಾಯ್ತಿಗೆ ಗೆದ್ದು ಬೋಗಸ್ ಬಿಲ್, ವರ್ಕ್‌ಕೋಡ್, ಕಾಮಗಾರಿಗಳಲ್ಲಿ ನೂರಾರು ಕೋಟಿ ನುಂಗಿದ ಮೇಲೂ ಅವರ ದುರಾಶೆ ತಣಿಯಬೇಕಿತ್ತಲ್ಲವೆ? ಹಾಗಾಗಲೇ ಇಲ್ಲ. ಅವರ ಹುಟ್ಟೂರು ಸಿಂಗನಾಯಕನಹಳ್ಳಿಯಲ್ಲಿ ನಿರ್ಗತಿಕರು, ದಲಿತರು, ವಸತಿ ಹೀನರಿಗೆಂದು 2009-10 ರಲ್ಲಿ ಒಟ್ಟು 570 ಮನೆಗಳನ್ನು ನಿರ್ಮಿಸುವ ಯೋಜನೆ ರೂಪಿಸಿದ್ದು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ. ಈತನಕ 470 ಮನೆಗಳನ್ನು ನಿರ್ಮಿಸಲಾಗಿದೆ. 81 ಮನೆಗಳು ಇನ್ನೂ ಕಾಮಗಾರಿ ಹಂತದಲ್ಲಿವೆ. ಹೇಳಿಕೇಳಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಮಿತಿಗೆ ಎಮ್ಮೆಲ್ಲೇ ವಿಶ್ವನಾಥ್‌ರೇ ಅಧ್ಯಕ್ಷರು. ಈಗಾಗಲೇ 200 ಮಂದಿಗೆ ಹಕ್ಕುಪತ್ರಗಳನ್ನು ಕೊಟ್ಟಾಗಿದೆ.



ಕಾಂಗ್ರೆಸ್ ನಾಯಕಿ ಲಾವಣ್ಯ

ಕನಿಷ್ಠ ಇನ್ನೂರು ಮಂದಿ ನಿರ್ಗತಿಕರಿಗಾದರೂ ಸ್ವಂತಕ್ಕೊಂದು ಮನೆ ಬಂತಲ್ಲ ಎಂದು ಯಾರಾದರೂ ಭಾವಿಸಿದರೆ ಅದು ಅವರ ಮೂರ್ಖತನವಾಗುತ್ತದೆ. ವಿಶ್ವನಾಥ್ 'ವಾಜಪೇಯಿ ನಗರ ವಸತಿ ಯೋಜನೆ'ಯಡಿ ತನ್ನ ಸಂಬಂಧಿಕರು, ಬೆಂಬಲಿಗರು ಮತ್ತು ರಿಯಲ್ ಎಸ್ಟೇಟ್ ಶಿಷ್ಯರನ್ನು ಉದ್ಧರಿಸಿದ್ದಾರೆ. ಸದ್ಯ ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯ್ತಿಗೆ ಗೆದ್ದು ಬಂದ ಶಾಂತಲಾ ರಾಜಣ್ಣ ಶಾಸಕ ವಿಶ್ವನಾಥ್‌ರ ಪಕ್ಕಾ ಛೇಲಾ ರಾಜಣ್ಣನ ಪತ್ನಿ. ವಿಶ್ವನಾಥ್ ಹೇಳಿದಲ್ಲಿಗೆ ಕಣ್ಣು ಮುಚ್ಚಿ ಸಹಿ ಹಾಕುತ್ತಾಳೆ. ಸಾಲದ್ದಕ್ಕೆ ವಿಶ್ವನಾಥ್‌ರ ಸಂಬಂಧಿ ಬೇರೆ!

ಸೈಟು ಹೊಡೆದ ಸಂಬಂಧಿಗಳು

ಸೈಟು ಪಡೆದವರ ಪೈಕಿ ಆನಂದರೆಡ್ಡಿ ಎಂಬಾತನ ಪತ್ನಿ ಪದ್ಮಾವತಿ ಶಾಸಕ ವಿಶ್ವನಾಥ್‌ಗೆ ರಕ್ತ ಸಂಬಂಧಿ. ಬೇಕಾಬಿಟ್ಟಿ ದ್ರಾಕ್ಷಿ ತೋಟವಿದೆ. ಗಂಡ ಆನಂದ್‌ರೆಡ್ಡಿಗೆ ಎಸ್ಮಾರ್ಟ್ ಕಂಪೆನಿಯಲ್ಲಿ ಉದ್ಯೋಗವಿದೆ. ಸತೀಶ್ ಎಂಬಾತನ ಪತ್ನಿ ಶೋಭಾ ಮತ್ತು ಬಾಬುರೆಡ್ಡಿಯ ಪತ್ನಿ ಈಶ್ವರಿಗೂ ವಿಶ್ವನಾಥ್ ಸೈಟು ಕೊಟ್ಟಿದ್ದಾರೆ.Once again ಇವರಿಬ್ಬರೂ ವಿಶ್ವನಾಥ್‌ರ ನೆಂಟರು ಮತ್ತು ಜಮೀನುದಾರರು. ಅನುರಾಧಾ ಎಂಬಾಕೆಗೆ ಶಾಸಕ ನೀಡಿದ ಸೈಟಿನ ದಾಖಲೆ ಕೆದಕಿದರೆ ಆಕೆ ಸಿಂಗನಾಯಕನಹಳ್ಳಿಯ ವಾಸಿಯೇ ಅಲ್ಲ. ಮೂಲತಃ ಗೌರಿಬಿದನೂರಿನ ಈಕೆ ಪಂಚಾಯ್ತಿ ಮೆಂಬರ್ ಶಾಂತಲಾಳ ಭಾಮೈದನ ಪತ್ನಿ!

ಇನ್ನು ಸೈಟು ಗಿಟ್ಟಿಸಿದ ಕೃಷ್ಣಪ್ಪನ ಪತ್ನಿ ಪವಿತ್ರಾ ಪಂಚಾಯ್ತಿ ಸದಸ್ಯೆ ಶಾಂತಲಾಳಿಗೆ ನಾದಿನಿಯಾಗಬೇಕು. ತನ್ನ ಛೇಲಾ ಕೇಶವಮೂರ್ತಿ ಎಂಬ ಬಡ್ಡಿ ಆಸಾಮಿಯ ಪತ್ನಿ ಭಾಗ್ಯಳಿಗೂ ಎಮ್ಮೆಲ್ಲೇ ಸೈಟುಕೊಟ್ಟಿದ್ದಾರೆ. ಬಿಜೆಪಿ ನಾಯಕ ದೊಡ್ಡಮುನಿಯಪ್ಪನ ಮಗ ಪ್ರಕಾಶ್, ಪಂಚಾಯ್ತಿ ಅಧ್ಯಕ್ಷೆ ಭಾರತಿ, ಶಾಂತಲಾಳ ತಮ್ಮ ಗಿರೀಶ್‌ನ ಹೆಂಡತಿ ವೀಣಾ; ಹೀಗೆ ಯಾರ್‍ಯಾರಿಗೆಲ್ಲ ಶಾಸಕ ವಿಶ್ವನಾಥ್ ಆಶ್ರಯ ಯೋಜನೆಯಡಿ ಸೈಟು ಕೊಟ್ಟಿದ್ದಾರೋ ಅವರೆಲ್ಲರೂ ಸ್ಥಿತಿವಂತರು, ಜಮೀನುದಾರರು, ಬಿಜೆಪಿ ಕಾರ್ಯಕರ್ತರು ಮತ್ತು ಶಾಸಕ ವಿಶ್ವನಾಥ್‌ರ ರಕ್ತ ಸಂಬಂಧಿಗಳು.

ಹೊಡೆದ ಕೊಳ್ಳೆಯೇ ಅಪಾಟಯಿರುವಾಗ ನಿರ್ಗತಿಕರು, ದಲಿತರಿಗೆಂದು ಮೀಸಲಿಟ್ಟಿದ್ದ ಸೈಟನ್ನು ತನ್ನ ಸಂಬಂಧಿಗಳು, ರೊಕ್ಕಸ್ಥ ಬೆಂಬಲಿಗರಿಗೆ ವಿತರಿಸುವ ದಾರಿದ್ರ್ಯವಂತೂ ಖಂಡಿತ ವಿಶ್ವನಾಥ್‌ಗಿರಲಿಲ್ಲ. ಬಹುಶಃ ಬಿಜೆಪಿಯ ಯಾವೊಬ್ಬ ಶಾಸಕನೂ ಇಷ್ಟೊಂದು ನಿರ್ಲಜ್ಜವಾಗಿ ಬಡವರ ಸೈಟನ್ನು ದೋಚಿರಲಿಕ್ಕಿಲ್ಲ!

ಬಡವರ ಸೈಟುಗಳನ್ನೇನೋ ನುಂಗಿದ್ದಾಯ್ತು. ಕನಿಷ್ಠ ತನ್ನೂರಿನ ಜನಕ್ಕಾದರೂ ನೆಮ್ಮದಿಕೊಡಬೇಕಲ್ಲವೆ? ಕಳೆದ ಪಂಚಾಯ್ತಿ ಚುನಾವಣೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಯಾರ್‍ಯಾರು ಬಿಜೆಪಿಗೆ ಓಟು ಹಾಕಲಿಲ್ಲವೋ ಅಂಥವರನ್ನೆಲ್ಲ ಪಟ್ಟಿ ಮಾಡಿ ಒಬ್ಬೊಬ್ಬರ ಮೇಲೆ ಜಿದ್ದು ಸಾಧಿಸುತ್ತಿರುವ ವಿಶ್ವನಾಥ್‌ರ ಕ್ರೌರ್ಯದ ವಿವರಗಳೇ ಭಯಾನಕ. ಈ ಪೈಕಿ ಅನ್ವರ್‌ಭಾಷಾ ಎಂಬ ಸಜ್ಜನ ಮುಸ್ಲಿಮನನ್ನು ವಿಶ್ವನಾಥ್ ಊರು ಬಿಟ್ಟೇ ಓಡಿಸಿದ್ದಾರೆ.


ಹುಟ್ಟೂರಿನ ಜಮೀನನ್ನೂ ನುಂಗಿ ಹಾಕಿದ್ದು



ವಿಶ್ವನಾಥ್ ಕಬಳಿಸಿದ ಪಂಚಾಯ್ತಿ ಜಮೀನು

ಶಾಸಕನಾದ ಮೇಲೆ ವಿಶ್ವನಾಥ್ ಯಲಹಂಕದುದ್ದಕ್ಕೂ ಕಬಳಿಸಿದ ಸರ್ಕಾರಿ ಭೂಮಿಯ ಪಟ್ಟಿ ದೊಡ್ಡದಿದೆ. ಹೇಳಿಕೇಳಿ ರಿಯಲ್ ಎಸ್ಟೇಟ್ ಶಾಸಕ. ಹಾಗಂತ ತನ್ನ ಹುಟ್ಟೂರನ್ನು ಹಾಳು ಗೆಡವುವಷ್ಟು ದುಷ್ಟತನಕ್ಕಿಳಿಯಲಾರ ಎಂದೇ ಜನ ಲೆಕ್ಕಹಾಕಿದ್ದು ಈಗ ಹುಸಿಯಾಗಿದೆ.

ಪತ್ನಿ ವಾಣಿಶ್ರೀ ಸಿಂಗನಾಯಕನಹಳ್ಳಿಯ ರೈತ ಸೇವಾ ಸಹಕಾರಿ ಬ್ಯಾಂಕಿನ ಅಧ್ಯಕ್ಷೆಯಾಗಿ ಇಡೀ ಬ್ಯಾಂಕನ್ನೇ ದಿವಾಳಿಯೆಬ್ಬಿಸಿದರೆ ಪತಿ ವಿಶ್ವನಾಥ್‌ಗೆ ಬ್ಯಾಂಕಿಗೆ ಹೊಂದಿಕೊಂಡಂತೆ ಇದ್ದ ಕಾಲೆಕರೆ ಪಂಚಾಯ್ತಿ ಜಮೀನನ್ನು ನುಂಗುವ ದುರಾಶೆ. ಅದಕ್ಕೊಂದು ವಿಶ್ವನಾಥ್ ಭೂಬಿಟ್ಟಿದ್ದು ಪಂಚಾಯ್ತಿಯ ಮಾಜಿ ಛೇರ್ಮನ್ ಚಂದ್ರಶೇಖರ್ ಮತ್ತು ಹೊನ್ನೇನಹಳ್ಳಿ ಮುನಿರೆಡ್ಡಿ ಎಂಬ ನೆಲಕಂಟಕರನ್ನು.




ಮಾಜಿ ಛೇರ್ಮನ್ ಚಂದ್ರಶೇಖರ್

ಈ ಪೈಕಿ ಮಾಜಿ ಛೇರ್ಮನ್ ಚಂದ್ರಶೇಖರ್ ಶಾಸಕ ವಿಶ್ವನಾಥ್‌ರ ತಂದೆ ರಾಮಯ್ಯನವರ ತಂಗಿಯ ಮೊಮ್ಮಗನಾದರೆ ಹೊನ್ನೇನಹಳ್ಳಿ ಮುನಿರೆಡ್ಡಿ ವಿಶ್ವನಾಥ್‌ರ ಖಾಸಾ ಅಕ್ಕ ಜಯಮ್ಮನ ಮಗ. ಎಲ್ಲೆಲ್ಲಿ ದಲಿತರ ಜಮೀನಿದೆಯೋ ಅದಕ್ಕೆ ರೌಡಿಗಳನ್ನು ಬಿಟ್ಟು ಬೇಲಿ ಹಾಕಿಸುವುದು ಮುನಿರೆಡ್ಡಿಯ ಹಾವಳಿಯಾದರೆ ಮಾಜಿ ಛೇರ್ಮನ್ ಚಂದ್ರಶೇಖರ್ ಪಕ್ಕಾ ಕಳ್ಳ ದಾಖಲೆವೀರ. ಸಿಂಗನಾಯಕನಹಳ್ಳಿಯ ರೈತ ಸೇವಾ ಸಹಕಾರಿ ಬ್ಯಾಂಕ್ ಪಕ್ಕದಲ್ಲೇ ಇದ್ದ ಕಾಲೆಕರೆಯ ಮೇಲೆ ಎಮ್ಮೆಲ್ಲೇ ಕಣ್ಣು ಬಿದ್ದಿದ್ದೇ ತಡ, ಮಾಜಿ ಛೇರ್ಮನ್ ಚಂದ್ರಶೇಖರ್ ಅದು ತನಗೇ ಸೇರಿದ ಸೊತ್ತೆಂಬಂತೆ ನಕಲಿ ದಾಖಲೆ ಸೃಷ್ಟಿಸಿದ. ಅದೂ ಬ್ಯಾಂಕ್ ಇದ್ದ ಜಮೀನಿನ ಸರ್ವೆ ನಂಬರನ್ನೇ ನಕಲು ಮಾಡಿ ಕಳ್ಳ ದಾಖಲೆ ಮಾಡಿದ್ದ.



ಹೊನ್ನಹಳ್ಳಿ ಮುನಿರೆಡ್ಡಿ

ಈಗ ಇದೇ ಕಾಲೆಕರೆಯನ್ನು ಬೆಂಗಳೂರಿನ ಮಾರ್ವಾಡಿಯೊಬ್ಬನಿಗೆ ಮಾರಲು ಶಾಸಕ ವಿಶ್ವನಾಥ್ ಅಣಿಯಾಗಿದ್ದಾರೆ. ಕಮ್ಮಿಯೆಂದರೂ ಒಂದು ಕೋಟಿಯ ಮಾರುಕಟ್ಟೆ ಮೌಲ್ಯವಿದೆ. ಚೂರುಪಾರು ಹಂಚಿದರೂ ಎಮ್ಮೆಲ್ಲೆಗೆ ಕನಿಷ್ಠ ೫೦ ಲಕ್ಷ ಗಿಟ್ಟುತ್ತದೆ. ಹುಟ್ಟೂರು ಹಾಳುಬಿದ್ದರೆಷ್ಟು ತನ್ನ ತಿಜೋರಿ ತುಂಬಬೇಕಲ್ಲ; ವಿಶ್ವನಾಥ್ ದುರ್ಬುದ್ಧಿಗೆ ಮಾತ್ರ ಕೊನೆ ಮೊದಲಿಲ್ಲ.



ದಲಿತನ ಮನೆ ಉರುಳಿಸಿ ವಿಶ್ವನಾಥ್ ಬಂಗಲೆ



ದಲಿತನ ಮಕ್ಕಳು ಈಗಿರುವ ಜೋಪಡಿ ಮನೆ


ಅನ್ವರ್ ಭಾಷಾ...!

...ಅಷ್ಟಕ್ಕೂ ಅನ್ವರ್ ಭಾಷಾ ಮಾಡಿದ ...ಂದರೆ ಕಳೆದ ಜಿಲ್ಲಾ ಪಂಚಾಯ್ತಿ ...ಾವಣೆಯಲ್ಲಿ ವಿಶ್ವನಾಥ್ ಪತ್ನಿ ವಾಣಿಶ್ರೀ ...ದ್ಧ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದ್ದ ಲಾವಣ್ಯರ ...ವಾಗಿ ಬ್ಯಾನರ್ ಹಾಕಿದ್ದು!

...ಇಡೀ ಸಿಂಗನಾಯಕನಹಳ್ಳಿಗೆ ಅನ್ವರ್ ಭಾಷಾರ ...ಯೊಂದೇ ಮುಸ್ಲಿಂ ಕುಟುಂಬ. ಆ ಕಾಲಕ್ಕೆ ವಿಶ್ವನಾಥ್‌ರ ...ರೆ ರಾಮಯ್ಯನವರಿಂದ 60x40 ಅಳತೆಯ ...ಶನವೊಂದನ್ನು ಖರೀದಿಸಿದ್ದರು. 2010 ರಲ್ಲಿ ಅಲ್ಲಿದ್ದ ...ೇ ಮನೆಯನ್ನು ಕೆಡವಿ ಹೊಸ ಮನೆಯನ್ನು ...ಸಹೊರಟರೆ ಶಾಸಕ ವಿಶ್ವನಾಥ್ ಪಂಚಾಯ್ತಿ ಅಭಿವೃದ್ಧಿ ...ಕಾರಿ ನಟರಾಜನನ್ನು ಛೂಬಿಟ್ಟು ಭಾಷಾರ ಮನೆಗೆ ...ದ್ಯುತ್ ಸಂಪರ್ಕಕ್ಕೆಂದು ಕೊಟ್ಟಿದ್ದ NOC ಯನ್ನೇ ...ದ್ದುಮಾಡಿಸಿದರು. ಕಟ್ಟಿದ ಮನೆಗೆ ಇನ್ನೇನು ವಿದ್ಯುತ್ ...ಬರುತ್ತದೆ ಎನ್ನುವಾಗಲೇ ಪಂಚಾಯ್ತಿ ಸಿಬ್ಬಂದಿ ಬಂದು ...ದ್ಯುತ್ ಸಂಪರ್ಕ ಕಿತ್ತರು.

...ಹೀಗೆ ವಿದುತ್ ಸಂಪರ್ಕ ಕಿತ್ತು ಹಾಕಿದ ತಿಂಗಳಿಗೇ ... ಪಂಚಾಯ್ತಿ ಸಿಬ್ಬಂದಿಯನ್ನು ಛೂಬಿಟ್ಟ ವಿಶ್ವನಾಥ್ ...ನೆಗೆ ಇದ್ದ ನೀರಿನ ಸಂಪರ್ಕವನ್ನು ಕಿತ್ತು ಹಾಕಿಸಿದರು. ...ಲಕ್ಷ ಖರ್ಚು ಮಾಡಿ ಕಟ್ಟಿದ ಮನೆಗೆ ನೀರೂ ಇಲ್ಲ ...ಟೂ ಇಲ್ಲ. ಇಷ್ಟಾಗಿದ್ದೇ ತಡ ಭಾಷಾರ ಪಕ್ಕದ ...ನೆಯ ಲೋಕೇಶ್ ಎಂಬಾತನಿಂದ ಪಂಚಾಯ್ತಿಗೆ ...ಷ್ಟೊಂದು ದೂರು ಕೊಡಿಸಿದರು. ಅದು ಭಾಷಾ ಎರಡಡಿ ...ಚಾಯ್ತಿಯ ಜಮೀನನ್ನು ಒತ್ತುವರಿ ಮಾಡಿ ತಮ್ಮ ...ನೆಯ ಸಜ್ಜಾ ನಿರ್ಮಿಸಿದ್ದಾರೆಂಬ ದೂರು.

...ಇಡೀ ಊರಿನ ಜನಕ್ಕೆ ರಸ್ತೆಗೆಂದು ತಮ್ಮ ಸ್ವಂತ ... ಬಿಟ್ಟುಕೊಟ್ಟ ಅನ್ವರ್ ಭಾಷಾ ಪಂಚಾಯ್ತಿಯ ...ಮೀನನ್ನು ಹೇಗೆ ಒತ್ತುವರಿ ಮಾಡಿಯಾರು? ದೂರು ...ಟ್ಟ ಲೋಕೇಶನನ್ನು ಕೇಳಿದರೆ ಆತ 'ಏನು ಸ್ವಾಮೀ



ಪಾಳುಬಿದ್ದ ಭಾಷಾರ ಬಂಗಲೆ

...ಡೋದು? ನಾನು ಪಂಚಾಯ್ತಿ ನೌಕರ, ನಿಮ್ಮ ವಿರುದ್ಧ ...ಟ್ಟ ದೂರು ನೀಡದೆಹೋದರೆ ಎಮ್ಮೆಲ್ಲೇ ನನ್ನನ್ನು ...ಸದಿಂದಲೇ ವಜಾ ಮಾಡುತ್ತಾರೆ' ಎಂದು ಕಣ್ಣೀರಿಟ್ಟಿದ್ದ. ... ಎಲ್ಲಾ ಜಂಜಾಟದಿಂದ ರೋಸತ್ತ ಅನ್ವರ್ ಭಾಷಾ ...ಮ್ಮೆಲ್ಲೇ ಕಾಟ ತಾಳಲಾರದೇ 2011ರ ಮಾರ್ಚ್‌ನಲ್ಲಿ ...ಗನಾಯಕನಹಳ್ಳಿಯನ್ನೇ ತೊರೆದು ಬಿಟ್ಟರು.

... ಓರ್ವ ಮುಸ್ಲಿಂ ಎಂಬ ದ್ವೇಷ ಒಂದೆಡೆಯಾದರೆ ...ಗೆ ಓಟು ಹಾಕಲಿಲ್ಲ ಎಂಬ ಹೊಟ್ಟೆಕಿಚ್ಚು ಮತ್ತೊಂದೆಡೆ.

...ನೀರು, ವಿದ್ಯುತ್ ಕಟ್

... ಅನ್ವರ್ ಭಾಷಾರಿಗೆ ಶಾಸಕ ನೀಡುತ್ತಿದ್ದ ಕಿರುಕುಳದ ...ವಿರುದ್ಧ ಆ ಊರಿನ ಅನೇಕರು ದನಿಯೆತ್ತಿ ಟೀವಿ ...ವರದಿಗಾರರನ್ನು ಕರೆಸಿದರೆ ವಿಶ್ವನಾಥ್ ತನ್ನ ಛೇಲಾಗಳನ್ನು ...ಬಿಟ್ಟು ಆ ಟೀವಿ ವರದಿಗಾರನನ್ನೇ ಖರೀದಿಸಿಬಿಟ್ಟ. ಯಾರೆಲ್ಲ ...ವಿ ಕ್ಯಾಮೆರಾ ಮುಂದೆ ಶಾಸಕನ ಗೂಂಡಾಗಿರಿ ವಿರುದ್ಧ ...ಕೆ ಕೊಟ್ಟಿದ್ದರೋ ಅಂಥವರನ್ನೆಲ್ಲ ಪಟ್ಟಿ ಮಾಡಿ ...ಚಾಯ್ತಿಯಿಂದ ನೀರಿನ ಸಂಪರ್ಕ ಕಟ್ ಮಾಡುತ್ತೇವೆಂಬ ...ನೋಟಿಸು ಕೊಡಿಸಿದ.

...ಪತ್ನಿ ವಾಣಿಶ್ರೀ ವಿರುದ್ಧ ಜಿಲ್ಲಾ ಪಂಚಾಯ್ತಿಗೆ ಸ್ಪರ್ಧಿಸಿದ್ದ ಲಾವಣ್ಯರನ್ನೂ ಸೇರಿಸಿ ಯಾರೆಲ್ಲಾ ಅನ್ವರ್ ಭಾಷಾರನ್ನು ಬೆಂಬಲಿಸಿದ್ದರೊ, ಯಾರೆಲ್ಲ ಬಿಜೆಪಿಗೆ ಓಟು ಹಾಕಿಲ್ಲವೋ ಅಂತ ಪ್ರತಿಯೊಬ್ಬರ ಮನೆಯ ನೀರಿನ ಸಂಪರ್ಕ ನಿಲ್ಲಿಸುವುದಾಗಿ ಪಂಚಾಯ್ತಿಯಿಂದ ನೋಟಿಸು ಜಾರಿಯಾಗಿದೆ!

ಈಗ ಪಂಚಾಯ್ತಿ ಪಿಡಿಓ ನಟರಾಜನೇ ಬಂದು 'ಸುಮ್ಮನೇ ತರಲೆ ಯಾಕೆ? ಎಮ್ಮೆಲ್ಲೇ ಕಾಲು ಹಿಡಕೊಂಡು ತಪ್ಪಾಯ್ತು ಎಂದುಬಿಟ್ಟರೆ ಎಲ್ಲಾ ಸರಿಹೋಗ್ತದೆ...!' ಎಂದು ಬಿಟ್ಟೀ ಸಲಹೆ ಕೊಡುತ್ತಿದ್ದಾನೆ. ಆದರೆ ಈ ಯಾವ ರಾಜಕೀಯಕ್ಕೂ ಕೈಹಾಕದ ಕೃಷ್ಣಪ್ಪ ಎಂಬ ಬಡ ದಲಿತನನ್ನು ಬೀದಿಪಾಲು ಮಾಡಿದ ವಿಶ್ವನಾಥ್‌ರ ಕ್ರೌರ್ಯವಿದೆಯಲ್ಲ; ಬಹುಶಃ ಯಾವೊಬ್ಬ ಶಾಸಕನೂ ಈ ಮಟ್ಟಿಗೆ ಕುಲಗೆಟ್ಟಿರಲಿಲ್ಲ. ಯಾವುದೋ ಕಾಲಕ್ಕೆ ಸಿಂಗನಾಯಕನಹಳ್ಳಿಗೆ ವಲಸೆ ಬಂದಿದ್ದ ದಲಿತ ಕೃಷ್ಣಪ್ಪ ಅದೇ ಊರಿನ ಮತ್ತೊಬ್ಬ ಕೃಷ್ಣಪ್ಪ ಎಂಬಾತನಿಂದ ಒಂದು ಗುಂಟೆ ಜಮೀನು ಖರೀದಿಸಿದ್ದ. ಅಲ್ಲೇ ಮನೆಯನ್ನೂ ಕಟ್ಟಿಕೊಂಡಿದ್ದ. ಆತನಿಗೆ ಇಬ್ಬರು ಹೆಣ್ಣು ಮತ್ತು ಒಂದು ಗಂಡು ಮಕ್ಕಳು.

ಬಡ ದಲಿತ ಕೃಷ್ಣಪ್ಪ

ಎಮ್ಮೆಲ್ಲೆಯಾಗಿದ್ದೇ ವಿಶ್ವನಾಥ್ ಸಿಂಗನಾಯಕನಹಳ್ಳಿಯಲ್ಲಿ ಬಂಗಲೆಯೊಂದನ್ನು ಕಟ್ಟಿಸಿದ್ದಾರೆ. ಹಾಗೆ ನಿರ್ಮಿಸಿದ ಬಂಗಲೆಯ ಎದುರಿಗಿದ್ದಿದ್ದೇ ದಲಿತ ಕೃಷ್ಣಪ್ಪನ ಮನೆ. ಬಂಗಲೆ ಎದುರು ವಿಶಾಲವಾದ ತೋಟವಿದ್ದರೇನೇ ಚೆಂದ ಎಂದು ವಿಶ್ವನಾಥ್‌ಗೆ ಅನ್ನಿಸಿರಬೇಕು. ನಿನ್ನ ಜಾಗ ಬಿಟ್ಟುಕೊಡು ಎಂದು ಕೃಷ್ಣಪ್ಪನನ್ನು ಕೇಳಿದ್ದಾರೆ. ಇದ್ದ ಮನೆ ಬಿಟ್ಟು ಎಲ್ಲಿಗೆ ಹೋದಾನು? ಆಗಲ್ಲ ಎಂದಿದ್ದಾನೆ. ಅಷ್ಟಕ್ಕೇ ಕೃಷ್ಣಪ್ಪನ ಮನೆ ಸುತ್ತಮುತ್ತಲ ಎಲ್ಲಾ ಜಮೀನನ್ನು ಖರೀದಿಸಿದ ವಿಶ್ವನಾಥ್ ಕೃಷ್ಣಪ್ಪನ ಮನೆಯನ್ನೂ ಸೇರಿಸಿ ಕಾಂಪೌಂಡ್ ನಿರ್ಮಿಸಿಬಿಟ್ಟರು. ಮನೆಗಿದ್ದ ದಾರಿಯನ್ನೇ ಮುಚ್ಚಿಬಿಟ್ಟರು. ಕೇಳಲು ಹೋದ ಕೃಷ್ಣಪ್ಪನನ್ನು ವಿಶ್ವನಾಥ್ ಪತ್ನಿ ವಾಣಿಶ್ರೀ ಚಪ್ಪಲಿನಿಂದ ಉರುಳಾಡಿಸಿ ಹೊಡೆದರಂತೆ.

ಇದೇ ಕೊರಗಿನಲ್ಲಿ ಕ್ಯಾನ್ಸರ್‌ಗೆ ತುತ್ತಾಗಿ ದಲಿತ ಕೃಷ್ಣಪ್ಪ ಸತ್ತರೆ ಆತನ ಬೆನ್ನಲ್ಲೇ ಹಿರಿಯ ಮಗಳೂ ಕೊನೆಯುಸಿರೆಳೆದಳು. ಕೊನೆಗೆ ವಿಧಿಯಿಲ್ಲದೆ ವಿಶ್ವನಾಥ್ ಕಾಲಿಗೆ ಬಿದ್ದು ಕಣ್ಣೀರಿಟ್ಟ ಕೃಷ್ಣಪ್ಪನ ಮಗ ಶ್ರೀನಿವಾಸ್ ಮತ್ತು ಮಗಳು ಸಾವಿತ್ರಿಗೆ ವಿಶ್ವನಾಥ್ ಸಿಂಗನಾಯಕನಹಳ್ಳಿಯ ದಲಿತರ ಕಾಲೋನಿಯಲ್ಲಿ ತಲಾ ಸಾವಿರ ರೂಪಾಯಿಯ ಎರಡು ಪುಟ್ಟ ಸೈಟುಗಳನ್ನು ತೋರಿಸಿದ್ದೇ 'ನೀವು ಅಲ್ಲಿ ಗುಡಿಸಲು ಹಾಕ್ಕೊಳ್ಳಿ... ಈ ನಿಮ್ಮ ಮನೆ ಜಾಗ ನನಗೆ ಬಿಟ್ಟು ಕೊಡಿ' ಎಂದು ಹೂಂಕರಿಸಿದ. ವಿಧಿಯಿಲ್ಲದೇ ಆ ದಲಿತ ಅಣ್ಣತಂಗಿಯರಿಬ್ಬರೂ ತಮ್ಮ ತಂದೆಯ ಸೊತ್ತು ಬಿಟ್ಟುಕೊಟ್ಟು ಶಾಸಕ ಕೊಡಿಸಿದ ಜಾಗದಲ್ಲಿ ಜೋಪಡಿ ಕಟ್ಟಿಸಿಕೊಂಡರು. ಇವತ್ತಿಗೂ ದಲಿತ ಕೃಷ್ಣಪ್ಪನ ಮಗ ಮತ್ತು ಮಗಳು ಶಾಸಕ ತೋರಿಸಿದ ಗುಡಿಸಲಿನಲ್ಲಿದ್ದಾರೆ. ಅವರ ತಂದೆಯ ಒಂದು ಗುಂಟೆಯ ಭೂಮಿ ಶಾಸಕನ ಬಂಗಲೆಯ ಭಾಗವಾಗಿದೆ.

ಬಡ ದಲಿತನನ್ನು ಬೀದಿಪಾಲು ಮಾಡಿ ಆತನ ಮನೆ ನೆಲಸಮಗೊಳಿಸಿ ಅಲ್ಲಿ ತನ್ನ ಬಂಗಲೆಗೆ ಹೂದೋಟ ನಿರ್ಮಿಸಿದ ಬಿಜೆಪಿ ಶಾಸಕ ಅಂತಿದ್ದರೆ ಅದು ವಿಶ್ವನಾಥ್ ಮಾತ್ರ. ಗಣಿ ಲೂಟಿ ಗೈದವರುಂಟು, ಲಂಚಕ್ಕೆ ಕೈಚಾಚಿ ಜೈಲು ಕಂಡವರುಂಟು, ರೇಪ್ ಮಾಡಿ ಜೈಲು ಸೇರಿದವರುಂಟು. ಆದರೆ ಬಡ ದಲಿತನನ್ನು ಬೀದಿಪಾಲು ಮಾಡಿ ಆತನ ಮನೆ ಜಾಗದಲ್ಲಿ ಬಂಗಲೆ ನಿರ್ಮಿಸಿದ ಕೀರ್ತಿಗೆ ಪಾತ್ರನಾಗಿದ್ದು ಯಲಹಂಕದ ಶಾಸಕ ವಿಶ್ವನಾಥ್ ಮಾತ್ರ.


ಶಾಸಕನೊಬ್ಬ ಇದಕ್ಕಿಂತ ದುಷ್ಟನಾಗಲು ಸಾಧ್ಯವೇ?

ಕ್ಷೌ

ಬೆಂಗಳೂರು ಜಿಪಂ: ಹಳೇ ಹಗರಣದಲ್ಲಿ ಹೊಸ ಲೂಟಿ!

ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ ಕಂಟ್ರಾಕ್ಟರು ಮತ್ತು ಅಧಿಕಾರಿಗಳ ನಡುವಿನ ತಿಕ್ಕಾಟದಿಂದಾಗಿ ಕೋಟಿ ಲೆಕ್ಕದ ಹಗರಣವೊಂದು ಬಯಲಿಗೆ ಬಿದ್ದಿದೆ. ಬೋಗಸ್ ಕಾಮಗಾರಿಯ ಹೆಸರಲ್ಲಿ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಜಂಟಿಯಾಗಿ ಸರ್ಕಾರಿ ಹಣ ಲೂಟಿ ಮಾಡುವುದು ಸಹಜ. ಆದರೆ ಇಲ್ಲಿ ಅಧಿಕಾರಿಗಳು ಖುದ್ದು ಕಂಟ್ರ್ಯಾಕ್ಟ್‌ದಾರರಿಂದಲೇ ಹಣ ವಸೂಲಿ ಮಾಡಿ ಕೈ ಎತ್ತಿದ್ದಾರೆ. ಜಿ.ಪಂ.ನ ಸಿ.ಇ.ಓ ಸುಬ್ರಹ್ಮಣ್ಯರಾವ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಸನ್ನ ಕುಮಾರ್ ಮತ್ತು ಡೆಪ್ಯುಟಿ ಸೆಕ್ರೆಟರಿ ಕರಿಯಪ್ಪನ ಹೆಸರುಗಳು ಈ ಹಗರಣದಲ್ಲಿ ಪ್ರಮುಖವಾಗಿ ಕೇಳಿಬರುತ್ತಿವೆ.

ಈ ರಗಳೆಯ ಮೂಲ ಕೆದಕಲು ಹೊರಟರೆ 2001-02ನೇ ಸಾಲಿನ ಜಿ.ಪಂ.ನ ಬೋಗಸ್ ಕಾಮಗಾರಿಗಳು ಕಾಣಸಿಕೊಳ್ಳುತ್ತವೆ. ಆಗ ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ಗೆ ಚಿಕ್ಕರಾಯಪ್ಪ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದರೆ ಟಿ.ಜಿ ನಾಯಕ್ ಸಿ.ಇ.ಓ ಆಗಿದ್ದರು. ಸರ್ಕಾರದಿಂದ ಕ್ರಿಯಾಯೋಜನೆಯ ಅನುಮೋದನೆಯನ್ನು ಪಡೆಯದೆ ಯೋಜನೇತರ ಕಾಮಗಾರಿ ಅಡಿಯಲ್ಲಿ ಎಂಟು ಕೋಟಿ



ಮೊತ್ತದ ಅಭಿ'ವೃದ್ಧಿ' ಕೆಲಸಗಳ ಕಾಂಟ್ರ್ಯಾಕ್ಟ್‌ಗಳನ್ನು ನೀಡಲಾಗಿತ್ತು, ಸಾಮಾನ್ಯವಾಗಿ ಇಂತಹ ಯೋಜನೇತರ ಕಾಮಗಾರಿಗಳನ್ನು ಜನೋಪಕಾರಿ ಉದ್ದೇಶಕ್ಕಿಂತ ಕಮಾಯಿಯ ದುರುದ್ದೇಶಕ್ಕೇ ಹೆಣೆಯಲಾಗಿರುತ್ತೆ ಎಂಬುದು ರಹಸ್ಯವೇನಲ್ಲ. ಡೀಲ್ ಕುದುರಿಸಿಕೊಂಡ ಕಂಟ್ರ್ಯಾಕ್ಟರ್‌ಗಳು ತರಾತುರಿಯಲ್ಲಿ ತಮ್ಮದೇ ಕಾಸು ಚೆಲ್ಲಿ ಕಾಮಗಾರಿಗಳನ್ನೂ ಆರಂಭಿಸಿದ್ದರು.

ಆದರೆ ಇಷ್ಟೂ ಕಾಮಗಾರಿಗಳ ಕ್ರಿಯಾಯೋಜನೆ ಅನುಮೋದಿತವಾಗಿಲ್ಲ ಎಂಬ ನಿಜ ತಿಳಿಯುತ್ತಿದ್ದಂತೆ ಸರ್ಕಾರ ಅವುಗಳನ್ನೆಲ್ಲ ವಜಾ ಮಾಡಿ ಆಗಿರುವ ಕೆಲಸಕ್ಕೆ ಬಿಲ್ ಪಾಸ್ ಮಾಡಬಾರದು ಎಂದು ಆದೇಶ ಹೊರಡಿಸುವ ವೇಳೆಗೆ ಗುತ್ತಿಗೆದಾರರು ತಮ್ಮ ಬೋಗಸ್ ಕಾಮಗಾರಿಗಳನ್ನು ಪೂರೈಸಿಯಾಗಿತ್ತು, ಆರಂಭದಲ್ಲಿ ಸುಲಭವಾಗಿ ಬರಲಿದ್ದ ಕಾಸು ಕೈಬಿಟ್ಟು ಹೋದ ಕಿಚ್ಚಿಗೆ ಕಾಂಟ್ರ್ಯಾಕ್ಟ್‌ದಾರರು ಕೊಂಚ ನರಳಾಡಿದರಾದರೂ ಹೇಗೂ ಲೂಟಿಯ ಕಾರಣಕ್ಕೆ ಕಾಮಗಾರಿಯ ಶಾಸ್ತ್ರವನ್ನಷ್ಟೆ ಅಲ್ಲವೆ ಮಾಡಿದ್ದು ಎಂಬ ಸಮಾಧಾನದಲ್ಲಿ ಸುಮ್ಮನಾಗಿದ್ದರು.

ಇದೆಲ್ಲ ನಡೆದು ಇಲ್ಲಿಗೆ ಹತ್ತು ವರ್ಷವೇ ತುಂಬಿಯಾಗಿದೆ. ಆಗ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದ ಚಿಕ್ಕರಾಯಪ್ಪ ಈಗ ಬಿಬಿಎಂಪಿಯಲ್ಲಿ ಚೀಫ್ ಇಂಜಿನಿಯರ್ ಆಗಿದ್ದಾನೆ. ಈ ಅವಧಿಯಲ್ಲಿ ಕೆಲ ಕಂಟ್ರ್ಯಾಕ್ಟರುಗಳು ಬಿಲ್ ಪಾವತಿಯಾಗುವ ಆಸೆಯನ್ನೇ ಮರೆತಿದ್ದರೆ ಇನ್ನೂ ಕೆಲವರು ಈ ವೃತ್ತಿಯನ್ನೇ ಬಿಟ್ಟು ಹೊರನಡೆದಿದ್ದರು. ಆದರೆ ಸದ್ಯದ ಜಿ.ಪಂ.ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಸನ್ನ ಕುಮಾರ್ ಮತ್ತಾತನ ಟೀಮಿಗೆ ಇದರಲ್ಲಿದ್ದ ಕಮಾಯಿಯ ಹಾದಿ ಗೋಚರಿಸಿದ್ದೇ ತಡ ಪಕ್ಕಾ ಪ್ಲ್ಯಾನ್ ಒಂದನ್ನು ರೂಪಿಸಿ, ಅಷ್ಟೂ ಜನ ಕಂಟ್ರ್ಯಾಕ್ಟರ್‌ಗಳನ್ನು ಸಂಪರ್ಕಿಸಿದರು.


"ಅವತ್ತು ಸರ್ಕಾರ ತಡೆ ಹಿಡಿದ ಎಲ್ಲಾ ಬಿಲ್‌ಗಳನ್ನು ನಾವು ಪಾಸ್ ಮಾಡಿಸಿಕೊಡುತ್ತೇವೆ. ಆದರೆ ಅದರಲ್ಲಿ ಫಿಫ್ಟಿ ಪರ್ಸೆಂಟ್ ನಮಗೆ ಸೇರಬೇಕು" ಎಂಬ ಡೀಲ್ ಒಂದನ್ನು ಅಧಿಕಾರಿಗಳು ಕಾಂಟ್ರ್ಯಾಕ್ಟರ್‌ಗಳ ಮುಂದಿಟ್ಟರು. ಒಂದೊಂದು ಕಾಮಗಾರಿಯೂ ಕಡಿಮೆಯೆಂದರೆ ಹತ್ತರಿಂದ ಇಪ್ಪತ್ತು ಲಕ್ಷ ಗಾತ್ರದವು. ಆ ಹಣ ಇನ್ನು ತಮ್ಮ ಕೈಗೆ ಬರುವುದೇ ಇಲ್ಲ ಎಂದು ತಿಳಿದಿದ್ದ ಕಾಂಟ್ರ್ಯಾಕ್ಟರ್‌ಗಳಿಗೆ ಈಗ ಆ ಹಣ ತಾನಾಗಿಯೇ ತಮ್ಮನ್ನು ಹುಡುಕಿ ಬರುತ್ತಿದೆ ಎಂದಾಗ ಅವರಾದರೂ ಹೇಗೆ ಸುಮ್ಮನಿದ್ದಾರು. ಅವರೆಲ್ಲ ಅಧಿಕಾರಿಗಳು ಮುಂದಿಟ್ಟಿದ್ದ ಡೀಲಿಗೆ ಒಪ್ಪಿಗೆ ನೀಡಿದರು.

ಈ ಅವ್ಯವಹಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ್ ಶೆಟ್ಟರ್ ಮತ್ತು ಸಮಾಜ ಕಲ್ಯಾಣ ಮಂತ್ರಿ ಎ.ನಾರಾಯಣಸ್ವಾಮಿಯ ಹೆಸರನ್ನೂ ಅಧಿಕಾರಿಗಳು ಚಲಾವಣೆ ತಂದರು. ಮಂತ್ರಿ ಎ.ನಾರಾಯಣಸ್ವಾಮಿಯ ಮುಖಾಂತರ ಜಗದೀಶ್ ಶೆಟ್ಟರ್‌ಗೆ ಹೇಳಿಸಿ ಬಿಲ್ ಪಾಸ್ ಮಾಡಿಸುವ ಉಸ್ತುವಾರಿಯನ್ನು ಜಿ.ಪಂ.ನ ಉಪ ಕಾರ್ಯದರ್ಶಿ ಕರಿಯಪ್ಪ ವಹಿಸಿಕೊಂಡ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಮೊದಲೇ ಒಪ್ಪಿಕೊಂಡಿದ್ದಂತೆ ಬಿಲ್‌ಗಳು ಪಾಸಾದ ಮೇಲೆ ಅದರ ಶೇ. 50 ರಷ್ಟನ್ನು ಅಧಿಕಾರಿಗಳಿಗೆ ಗುತ್ತಿಗೆದಾರರು ಕೊಡಬೇಕಿತ್ತು, ಆದರೆ ಇದರಲ್ಲಿ ಮಂತ್ರಿಗಳ ಹೆಸರನ್ನೂ ತಂದ ಅಧಿಕಾರಿಗಳು "ಮೊದಲು ಮಂತ್ರಿಗಳನ್ನು ತಂಪು ಮಾಡಲು ಕೆಲಸಕ್ಕೆ ಮುಂಚೆಯೇ ಸ್ವಲ್ಪ ಅಮೌಂಟ್ ಬೇಕಾಗುತ್ತೆ. ನಮಗೆ ಕೊಡಬೇಕಾದ ದುಡ್ಡಲ್ಲಿ ಒಂದು ಕೋಟಿಯನ್ನು ಅಡ್ವಾನ್ಸ್ ಆಗಿಕೊಡಿ" ಎಂಬ ಹೊಸ ದಾಳವನ್ನು ಗುತ್ತಿಗೆದಾರರ ಮುಂದೆ ಉರುಳಿಸಿದರು.

ಅಷ್ಟೊತ್ತಿಗಾಗಲೇ ಗುತ್ತಿಗೆದಾರರು ಕತ್ತರಿಯ ಬಾಯಿಗೆ ತಗುಲಿಕೊಂಡಾಗಿತ್ತು, "ಇದರ ಉಸಾಬರಿಯೇ ಬೇಡ. ಹೋದ ಹಣ ಹೋಗೇ ಬಿಡಲಿ. ಯಾವುದೇ ಕಾರಣಕ್ಕೂ ಮುಂಗಡವಾಗಿ ಹಣ ಕೊಡಲಿಕ್ಕಾಗುವುದಿಲ್ಲ" ಎಂದು ಕೆಲವರು ಹೇಳಿದರು. ಆದರೆ ಈಗ ಹಣವನ್ನು ಕೊಡದಿದ್ದರೆ ಇದನ್ನೇ ನೆಪವಾಗಿಟ್ಟುಕೊಂಡು ತಮ್ಮ ಈಗಿನ ಬಿಲ್‌ಗಳನ್ನು ಅಧಿಕಾರಿಗಳು ಪಾಸ್ ಮಾಡದೆ ಸತಾಯಿಸುತ್ತಾರೆ ಎಂದು ಹೆದರಿದ 25 ರಿಂದ 30 ಮಂದಿ ಗುತ್ತಿಗೆದಾರರು ಅದು ಹೇಗೋ ಹಣ ಹೊಂದಿಸಿ ಒಂದು ಕೋಟಿ ರೂಪಾಯಿಗಳನ್ನು ಅಧಿಕಾರಿಗಳಿಗೆ ನೀಡಿದ್ದರು. ಹೀಗೆ 2001-02ರಲ್ಲೆ ಖತಂ ಆಗಿದ್ದ ಬೋಗಸ್ ಕಾಮಗಾರಿಗಳ ಬಿಲ್‌ಗಳನ್ನು ಈಗ ಪಾಸ್ ಮಾಡಿಸುವ ಭರವಸೆಯನ್ನು ಕೊಟ್ಟ ಅಧಿಕಾರಿಗಳು ಗುತ್ತಿಗೆದಾರರಿಂದ ಹಣವನ್ನು ಪಡೆದು "ಶತಾಯಗತಾಯ ಮಾರ್ಚ್ 31ರೊಳಗೆ ಬಿಲ್ ಪಾವತಿ ಮಾಡಿಸಿಕೊಡ್ತೀವಿ" ಎಂಬ ಆಶ್ವಾಸನೆಯನ್ನೂ ನೀಡಿದರು.

ಆದರೆ ದುಡ್ಡು ಅಧಿಕಾರಿಗಳ ಜೋಳಿಗೆ ಸೇರಿದ್ದೇ ಬಂತು ಅವರು ಗುತ್ತಿಗೆದಾರರ ಹಣವನ್ನು ಬಿಡುಗಡೆ ಮಾಡಿಸಲೇ ಇಲ್ಲ. ಹಳೇ ಪಾಪಕ್ಕೆ ಹೊಸ ಫೈನ್ ಕಟ್ಟಿದ್ದ ಗುತ್ತಿಗೆದಾರರು ವಿಧಿ ಇಲ್ಲದೆ ಅಧಿಕಾರಿಗಳನ್ನು ಪೀಡಿಸಲಾರಂಭಿಸಿದರು.

ಇದೆಲ್ಲ ನಡೆಯುತ್ತಿರುವಾಗಲೇ ಜಿ.ಪಂ. ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಸನ್ನ ಕುಮಾರ್ ತನ್ನ ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡಿದ್ದು ಕಂಟ್ರ್ಯಾಕ್ಟರ್‌ಗಳಲ್ಲಿ ಅನುಮಾನ ಹೆಚ್ಚಾಗುವಂತೆ ಮಾಡಿತು. ಅಧಿಕಾರಿಗಳು ಆಶ್ವಾಸನೆ ನೀಡಿದ್ದಂತೆ ಈ ಅವ್ಯವಹಾರದ ಸುದ್ದಿಯನ್ನು ಮಂತ್ರಿ ಶೆಟ್ಟರ್‌ವರೆಗೆ ಒಯ್ದರೋ ಇಲ್ಲವೋ ಅಥವಾ ಶೆಟ್ಟರ್ ಸಾಹೇಬರೆ ಅಧಿಕಾರಿಗಳ ಅಪರಾತಪರಾಗಳನ್ನು ಗಮನಿಸಿ "ಇಲ್ಲದ ಉಸಾಬರಿ ನನಗ್ಯಾಕೆ" ಅಂತ ನೋ ಅಂದರೋ ಏನೋ, ಒಟ್ಟಿನಲ್ಲಿ ಅಧಿಕಾರಿಗಳೇ ನೀಡಿದ್ದ ಗಡುವು ಮಾರ್ಚ್ 31 ಬಂತು, ಹೋಯಿತು. ಹಳೇ ಬಿಲ್‌ಗಳು ಪಾಸಾಗಲೂ ಇಲ್ಲ, ಹಣ ಗುತ್ತಿಗೆದಾರರ ಕೈ ಸೇರಲೂ ಇಲ್ಲ.



ತಾವು ನಂಬಿದ್ದ ಅಧಿಕಾರಿಗಳಿಂದಲೇ ತಾವು ಭರ್ಜರಿಯಾಗಿ ಮೋಸ ಹೋಗಿರುವುದು ಗುತ್ತಿಗೆದಾರರಿಗೆ ತಿಳಿಯುತ್ತಿದ್ದಂತೆ ಅವರೆಲ್ಲ ಅದೇ ಮಾರ್ಚ್ 31 ರಂದು ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯ ಕಚೇರಿ ಮುಂದೆ ಗುಂಪಾಗಿ ಹಣ ತಿಂದವರ ಜೊತೆ ಜಗಳಕ್ಕೆ ನಿಂತರು. ಇದಿಷ್ಟೂ ಅವ್ಯವಹಾರ ನಡೆದದ್ದು ಖಾಸಗಿ ಡೀಲಿಂಗ್ ಒಂದರ ಲೆಕ್ಕದಲ್ಲಿ, ಅಂದರೆ ಹತ್ತು ವರ್ಷದ ಹಿಂದಿನ ಬೋಗಸ್ ಕಾಮಗಾರಿಗೆ - ಅದೂ ಅನುಮೋದನೆಯಾಗದ ಅಲ್ಪಾಯುಷ್ಯದ ಯೋಜನೇತರ ಕಾಮಗಾರಿಗಳಿಗೆ - ಈಗ ಬಿಲ್ ಪಾವತಿ ಮಾಡಿಸುತ್ತೇವೆ ಎಂಬ ಆಮಿಷಕ್ಕೆ ಸರ್ಕಾರದ ಯಾವ ನಿಯಮವೂ ಸಾಥ್ ನೀಡುವುದಿಲ್ಲ, ಆದರೆ ಅವತ್ತು ತಮ್ಮ ಕಚೇರಿಯ ಮುಂದೆ ಜಮಾಯಿಸಿದ್ದ ಗುತ್ತಿಗೆದಾರರಿಗೆ ಈ ಅಧಿಕಾರಿಗಳು "ಸರ್ಕಾರ ಏನೋ ಯಡವಟ್ಟು ಮಾಡಿದೆ" ಎಂಬಂತೆ ವರ್ತಿಸಿದರು. ಅಷ್ಟೇ ಅಲ್ಲ, "ಈ ಸಾರಿ ಸ್ವಲ್ಪ ತ್ರಾಸಾಯಿತು. ಆದರೆ ಮುಂದಿನ ವರ್ಷದ ಅನುದಾನದಲ್ಲಿ ಖಂಡಿತ ಬಿಲ್ ಪಾವತಿಯಾಗುತ್ತೆ ಅದಕ್ಕೆ ಬೇಕಾದ ತಯಾರಿಯೆಲ್ಲ ನಡೆದಿದೆ" ಎಂದೂ ಮತ್ತೊಂದು ಸುಳ್ಳನ್ನು ಹೇಳಿದರು.

ಆದರೆ ಈಗಾಗಲೇ ಎಚ್ಚೆತ್ತುಕೊಂಡಿರುವ ಗುತ್ತಿಗೆದಾರರು ಅಧಿಕಾರಿಗಳ ಈ ಮಾತನ್ನು ನಂಬಿಲ್ಲ, ಅವರೆಲ್ಲ ಈಗ ಅಧಿಕಾರಿಗಳೊಂದಿಗೆ ಮತ್ತೊಂದು ಸುತ್ತಿನ ಗಲಾಟೆಗೆ ರೆಡಿಯಾಗುತ್ತಿದ್ದಾರೆ.

ಗ್ರಾಮೀಣಾಭಿವೃದ್ಧಿ ಮಂತ್ರಿ ಜಗದೀಶ್ ಶೆಟ್ಟರ್ ಕೊಂಚ ಇತ್ತ ಗಮನಹರಿಸಲಿ.

ಕ್ಷೌ

ರಾಜ್ಯದ ಮೊದಲ ಮುಸ್ಲಿಂ ಮಹಿಳಾ ಮೇಯರ್

ಮಂಗಳೂರಿನ ಗುಲ್ಜಾರ್ ಬಾನು

ಸಂದರ್ಶನ

ಮಂಗಳೂರು ಮಹಾನಗರಪಾಲಿಕೆಯಲ್ಲಿ ಬಿಜೆಪಿಯೇ ಬಹುಮತ ಹೊಂದಿದ್ದರೂ ಸ್ಥಳೀಯರ ಹುಂಬತನದಿಂದಾಗಿ ಮೇಯರ್ ಸ್ಥಾನವನ್ನು ಆ ಪಕ್ಷ ಕಳೆದುಕೊಂಡಿದೆ. ಬಿಜೆಪಿಯ ಮೇಯರ್ ಅಭ್ಯರ್ಥಿ ಆದಾಯ ಪ್ರಮಾಣಪತ್ರದ ಮಾದರಿಯಲ್ಲೇ ಅದಕವಾಗಿರುವ ಜಾತಿ 'ಕಾಲಂ'ನ್ನು ಭರ್ತಿ ಮಾಡಿ ಸಲ್ಲಿಸಿದ್ದ ಜಾತಿಪ್ರಮಾಣ ಪತ್ರವು ಅಸ್ವೀಕೃತವಾದುದರಿಂದ ಕಾಂಗ್ರೆಸ್‌ನ ಗುಲ್ಜಾರ್ ಬಾನು ಅವರಿಗೆ ಮೇಯರ್ ಹುದ್ದೆಯ ಅದೃಷ್ಟ ಒಲಿಯಿತು. ಕರ್ನಾಟಕದ ಮೊದಲ ಮುಸ್ಲಿಂ ಮಹಿಳಾ ಮೇಯರ್ ಎಂಬ ಹೆಗ್ಗಳಿಕೆಯ ಗುಲ್ಜಾರ್ ಬಾನು ಅವರೊಂದಿಗೆ ನಡೆಸಿದ ಸಂದರ್ಶನ.

'ಲಂಕೇಶ್': ಅಸ್ಸಲಾಂ ಅಲೈಕುಂ.

ಗುಲ್ಜಾರ್ ಬಾನು: ವ ಅಲೈಕುಂ ಸಲಾಂ.


* ಬಿಜೆಪಿಗೆ ಬಹುಮತವಿರುವ ಮಂಗಳೂರು ಮಹಾನಗರಪಾಲಿಕೆಗೆ ಅದೃಷ್ಟ ಬಲದ ಮೂಲಕ ಮೇಯರ್ ಆಗಿ ಆಯ್ಕೆ ಆಗಿದ್ದೀರಿ. ಅದೂ ಕರ್ನಾಟಕದ ಇತಿಹಾಸದಲ್ಲೇ ಮೊದಲ ಮುಸ್ಲಿಂ ಮಹಿಳಾ ಮೇಯರ್ ಎಂಬ ಹೆಗ್ಗಳಿಕೆಯೊಂದಿಗೆ. ಈ ಬಗ್ಗೆ ಏನು ಹೇಳುತ್ತೀರಿ?

ನಮಗೆ ಅಧಿಕಾರ ಸಿಗುವುದು ಅಂದು ಕನಸಿನ ಮಾತಾಗಿತ್ತು, ನಿಮಗೆಲ್ಲಾ ಗೊತ್ತಿರುವ ಹಾಗೆ ಬಿಜೆಪಿಯವರಿಗೆ ಆಪರೇಷನ್ ಕಮಲ ಮಾಡುವ ಅಭ್ಯಾಸ ಇದೆ. ನಮ್ಮ ಪಕ್ಷಕ್ಕೆ ಅಂತಹ ಕೆಟ್ಟ ಚಟ ಇಲ್ಲ. ಮಹಿಳಾ ಮೀಸಲಾತಿ ಬಂದಿದ್ದರಿಂದ ನಮ್ಮ ಪಕ್ಷದ ನಾಯಕರ ಆಣತಿಯಂತೆ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದ್ದೆ. ನನ್ನ ಅದೃಷ್ಟಕ್ಕೋ ಅಥವಾ ಬಿಜೆಪಿಯ ದುರಾದೃಷ್ಟಕ್ಕೋ ಬಿಜೆಪಿಯವರು ತಮ್ಮ ಅಭ್ಯರ್ಥಿಯನ್ನೂ ಕಣಕ್ಕಿಳಿಸಿರಲಿಲ್ಲ, ಸಹಜವಾಗಿಯೇ ಕಣದಲ್ಲಿದ್ದ ಅರ್ಹ ಅಭ್ಯರ್ಥಿಯಾದ ನನಗೆ ಮೇಯರ್ ಪಟ್ಟ ಒಲಿದು ಬಂತು. ಬಹಳ ಸಂತೋಷವಾಗುತ್ತಿದೆ.

* ನಿಮ್ಮ ರಾಜಕೀಯ ಬದುಕಿನ ಬಗ್ಗೆ ಹೇಳಿ...

ನಾನು ರಾಜಕೀಯ ಹಿನ್ನೆಲೆ ಇರುವ ಕುಟುಂಬದಿಂದ ಬಂದವಳೇನೂ ಅಲ್ಲ, 2002ರಲ್ಲಿ ಸುರತ್ಕಲ್ 5ನೇ ವಾರ್ಡ್‌ಗೆ ಮಹಿಳಾ ಮೀಸಲಾತಿ ಘೋಷಣೆಯಾಗಿತ್ತು, ಕಾಂಗ್ರೆಸ್ ನಾಯಕರು ಸೂಕ್ತ ಅಭ್ಯರ್ಥಿಯ ತಲಾಶೆಯಲ್ಲಿದ್ದರು. ನನ್ನ ಪಾಡಿಗೆ ಸಮಾಜ ಸೇವೆ ಮಾಡುತ್ತಾ ಇದ್ದ ನನ್ನನ್ನು ಅಭ್ಯರ್ಥಿಯಾಗುವಂತೆ ಕೋರಿದರು. ಆಗ ನಾನು ನನ್ನ ಯಜಮಾನರಲ್ಲಿ ಮತ್ತು ಕುಟುಂಬದವರಲ್ಲಿ ಚರ್ಚಿಸಿ ಹೇಳುತ್ತೇನೆ ಅಂದೆ. ನನ್ನ ಯಜಮಾನರು ಮತ್ತು ಕುಟುಂಬಿಕರು ಸಂತೋಷದಿಂದಲೇ ಒಪ್ಪಿಗೆ ನೀಡಿದರು. ಸುಲಭವಾಗಿಯೇ ಗೆದ್ದು ಬಂದೆ. 2007ರಲ್ಲಿ ಜನರಲ್ ಅಭ್ಯರ್ಥಿಯಾಗಿ ಕಣಕ್ಕಿಳಿದೆ. ನಾನು ಮೊದಲ ಅವಧಿಯಲ್ಲಿ ಮಾಡಿದ್ದ ಅಭಿವೃದ್ಧಿ ಕೆಲಸಗಳೇ ನನಗೆ ಶ್ರೀರಕ್ಷೆಯಾದವು. ಎರಡನೇ ಬಾರಿಯೂ ಸುಲಭವಾಗಿ ಆಯ್ಕೆಯಾದೆ. ಈ ಪಾಲಿಕೆಯ ಕೊನೆಯ ಅವಧಿಯಲ್ಲಿ ಬಿಜೆಪಿಯವರ ತಪ್ಪು ನಡೆಯಿಂದಾಗಿ ಮೇಯರ್ ಪಟ್ಟವೂ ಒಲಿಯಿತು.

* ಸಮಾಜ ಸೇವೆ ಮಾಡ್ತಾ ಇದ್ದೀರಿ ಎಂದಿರಲ್ಲಾ, ಯಾವ ರೀತಿಯ ಸಮಾಜ ಸೇವೆ?


ಮಂಗಳೂರಿನ ಮೇಯರ್ ಆಗಿ ಆಯ್ಕೆಯಾದಾಗ ಗುಲ್ಜಾರ್ ಬಾನು

ನಮ್ಮದು ಒಂದು ಕಾಲದಲ್ಲಿ ಆರ್ಥಿಕವಾಗಿ ಸ್ವಲ್ಪ ಬಲಿಷ್ಠ ಕುಟುಂಬವೇ ಆಗಿತ್ತು, ನಮಗೆ ಬಾಡಿಗೆ ಕ್ವಾಟ್ರಸ್‌ಗಳು, ಬಸ್ಸುಗಳು, ಜಮೀನು ಹೀಗೆ ಎಲ್ಲವೂ ಇತ್ತು, ಮನೆಯ ಕಡೆ ಯಾವ ಅನಾನುಕೂಲತೆಯೂ ಇರಲಿಲ್ಲ, ನನಗೆ ಬೀದಿಮಕ್ಕಳು, ಮಾನಸಿಕ ಅಸ್ವಸ್ಥಮಕ್ಕಳು, ಚಿಂದಿ ಆಯುವ ಮಕ್ಕಳನ್ನು ಕಂಡರೆ ಕರುಳು ಚುರುಕ್ಕೆನ್ನುತ್ತಿತ್ತು, ಬೀದಿ ಬದಿಯಲ್ಲಿರುವ ಮಾನಸಿಕ ಅಸ್ವಸ್ಥ ಮತ್ತು ಚಿಂದಿ ಆಯುವ ಮಕ್ಕಳನ್ನು ಮನೆಗೆ ಕರೆತಂದು ನಾನೇ ಸ್ವತಃ ಅವರ ತಲೆಗೂದಲು, ಉಗುರುಗಳನ್ನು ಕತ್ತರಿಸಿ ಸ್ನಾನ ಮಾಡಿಸಿ, ಒಳ್ಳೆಯ ಬಟ್ಟೆ ತೊಡಿಸಿ, ಅವರಿಗೆ ಅಗತ್ಯ ಚಿಕಿತ್ಸೆಗಳನ್ನು ಕೊಡಿಸಿ, ಸ್ವತಃ ನನ್ನ ಕೈಗಳಿಂದಲೇ ಅಡುಗೆ ಮಾಡಿ ಬಡಿಸುತ್ತಿದ್ದೆ. ಅಂತಹ ಮಕ್ಕಳನ್ನು ಸಾಕಲೆಂದೇ ನಮ್ಮ ಬಾಡಿಗೆ ಕ್ವಾಟ್ರಸ್‌ನ ಒಂದು ಮನೆಯನ್ನು ಮೀಸಲಿಟ್ಟಿದ್ದೆ. ಹೀಗೆ ಸುಮಾರು ಹದಿನೈದರಷ್ಟು ಬೀದಿ ಮಕ್ಕಳನ್ನು ತಂದು ಸಾಕಿದ್ದೆ, ಈಗಲೂ ಸಹ ನಗರದಲ್ಲಿ ಕಾಣಸಿಗುವ ಬೀದಿ ಮಕ್ಕಳಿಗೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಪ್ರಸ್ತುತಃ ಕಾನೂನು ಸಂಬಂಧೀ ತೊಡಕುಗಳು ಇತ್ಯಾದಿಗಳಿಂದಾಗಿ ನನಗೆ ಸಾಕಲು ಸಾಧ್ಯವಾಗುತ್ತಿಲ್ಲವಾದರೂ ಅಂತಹ ಮಕ್ಕಳಿಗೆ ಸೂಕ್ತ ವ್ಯವಸ್ಥೆಗಳನ್ನು ಮಾಡುತ್ತಿರುತ್ತೇನೆ. ಇದಕ್ಕೆ ಹಿಂದಿನಿಂದಲೂ ನನ್ನ ಯಜಮಾನರ ಬೆಂಬಲವಿತ್ತು, ನನ್ನ ಮಕ್ಕಳೂ ಬೀದಿಮಕ್ಕಳ ಬಗ್ಗೆ ನನ್ನಂತೆಯೇ ಆಸ್ಥೆ ತೋರಿಸುತ್ತಾರೆ.

* ನಿಮ್ಮ ಸಂಸಾರ, ವೈಯಕ್ತಿಕ ಬದುಕು, ವಿದ್ಯಾಭ್ಯಾಸ ಇತ್ಯಾದಿ..

ನಾನು ಹೆಚ್ಚೇನೂ ಶಾಲೆ ಕಲಿಯಲಿಲ್ಲ, ಎಂಟನೇ ತರಗತಿಯಲ್ಲಿರುವಾಗಲೇ ನನಗೆ ಮದುವೆ ಮಾಡಿದರು. ನನ್ನದು ಹತ್ತು ಮಕ್ಕಳ ತುಂಬು ಸಂಸಾರ. ಏಳು ಹೆಣ್ಣು ಮತ್ತು ಮೂರು ಗಂಡು. ಎಲ್ಲಾ ಮಕ್ಕಳಿಗೂ ವಿದ್ಯೆ ಕೊಡಿಸಿದ್ದೇನೆ. ಕೊಡಿಸುತ್ತಿದ್ದೇನೆ. ನನ್ನ ಚಿಕ್ಕ ಮಗಳು ಆರನೇ ತರಗತಿಯಲ್ಲಿ ಕಲಿಯುತ್ತಿದ್ದಾಳೆ. ನನ್ನ ಪತಿ ಸಂಶುದ್ದೀನ್ ಶೇಖ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಪದವೀಧರರು. ಆದರೆ ಪ್ರಸ್ತುತ ಅವರು ನಮ್ಮ ಊರಲ್ಲೇ ಫಿರೂ ಫ್ಯಾನ್ಸಿ ಅಂತ ಫ್ಯಾನ್ಸಿ ಅಂಗಡಿ ಇಟ್ಟುಕೊಂಡಿದ್ದಾರೆ.

* ಓರ್ವ ತುಂಬು ಸಂಸಾರದ ಗೃಹಿಣಿಯಾಗಿ ರಾಜಕೀಯ, ಕುಟುಂಬ, ಮನೆ, ಸಮಾಜ ಸೇವೆ ಎಲ್ಲಕ್ಕೂ ಸಮಯ ಹೊಂದಿಸಲು ಸಾಧ್ಯವಾಗುತ್ತದೆಯೇ?

ಎಲ್ಲವನ್ನೂ ಅಡ್ಜಸ್ಟ್ ಮಾಡ್ಕೊಳ್ಳಬೇಕಾಗುತ್ತದೆ. ಆದಿತ್ಯವಾರ ನಾನು ಯಾವ ಕಾರ್ಯಕ್ರಮಕ್ಕೂ ಹೋಗುವುದಿಲ್ಲ, ಆದಿತ್ಯವಾರವನ್ನು ನನ್ನ ಸಂಸಾರಕ್ಕಾಗಿಯೇ ಮೀಸಲಿಟ್ಟಿದ್ದೇನೆ. ನನ್ನ ಯಜಮಾನರ ಮತ್ತು ಮಕ್ಕಳ ಸಹಕಾರದಿಂದ ಎಲ್ಲವನ್ನೂ ಸುಧಾರಿಸಿಕೊಂಡು ಹೋಗುತ್ತೇನೆ.

* ಮೇಯರ್ ಪದವಿಗೆ ರಾಜೀನಾಮೆ ನೀಡಲು ಬಿಜೆಪಿಯವರು ಆಮಿಷ ಒಡ್ಡಿದ್ದರ ಬಗ್ಗೆ ಹೇಳುತ್ತೀರಾ?

ಮೇಯರ್ ಸ್ಥಾನ ಬಿಟ್ಟುಕೊಡುವಂತೆ ಬಿಜೆಪಿಯವರು ನನಗೆ ದೊಡ್ಡ ಮೊತ್ತದ ಆಫರ್ ಕೊಟ್ಟಿದ್ದರು. ನಾನು ಜನಸೇವೆಗೆ ಬಂದವಳು. ಅವರಲ್ಲಿ ದುಡ್ಡಿದ್ದರೆ ಅವರಿಗೆ ಆಯಿತು, ನಾನು ಮಣಿಯಲಿಲ್ಲ.

* ನಿಮ್ಮ ಪಕ್ಷದ ನಾಯಕರ ಮತ್ತು ಸಹ ಕಾರ್ಪೊರೇಟರ್‌ಗಳ ಸಹಕಾರ ಹೇಗಿದೆ?

ನಮ್ಮ ನಾಯಕ ಜನಾರ್ಧನ ಪೂಜಾರಿಯವರು ನನ್ನ ಬೆನ್ನಿಗಿದ್ದಾರೆ. ಪಕ್ಷದ ಎಲ್ಲಾ ಕಾರ್ಪೊರೇಟರ್‌ಗಳೂ ಒಳ್ಳೆಯ ಸಹಕಾರ ನೀಡುತ್ತಿದ್ದಾರೆ.

* ಅಧಿಕಾರಿ ವರ್ಗದ ಸಹಕಾರ?

ಎಲ್ಲರೂ ಒಳ್ಳೆಯ ಸಹಕಾರ ನೀಡುತ್ತಿದ್ದಾರೆ.

* ನಿಮ್ಮ ಮುಸ್ಲಿಂ ಸಮಾಜದ ಸಹಕಾರ ಹೇಗಿದೆ?

ಈಗ ನಮ್ಮವರು ವಿದ್ಯಾವಂತರಾಗುತ್ತಿದ್ದಾರೆ. ನಮ್ಮ ಸಮಾಜ ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮುನ್ನಡೆಗೆ ಉತ್ತಮ ಬೆಂಬಲ ನೀಡುತ್ತಿದೆ. ನಮ್ಮ ಸಮಾಜ ಬದಲಾಗಿದೆ. ಇಂದು ನಮ್ಮ ಮಹಿಳೆ ಮೇಯರ್ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

* ಪಾಲಿಕೆಯ ಹಿಂದಿನ ಮೇಯರ್ ಬೀದಿವ್ಯಾಪಾರಿಗಳಿಗೆ ಬಹಳಷ್ಟು ತೊಂದರೆ ಕೊಟ್ಟಿದ್ದರು. ಬೀದಿ ವ್ಯಾಪಾರಿಗಳ ಕುರಿತಂತೆ ನಿಮ್ಮ ನಿಲುವೇನು?

ಅವರು ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದಾರೆ. ನನ್ನ ಅವಧಿಯಲ್ಲಿ ಅವರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆ. ಟೈಗರ್ ಸ್ಕ್ವಾಡನ್ನು ಬರ್ಖಾಸ್ತುಗೊಳಿಸುತ್ತೇನೆ. ಅಷ್ಟಕ್ಕೂ ಅವರೇನು ಕಳ್ಳತನವೋ, ಭಿಕ್ಷೆ ಬೇಡುವುದೋ ಮಾಡುತ್ತಿಲ್ಲವಲ್ಲ, ದುಡಿಯುವ ವರ್ಗಕ್ಕೆ ಯಾವತ್ತೂ ಉಪಟಳ ಕೊಡಲಾರೆ. ಅವರು ದಾರಿಹೋಕರಿಗೆ ತೊಂದರೆಯಾಗದಂತೆ ವ್ಯಾಪಾರ ಮಾಡಿಕೊಂಡಿರಲಿ.

* ನಿಮ್ಮ ಆದ್ಯತೆಯ ಕೆಲಸಗಳೇನು?

ಒಳ ರಸ್ತೆಗಳ ದುರಸ್ತಿ, ಚರಂಡಿ ವ್ಯವಸ್ಥೆ ಮತ್ತು ನಗರ ಶುಚಿತ್ವ.

* ಮಂಗಳೂರಿನಲ್ಲಿ ನೀರಿನ ಸಮಸ್ಯೆ ಇದೆಯಲ್ಲಾ?

ಇದೆ. ಅದು ಎಲ್ಲೆಡೆಯೂ ಇರುವ ಸಮಸ್ಯೆಯೇ ಆಗಿದೆ. ಆದರೂ ಕೂಡಾ ಏಪ್ರಿಲ್, ಮೇ ತಿಂಗಳಲ್ಲೂ ಎರಡು ದಿನಕ್ಕೊಂದು ಬಾರಿ ನೀರು ಕೊಡುತ್ತಿದ್ದೇವೆ. ತುಂಬೆ ಡ್ಯಾಮ್‌ನಲ್ಲಿ 7 ಅಡಿ ಇದ್ದ ನೀರಿನ ಮಟ್ಟ ಇತ್ತೀಚೆಗಿನ ಸ್ವಲ್ಪ ಮಳೆಯಿಂದಾಗಿ 11 ಅಡಿಗೇರಿದೆ. ಜನತೆಗೆ ಸಾಧ್ಯವಾದಷ್ಟು ನೀರು ಒದಗಿಸಲು ಗರಿಷ್ಠ ಪ್ರಯತ್ನ ಮಾಡುತ್ತೇನೆ.

* ನಿಮ್ಮ ರಾಜಕೀಯ ಭವಿಷ್ಯ ಉಜ್ವಲವಾಗಲಿ.

ಆಮೀನ್, ದಯಮಾಡಿ ದುವಾ ಮಾಡಿ.


ಸಂದರ್ಶನ: **ಇಸ್ಮತ್ ಫಜೀರ್**

ಬೆಂಗಳೂರು ಪದವೀಧರ ಕ್ಷೇತ್ರ ಚುನಾವಣೆ

ರಾಮಚಂದ್ರ ಗೌಡನ ಮೊದಲ ಸೋಲು!

ಬೆಂಗಳೂರು ಪದವೀಧರ ಕ್ಷೇತ್ರದ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯ ಹುಟ್ಟು ಭ್ರಷ್ಟ ರಾಮಚಂದ್ರಗೌಡ ಇದೇ ಮೊದಲ ಬಾರಿಗೆ ಸೋತು ಮನೆ ಸೇರುವ ಸಾಧ್ಯತೆಗಳು ಎದ್ದು ಕಾಣುತ್ತಿವೆ.


ಈ ಎಲೆಕ್ಷನ್ ಜೂನ್‌ನಲ್ಲಿ ನಡೆಯುತ್ತಿದೆ. ಅಲ್ಲದೆ ಈ ಬಾರಿ ಒಂದು ಲಕ್ಷ ಚಿಲ್ಲರೆ ಮತ ದಾರರು ಹೊಸದಾಗಿ ಹೆಸರು ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಹಿಂದೆಂದಿಗಿಂತಲೂ ಈ ಬಾರಿ ಸಖತ್ ಪೈಪೋಟಿ ನಡೆಯುವ ಸಾಧ್ಯತೆಗಳು ಕಾಣುತ್ತಿವೆ.




ಕಾಂಗ್ರೆಸ್‌ನಿಂದ ರಾಮೋಜಿ ಗೌಡ ಹಾಗೂ ಜೆಡಿಎಸ್‌ನಿಂದ ಅ. ದೇವೇಗೌಡರು ಕಣಕ್ಕಿಳಿದಿದ್ದಾರೆ. ಈ ಬಾರಿಯ ಇನ್ನೊಂದು ವಿಶೇಷ ಏನೆಂದರೆ ಅಣ್ಣಾ ಹಜಾರೆ ಬಳಗದ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಮತ್ತಿತರರ ಬೆಂಬಲ ಪಡೆದಿರುವ ಅಶ್ವಿನ್ ಎಂಬುವವರೂ ಎಲೆಕ್ಷನ್‌ಗೆ ಇಳಿಯುತ್ತಿರುವುದು!

ರಾ.ಗೌಡ ಬಂದ-ತಿಂದ

ಈಗಾಗಲೇ ನಾಲ್ಕು ಬಾರಿ ಎಂಎಲ್‌ಸಿ ಆಗಿರುವ ಬಿಜೆಪಿಯ ರಾಮಚಂದ್ರ ಗೌಡ ಈ ಬಾರಿ ಗೆಲ್ಲುವುದು ಅಷ್ಟು ಸುಲಭವಾಗಿಲ್ಲ, ಯಡ್ಡಿ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದಾಗ ವೈದ್ಯರ ನೇಮಕಾತಿಯಲ್ಲಿ ಲಕ್ಷಾಂತರ ರೂಪಾಯಿ ತಿಂದು ಸಿಕ್ಕಿಬಿದ್ದಾದ ಮೇಲೆ ರಾ. ಗೌಡನ ಮಂತ್ರಿಗಿರಿ ಹೋಯಿತು. ಈತ ಮಹಾನ್ ಭ್ರಷ್ಟನೆಂಬುದು ಈಗ ಇಡೀ ರಾಜ್ಯಕ್ಕೆ ತಿಳಿದಿದೆ. ಈತ ಎಂಎಲ್‌ಸಿ ಆಗಿದ್ದಾಗಿನಿಂದಲೂ ಇವತ್ತಿನವರೆಗಿನ ಸಾಧನೆಗಳೇನೆಂಬುದನ್ನು ದುರ್ಬೀನು ಹಾಕಿ ಹುಡುಕಿದರೂ ಒಂದೇ ಒಂದು ಸಿಗುವುದಿಲ್ಲ, ಶಾಸಕಗಿರಿಯ ಫಂಡ್ ಹಣವೆಂದು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಯಂತೆ ಅನುದಾನ ಸಿಕ್ಕಿದೆಯಾದರೂ ಅದೆಲ್ಲಾ ಎಲ್ಲಿ ಯಾರಿಗಾಗಿ ಖರ್ಚಾಗಿದೆಯೆಂಬ ವಿವರಗಳು ಯಾರಿಗೂ ಗೊತ್ತಿಲ್ಲ, ಮಾಡಿಸಿರುವ ಕೆಲಸ ಅಷ್ಟೋ ಇಷ್ಟೋ ಇದೆ ಅಂತಾದರೂ ಅದರಲ್ಲಿ ಪ್ರತಿಯೊಂದಕ್ಕೂ ಕಂಟ್ರಾಕ್ಟರ್‌ಗಳಿಂದ ಇಪ್ಪತ್ತು ಪರ್ಸೆಂಟ್ ಲಂಚ ಕಿತ್ತು ಕೆಲಸ ಕೊಡಿಸಿರುವ ಮಹಾನ್ ಸಾಧಕನೀತ. ಈ ರಾಮಚಂದ್ರ ಗೌಡನಿಗೆ ಈಗ ಅದೆಂತಹಾ ಅಹಂಕಾರ ಬಂದಿದೆಯೆಂದರೆ ಈತ ಅಲ್ಲಿಇಲ್ಲಿ ಓಡಾಡಿ ಜನರ ಹತ್ತಿರ ಓಟನ್ನೂ ಕೇಳುತ್ತಿಲ್ಲ, ಹೇಳಿಕೊಳ್ಳಲಿಕ್ಕೆ ನಾಲ್ಕು ಸಾರಿ ಗೆದ್ದಿದ್ದೇನೆ ಅನ್ನುತ್ತಾನಾದರೂ ಕಳೆದ ಬಾರಿ ದಳ-ಬಿಜೆಪಿ ಮೈತ್ರಿಯ ಕಾರಣದಿಂದಾಗಿ ಜೆಡಿಎಸ್‌ನವರು ಕ್ಯಾಂಡಿಡೇಟ್ ಹಾಕಿರಲಿಲ್ಲ. ಅದಕ್ಕೂ ಹಿಂದೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ನಡೆದಿದ್ದ ಚುನಾವಣೆಯಲ್ಲಿ ಈಗಿನ ಜೆಡಿಎಸ್ ಅಭ್ಯರ್ಥಿ ಅ. ದೇವೇಗೌಡರೇ ಆಗಲೂ ಸ್ಪರ್ಧಿಸಿದ್ದರು. ಒಂದು ಲೆಕ್ಕಾಚಾರದ ಪ್ರಕಾರ ರಾಮಚಂದ್ರ ಗೌಡ ಅವತ್ತೇ ಸೋತು ಹೋಗಬೇಕಿತ್ತು, ಆದರೆ ದಳದ ದೇವೇಗೌಡರ ಲೆಕ್ಕಕ್ಕೆ ಸೇರಬೇಕಿದ್ದ 2069 ಓಟುಗಳು ಅನರ್ಹಗೊಂಡ ಕಾರಣ ರಾ. ಗೌಡ ಗೆದ್ದರೆಂದು ಅನೌನ್ಸ್ ಮಾಡಬೇಕಾಗಿ ಬಂದಿತ್ತು.



ಆದರೆ ಈ ಬಾರಿ ರಾ.ಗೌಡನ ನಸೀಬು ಖೋಟಾ ಆದಂತಿದೆ. ಜೆಡಿಎಸ್‌ನ ಅಭ್ಯರ್ಥಿ ಅ. ದೇವೇಗೌಡ ರಭಸದಿಂದ ಚುನಾವಣಾ ಕಣಕ್ಕಿಳಿದಿದ್ದಾರೆ. ಮಾಗಡಿಯ ಮಾನಗಲ್‌ನವರಾದ ದೇವೇಗೌಡರು ಶಿಕ್ಷಕರಿಗೆ ಅನೇಕ ರೀತಿಯಲ್ಲಿ ನೆರವಾದದ್ದು ಈಗ ಅವರಿಗೆ ಬಲ ತಂದಿದೆ.



ಕಾಂಗ್ರೆಸ್‌ನ ರಾಮೋಜಿ ಗೌಡರು ಆನೇಕಲ್‌ನವರಾಗಿದ್ದು ತೀವ್ರ ಪೈಪೋಟಿ ಕೊಡಲು ತಯಾರಾಗುತ್ತಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಚಂದ್ರಶೇಖರ್ ಕೂಡ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನಿಸಿ ವಿಫಲರಾಗಿದ್ದಾರೆ.

ಉಳಿದಂತೆ ಹೊಸ ತಲೆಮಾರಿನ ವಿಭಿನ್ನ ಚಿಂತನೆಗಳ ಕಾರಣಕ್ಕೆ ಅಶ್ವಿನ್‌ರ ಸ್ಪರ್ಧೆ ಕುತೂಹಲ ಕೆರಳಿಸುತ್ತಿದೆ.

ಒಂದು ಲೆಕ್ಕಾಚಾರದಲ್ಲಿ ಈ ನಾಲ್ಕೂ ಮಂದಿ ಹೋರಾಟದ ಕಣದಲ್ಲಿದ್ದಾರೆಂದೇ ಹೇಳಬಹುದು.

ಬೆಂಗಳೂರು ನಗರ, ರಾಮನಗರ, ಕನಕಪುರ, ಚನ್ನಪಟ್ಟಣ, ಮಾಗಡಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ, ದೇವನಹಳ್ಳಿ, ಆನೇಕಲ್‌ಗೆ ಸೇರಿರುವ ಸುಮಾರು ಒಂದು ಲಕ್ಷ ನೋಂದಾಯಿತ ಪದವೀಧರ ಮತ ದಾರರು ಈ ಬಾರಿ ಓಟು ಹಾಕಲಿದ್ದಾರೆ.


ಈ ಪ್ರಬಲದ ಪೈಪೋಟಿಯ ಮಧ್ಯೆ ವೆಂಕಟೇಶ್, ರಾಜಣ್ಣ ಎಂಬ ಒಕ್ಕಲಿಗ ಅಭ್ಯರ್ಥಿಗಳೂ ಹಾಗೂ ಡಾ. ಕೆ. ಸುರೇಶ್ ಎಂಬ ಬ್ರಾಹ್ಮಣ ಆಕಾಂಕ್ಷಿಯೂ ಅಲ್ಲಲ್ಲಿ ಓಡಾಡುತ್ತಿದ್ದಾರೆ. ಈ ಪಕ್ಷೇತರ ಅಭ್ಯರ್ಥಿಗಳಿಂದ ಆಗುತ್ತಿರುವ ಒಂದೇ ಒಂದು ಉಪಕಾರ ಏನೆಂದರೆ ಯಾವ್ಯಾವುದೋ ಊರು ಕೇರಿಗಳಲ್ಲಿರುವ ಪದವೀಧರರನ್ನು ಹುಡುಕಿ ಪತ್ತೆಹಚ್ಚಿ ತಾವೇ ಸ್ವತಃ ಅರ್ಜಿ ತುಂಬಿಸಿ ಓಟರ್ಸ್ ಲಿಸ್ಟಿಗೆ ಸೇರಿಸುತ್ತಿದ್ದಾರೆ.

ಆದರೂ ಇವರೆಲ್ಲಾ ಆಟಕುಂಟು ಲೆಕ್ಕಕ್ಕಿಲ್ಲವೆಂಬಂತೆ ಕ್ಯಾಂಡಿಡೇಟ್‌ಗಳಷ್ಟೇ.

ಬಿಜೆಪಿಯ ರಾಮಚಂದ್ರ ಗೌಡನ ಮುಖವಾಡ ಕಳಚಿ ಬಿದ್ದಿರುವ ಕಾರಣದಿಂದಾಗಿ ಈ ಬಾರಿ ಆತ ಗೆಲ್ಲಲಾರನೆಂಬುದು ಖಚಿತ.

ಚುನಾವಣೆಯೆಂಬ ಗದ್ದಲದಲ್ಲಿ ಚಳವಳಿಗಳ ಗರ್ಭಪಾತ

ಚುನಾವಣೆಗಿನ್ನೂ ಒಂದೂವರೆ ವರ್ಷವಿದೆ. ಒಂದೂವರೆ ನಿಮಿಷಗಳಷ್ಟು ಶಾಂತರಾಗಿ ಯೋಚಿಸುವ ಸಹನೆಯೂ ಇರದ ರಾಟನಿರತ ಜನರನೇಕರು ಹೊಸ ರಾಜಕೀಯ



ಳನ್ನು ತೇಲಿ ಬಿಡುವ ಉಮೇದಿನಲ್ಲಿದ್ದಾರೆ. ಆಶ್ಚರ್ಯದ ಜೊತೆಗೆ ಮರುಕವನ್ನು ಸುವಂತಿದೆ.

ಈ ಪ್ರಯತ್ನ ಹಾಗೂ ಇದರ ಗಿರುವವರ ಉದ್ದೇಶಗಳ ಬಗ್ಗೆ, ಮಗಳ ಕುರಿತು ನಂತರ ಚರ್ಚಿಸೋಣ. ಶಃ ಒಂದಂತೂ ಖಚಿತ. ಕರ್ನಾಟಕದಲ್ಲಿ ಬರುವ ಅಸೆಂಬ್ಲಿ ಚುನಾವಣೆಗಳು ಈ ನಂತಿರುವುದಿಲ್ಲ. ಜಾತಿ, ದುಡ್ಡು, ತೋಳ್ಬಲ, ಶವಾದದ ಹೊಸ ಸಮೀಕರಣಗಳ ಎಲೆಕ್ಷನ್ ಗಲಿದೆ. ಕಾಂಗ್ರೆಸ್, ಜಾತ್ಯತೀತ ದಳ, ಗಳ ಜೊತೆಗೆ ಈಗತಾನೆ ಹುಟ್ಟಿರುವ ಳ್ಳರ ಬಿ.ಎಸ್.ಆರ್ ಕಾಂಗ್ರೆಸ್ಸು, ಮುಂದೆ ಬಹುದಾದ ಯಡಿಯೂರಪ್ಪನ ಪಕ್ಷಗಳೆಲ್ಲಾ ಆಟಾಟೋಪ ನಡೆಸಲಿವೆ.


ವರ ಪೈಕಿ ಯಾರೊಬ್ಬರೂ ಸಹ, ನಮ್ಮ ಟಕವನ್ನು ಉದ್ಧಾರ ಮಾಡಿ ಜನರ ಕೈಗೆ ವನ್ನು ತಂದಿಡುವ ವಿಚಾರದಲ್ಲಿ ಮುವರಿಗಿಂತ ಒಂದಿಂಚೂ ಕಮ್ಮಿ ಡುವುದಿಲ್ಲ.

ಅವರು ಇರುವುದೇ ಹೀಗೆ.

ರಾಜಕೀಯವೆಂದರೆ ಸಲೀಸಾಗಿ ದುಡ್ಡು ಸುವ, ಅಧಿಕಾರ, ಅಂತಸ್ತು ಗಿಟ್ಟಿಸುವ ದಂಧೆ ನಂಬಿರುವ ಜನರಿಂದ ಬೇರೇನನ್ನಾದರೂ ಕ್ಷಿಸಲು ನಮಗೆ ಹೇಗೆ ಸಾಧ್ಯ?

ಆದರೆ ಈ ಕ್ಯಾಟಗರಿಗೆ ಇದುವರೆಗೂ ದದ ಜನ ಚುನಾವಣಾ ರಾಜಕೀಯದ ಬಗ್ಗೆ ತನಾಡಲು ಶುರು ಮಾಡಿದರೆ, ಭ್ರಮೆಗಳನ್ನು ಹಂಚಲು ಹೊರಟರೆ ಅಂತವರಿಂದ ನಾವೇನನ್ನು ನಿರೀಕ್ಷಿಸಬಹುದು?

ಕರ್ನಾಟಕದ ಪ್ರಗತಿಪರರ ಕುರಿತು ಈ ಮಾತು ಹೇಳಬೇಕಿದೆ. ಪ್ರಶ್ನೆ ಕೇಳಬೇಕಿದೆ. ಜನಪರ ಸಂಘಟನೆಗಳಲ್ಲಿ ಇರುವ ಮಿತ್ರರ ರಾಜಕೀಯ ಗ್ರಹಿಕೆಗಳೇನು, ಹರ್ಸನಲ್ಲಾದ ಆಕಾಂಕ್ಷೆಗಳೆಷ್ಟು, ಇವರುಗಳ ಚುನಾವಣಾ ಮೈತ್ರಿ, ಟಿಕೆಟ್ ಆಕಾಂಕ್ಷೆಗಳಿಂದ ಜನಸಮುದಾಯಕ್ಕೆ ಏನು ಸಿಗಲಿದೆ ಎಂಬುದನ್ನು ನಾವೆಲ್ಲಾ ನೋಡಬೇಕಿದೆ. ಹಾಗೆ ಹೇಳಬೇಕೆಂದರೆ ಕರ್ನಾಟಕದ ಜನಪರ ಚಳವಳಿಗಳಿಗೆ, ಪ್ರಗತಿಪರರಿಗೆ ಚುನಾವಣಾ ರಾಜಕೀಯ ಹೊಸದೇನಲ್ಲ. 60 ರ ದಶಕದ ಪ್ರಜಾ ಸೋಶಿಯಲಿಸ್ಟ್ ಪಾರ್ಟಿ ಭೂ ಹೋರಾಟಗಳಿಂದಲೇ ಜನಮನ್ನಣೆ ಪಡೆದು ಶಾಂತವೇರಿ ಗೋಪಾಲ ಗೌಡರಂತ ಅಸಾಮಾನ್ಯರು ಶಾಸಕರಾಗಿ ಗೆದ್ದು ಬಂದಿದ್ದರು. ನಂತರ 80 ರ ದಶಕದಲ್ಲಿ ಚಿಗುರೊಡೆದ ರೈತ ಸಂಘ, ದಲಿತ ಚಳವಳಿ




ಹಾಗೂ ಸಮಾಜವಾದಿಗಳ ಜಂಟಿ ಪ್ರಯತ್ನವಾಗಿ ಪ್ರಗತಿರಂಗವನ್ನು ರೂಪಿಸುವ ಆಕಾಂಕ್ಷೆ ವಿಫಲವಾಗಿತ್ತು.

ವ್ಯವಸ್ಥೆಯ ಬದಲಾವಣೆಗಾಗಿ ಶುರುವಾಗುವ ಯಾವುದೇ ಹೋರಾಟ ಒಂದು ಹಂತಕ್ಕೆ ಬಂದು ತಲುಪುತ್ತಿದ್ದಂತೆ ಮುಂದೇನು? ಎಂಬ ಪ್ರಶ್ನೆ ಪದೇಪದೇ ಎದುರಾಗುತ್ತದೆ. ಆಗ ರೈತ -ದಲಿತ ಚಳವಳಿಗಳ ಎದುರು ಇದೇ ಪ್ರಶ್ನೆ ಇತ್ತು. ಕೊನೆಗೆ ಚುನಾವಣಾ ರಾಜಕೀಯದಲ್ಲಿ ಈ ಪ್ರಶ್ನೆಗೆ ಉತ್ತರ ಹುಡುಕಲು ಯಾವಾಗ ಹೊರಟರೂ ಆವತ್ತೆ ಈ ಹೋರಾಟಗಳ ಗರ್ಭಪಾತವಾದಂತಾಯಿತು. ಸರ್ಕಾರಗಳಿಗೆ ಈ ಚಳವಳಿಗಳು ಅಲ್ಲಿಂದಾಚೆಗೆ ಒಂದು ಸವಾಲಾಗಿ ಉಳಿಯಲಿಲ್ಲ. ಸರಿಯಾದ ಕಾರಣಗಳೇ ಇರದೆ, ಸ್ವಪ್ರತಿಷ್ಠೆಯಿಂದಾಗಿ ಈ ಚಳವಳಿಗಳು ಒಡೆದು ಚೂರಾದವು. ಈಗಿರುವುದು ಆ ಹಿಂದಿನ ಪಳೆಯುಳಿಕೆಗಳಷ್ಟೆ. ಈ ನಡುವೆ ಜಾಗತೀಕರಣದ ಹೊಸ ಆರ್ಥಿಕ ನೀತಿಗಳು ಕರ್ನಾಟಕದ ಗ್ರಾಮೀಣ-ನಗರಗಳ ಸ್ವರೂಪವನ್ನು, ಕೃಷಿ ಕೈಗಾರಿಕೆಗಳ ದಿಕ್ಕನ್ನು, ಜನಸಾಮಾನ್ಯರ ಬೇಕುಬೇಡಗಳನ್ನು ಬುಡಸಮೇತ ಪಲ್ಲಟಗೊಳಿಸುತ್ತಿರುವಂತೆ ಕಾಣುತ್ತಿವೆ. ಬಹುತೇಕರಿಗೆ ಈ ಕರ್ನಾಟಕದ ಅಂತರ್ಯದಲ್ಲಿ ಏನೇನು ಅಲ್ಲೋಲಕಲ್ಲೋಲಗಳು ಸಂಭವಿಸುತ್ತಿವೆ ಎಂಬುದೇ ಗೊತ್ತಾಗುತ್ತಿಲ್ಲ. ಈ ಕುರಿತಂತೆ ಕರ್ನಾಟಕ ಜನಶಕ್ತಿ ಸಂಘಟನೆಯ ನೂರಾರು ಕಾರ್ಯಕರ್ತರು ಕಳೆದ ಆರು ತಿಂಗಳಿಂದ ಇನ್ನಿತರ ಪ್ರಗತಿಪರರೊಂದಿಗೆ ಸೇರಿ ರಾಜ್ಯಾದ್ಯಂತ ಒಂದು ಅಧ್ಯಯನ ನಡೆಸುತ್ತಿದ್ದಾರೆ. ನಮ್ಮ ಬಹುತೇಕ ಹೋರಾಟಗಾರರಿಗೆ ಇಂಥದೊಂದು ಅಧ್ಯಯನದ ಅವಶ್ಯಕತೆಯ ಬಗ್ಗೆಯೂ ಮನವರಿಕೆಯಾಗಿರಲಿಲ್ಲ. ಮೊದಲಿಗೆ ಇವೆಲ್ಲಾ ಅರ್ಥವಾದರೆ ತಾನೆ ಕರ್ನಾಟಕದ ಜನಪರ ಚಳವಳಿಗಳ ಆದ್ಯತೆ ಏನಾಗಿರಬೇಕು, ಜನರ ಪ್ರಥಮ ಶತ್ರುಗಳ್ಯಾರು, ಹೋರಾಟಗಳ ದಿಕ್ಕುದೆಸೆ ಏನಾಗಿರಬೇಕೆಂಬುದು ನಿಗದಿಯಾಗುವುದು. ಇಂಥದ್ದರ ಬಗ್ಗೆ ಕ್ಷಣಕಾಲವೂ ಯೋಚಿಸದೆ ಪ್ರಗತಿಪರರು ನೇರ ಚುನಾವಣೆಯತ್ತ ಹೊರಟರೆ ಅಲ್ಲೇನು ಪರಿಹಾರ ಸಿಗಲು ಸಾಧ್ಯ?


ಜನರ ಸಂಕಷ್ಟಗಳು ಬೆಳೆಯುತ್ತಾ ಹೋದಂತೆ ಅವೆಲ್ಲಾ ಪ್ರತಿಭಟನೆಗಳಾಗಿ, ಅಂತಹ ಪ್ರತಿಭಟನೆಗಳೆಲ್ಲಾ ಸಂಘಟಿತ ರೂಪ ಪಡೆದು ದೊಡ್ಡ ಆಂದೋಲನಗಳಾಗಿ ಸ್ಫೋಟಗೊಳ್ಳಲು ವರ್ಷಗಳೇ ಹಿಡಿಯುತ್ತವೆ. ಪಟ್ಟು ಹಿಡಿದು ನಿಂತರೆ ಒಂದಿಡೀ ತಲೆಮಾರಿನ ಕಾರ್ಯಕರ್ತರು ಹಾಗೂ ನಾಯಕರು ಒಂದೇ ದೃಢ ನಿರ್ಧಾರದಿಂದ ಶ್ರಮಿಸಿದರೆ ಆಗಬಹುದಾದ ಕೆಲಸವಿದು. ಆದರೆ ಇಂತಹ ಪ್ರಕ್ರಿಯೆಗಳ ನಡುವೆಯೇ ಸಿಕ್ಕಷ್ಟು ಜನರನ್ನು ಎಳೆದುಕೊಂಡು ಕೆಲವರು

ಸಂಪಾದಕೀಯ



• ಪಾರ್ವತೀಶ


ಚುನಾವಣೆಯತ್ತ ಹೊರಟರೆ ಕೊನೆಗೆ ಉಳಿಯುವುದೇನು? ಒಂದು ಉದಾಹರಣೆ ಮೂಲಕ ಹೇಳಬೇಕೆಂದರೆ ಗಣಿಕಳ್ಳ ಶ್ರೀರಾಮುಲು ಈಗ ತನ್ನನ್ನು ತಾನೇ ಹಿಂದುಳಿದವರ ನಾಯಕರೆಂಬಂತೆ ಬಿಂಬಿಸಿಕೊಳ್ಳುತ್ತಿದ್ದಾನೆ. ಕಳೆದ ಆರೆಂಟು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಸಾವಿರಾರು ಕೋಟಿ ರೂ.ಗಳ ನಿಸರ್ಗ ಸಂಪತ್ತಿನ ಲೂಟಿಯ ಪಾಲುದಾರ ಇವನು. ಖುದ್ದು ಕ್ರಿಮಿನಲ್ ರಾಜಕಾರಣಿ. 'ಆಪರೇಷನ್ ಕಮಲ'ದಂತಹ ಗಲೀಜು ತಂತ್ರ ಬಳಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹಣ ಚೆಲ್ಲಿ ಸೋಲಿಸಿದವನು. ಇಂಥವನು ತನ್ನ ಗಣಿ ಸಾಮ್ರಾಜ್ಯ ರಕ್ಷಿಸಿಕೊಳ್ಳಲು ಹಿಂದುಳಿದ ವರ್ಗಗಳ ಬಗ್ಗೆ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಏಕಾಏಕಿ ಮಾತಾಡುತ್ತಿದ್ದಾನೆ.



ಈ ವಂಚನೆಯ ಮಾತುಗಳೆಲ್ಲಾ ಕೆಲವು ಪ್ರಗತಿಪರರಿಗೆ ಹಿತವಾಗಿ ಕೇಳಿಸುತ್ತಿದೆ. ಸ್ವಂತ ಸಾಮರ್ಥ್ಯದ ಮೇಲೆ ನೂರು ಓಟನ್ನು ಪಡೆಯಲಾಗದವರೆಲ್ಲಾ ಈಗ 'ಜೈ ಶ್ರೀರಾಮುಲು' ಎನ್ನುತ್ತಾ ಜನಪರ ಚಳವಳಿಗಳ ಹೊಸ ಗರ್ಭಪಾತಕ್ಕೆ ಕೈಗೂಡಿಸುತ್ತಿದ್ದಾರೆ.

ಇಂತಹ ಭ್ರಮೆ ಬಿಡದ ಹೊರತು ಹೋರಾಟಗಳ ಪುನರಪಿ ಗರ್ಭಪಾತಗಳನ್ನು ತಡೆಯುವುದು ನಿಜಕ್ಕೂ ಕಷ್ಟ. ❖

ಅಪ್ಪ-ಅಮ್ಮ ಜಗಳದಲ್ಲಿ ಕೂಸು ಬಡವಾಗಲಿಲ್ಲ



ಅಪ್ಪ-ಅಮ್ಮ ಜಗಳದಲ್ಲಿ ಕೂಸು ಬಡವಾದ ಕತೆ, ಹಾಡುಗಳು ನಿಮಗೆ ಗೊತ್ತಿರಬಹುದು. ಆದರೆ ಅಪ್ಪ ಅಮ್ಮ ಜಗಳದಲ್ಲಿ ಕೂಸು ಬಡವಾಗುವ ಬದಲಾಗಿ ಓರ್ವ ಸಮರ್ಥ ಅನುವಾದಕನಾಗಿ ಬೆಳೆದ ಕತೆ ನಿಮಗೆ ಗೊತ್ತಿರಲಿಕ್ಕಿಲ್ಲ.


ಆ ಕತೆ ಹೀಗಿದೆ.

ಈ ಕೂಸು ಹುಟ್ಟಿದ್ದು ಒಂದು ಮುಸ್ಲಿಂ ಕುಟುಂಬದಲ್ಲಿ. ಮಜಾ ಅಂದರೆ ಅಪ್ಪನಿಗೆ ಉರ್ದು ಮಾತ್ರ ಗೊತ್ತಿದ್ದರೆ ಅಮ್ಮನಿಗೆ ಕನ್ನಡ ಮಾತ್ರ ಗೊತ್ತಿತ್ತು. ಹೀಗಿದ್ದಾಗೊಮ್ಮೆ ಅಪ್ಪ ಅಮ್ಮ ಜಗಳವಾಡಿಕೊಂಡರು. ಅಷ್ಟು ಹೊತ್ತಿಗೆ ಈ ಕೂಸು ಬೆಳೆದು ಹುಡುಗನಾಗಿದ್ದ. ಇವರ ಮುದುವೆಗಳೂ ಆದವು. ಈ ರಿಯ ಜಗಳ ಹಿಂದಿನಂತಿರದೆ ಬೇಗನೆ ಕದನ ವಿರಾಮ ಘೋಷಣೆಯಾಗದೆ ದೀರ್ಘಕಾಲ ನಡೆಯಿತು. ಬಹಳ ಮುಖ್ಯವಾಗಿ ಅಪ್ಪ ಅಮ್ಮ ಪರಸ್ಪರ ಮಾತು ಬಿಟ್ಟರು. ಆದರೆ ಮಾತಾಡದಿದ್ದರೆ ಮನೆ ನಡೆಯಬೇಕಲ್ಲ. ಹಾಗಾಗಿ ಅಪ್ಪ ಅಮ್ಮ ತಮ್ಮ ಮಾತುಕತೆಗೆ ಮಧ್ಯವರ್ತಿಯಾಗಿ ಈ ಬಾಲಕನನ್ನು ಇರಿಸಿಕೊಂಡರು. ಆಗ ಸಮಸ್ಯೆಯಾಗಿದ್ದು ಬಾಲಕನಿಗೆ. ಅಮ್ಮನಿಗೆ ಉರ್ದು ಬರಲ್ಲ, ಅಪ್ಪನಿಗೆ ಕನ್ನಡ ಬರುತ್ತಿರಲಿಲ್ಲ.

ಅಮ್ಮ ಮಗನನ್ನು ಕರೆದು "ಮಗು ನಿಮ್ಮಪ್ಪನಿಗೆ... ಹೀಗೀಗೆ ಅಂತ ಹೇಳು!" ಎನ್ನುತ್ತಿದ್ದರು.

ಅದನ್ನಾತ ಉರ್ದುಗೆ ಭಾಷಾಂತರಿಸಿಕೊಂಡು ಅಪ್ಪನಿಗೆ ಸುದ್ದಿ ಮುಟ್ಟಿಸಬೇಕಿತ್ತು. ನಂತರ ಅಪ್ಪ ಕರೆದು "ಬೇಟಾ ಮಾಸೆ ಕಹೋ...." ಅಂತ ಏನಾದರೂ ವಿಷಯ ಹೇಳಿದರೆ ಅದನ್ನಾತ ಕನ್ನಡ ವಾಕ್ಯಗಳಿಗೆ ಬದಲಿಸಿ ಅಮ್ಮನಿಗೆ ಒಪ್ಪಿಸಬೇಕಿತ್ತು.

ಇದು ಹೀಗೇ ಕೆಲ ವರ್ಷ ಕಾಲ ನಡೆಯಿತು. ಕೊನೆಗೊಂದು ದಿನ ಪೋಷಕರ ಜಗಳ ಮುಗಿಯುವಷ್ಟರಲ್ಲಿ ಬಾಲಕ ಕನ್ನಡ-ಉರ್ದು ಎರಡೂ ಭಾಷೆಯನ್ನು ಚೆನ್ನಾಗಿ ಕಲಿತುಬಿಟ್ಟಿದ್ದ. ಮುಂದೆ ಅದೇ ಬಾಲಕನೇ ನಮ್ಮ ಅತ್ಯುತ್ತಮ ಅನುವಾದಕರೆನಿಸಿಕೊಂಡರು!



ಅವರ್‍ಯಾರು ಗೊತ್ತೆ?

ಹಸನ್ ನಯೀಂ ಸುರಕೋಡ!

ಕಸಾಪ ಚುನಾವಣೆ

ಕೇಸರಿ ಕಸರತ್ತು




ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ ಕೇಸರೀಕರಣಗೊಳ್ಳುತ್ತಿದೆ. ಪ್ರಾಚೀನ ಸಾಹಿತ್ಯದಿಂದ ಪ್ರಸ್ತುತ ಸಾಹಿತ್ಯದವರೆಗೆ ಜನಪರ ಮತ್ತು ಜಾತ್ಯತೀತತೆಯ ಪ್ರತೀಕವಾಗಿದ್ದ ಕನ್ನಡ ಸಾಹಿತ್ಯ ರಂಗವನ್ನು ಕೋಮುವಾದಿ ಕೇಸರಿ ಪಡೆ ಆಕ್ರಮಿಸಿಕೊಳ್ಳಲು ಈ ಬಾರಿಯ ಚುನಾವಣೆಯಲ್ಲಿ ಕಸರತ್ತು ನಡೆಸುತ್ತಿದೆ. ಇದು ಆಘಾತಕಾರಿ ಸಂಗತಿಯಾಗಿದೆ.

ರಾಜ್ಯ ಮಟ್ಟದ ಕಸಾಪ ಅಧ್ಯಕ್ಷ ಗಾದಿಯ ಕಣದಲ್ಲಿ ಈ ಬಾರಿ ಚಂದ್ರಶೇಖರ ಪಾಟೀಲ ಮಾಲಿ ಪಾಟೀಲ್ ಹಾಲಂಬಿ, ಜಯಪ್ರಕಾಶ್ ಗೌಡ ಮತ್ತು ಜರಗನಹಳ್ಳಿ ಶಿವಶಂಕರ್ ಪ್ರಮುಖ ಸ್ಪರ್ಧಿಗಳಾಗಿದ್ದಾರೆ. ಇವರೆಲ್ಲರ ಸಾಹಿತ್ಯ ಸೇವೆಯನ್ನು ಪರಿಗಣಿಸಿದರೆ ಎಲ್ಲರೂ ಅರ್ಹ ಅಭ್ಯರ್ಥಿಗಳೇ. ತಮ್ಮ ಈ ಹಿಂದಿನ ಕಸಾಪ ಅಧ್ಯಕ್ಷಾವಧಿಯಲ್ಲಿನ ಕೆಲಸಗಳಿಂದ ಚಂಪಾ ಅನುಭವ ಮತ್ತು ಜನಪ್ರಿಯತೆಯನ್ನು ಪಡೆದಿದ್ದರೆ ಮುಂದಿನ ಅವಧಿಗೂ ಸಾಹಿತ್ಯಪರ ಯೋಜನೆಗಳ ಹಿತ-ಚಿಂತನೆ ಹೊಂದಿದ್ದಾರೆ. ಪುಂಡಲೀಕ ಹಾಲಂಬಿ ಪರಿಷತ್ತಿನ ಕೋಶಾಧ್ಯಕ್ಷ ಸ್ಥಾನದಲ್ಲಿದ್ದುಕೊಂಡು ದುಡಿದಂತವರು.

ಇವರಿಬ್ಬರ ನಡುವಿನ ಪೈಪೋಟಿ ಇಲ್ಲಿಯವರೆಗೂ ಆರೋಗ್ಯಕರವಾಗಿತ್ತು, ಆದರೆ ಚುನಾವಣೆ ಹತ್ತಿರವಾದಂತೆ ಕೋಮುವಾದಿ ಅಜೆಂಡಾ ಹೊಂದಿರುವ ಆರೆಸ್ಸೆಸ್ ಪರಿಷತ್ತನ್ನು ಕಬ್ಜಾ ಮಾಡಿಕೊಳ್ಳಲು ಹೊರಟಿದೆ. ಈ ಗುರಿ ತಲುಪಲು ಸಂಘಪರಿವಾರವು ಪ್ರಮುಖ ಸ್ಪರ್ಧಿಯಾಗಿರುವ ಚಂಪಾರವರನ್ನು ವಿರೋಧಿಸುತ್ತಾ ಲಾಬಿ ನಡೆಸುತ್ತಿರುವುದು ದೊಡ್ಡ ವಿಪರ್ಯಾಸವೇ ಸರಿ.


ಚಂಪಾ ಅವರು ಜಾತ್ಯತೀತರಾಗಿರುವುದೇ ಚೆಡ್ಡಿ ಪರಿವಾರಕ್ಕೆ ಕಿರಿಕಿರಿಯಾಗಿದೆ. ಹಾಗಾಗಿ ಚಂಪಾ ಪ್ರತಿಸ್ಪರ್ಧಿಗಳನ್ನು ಬೆಂಬಲಿಸುವ ಮೂಲಕ ಸಾಹಿತ್ಯ ಪರಿಷತ್ತಿನಲ್ಲೂ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರಲು ಯತ್ನಿಸುತ್ತಿದೆ. ಬಲ್ಲ ಮೂಲಗಳ ಪ್ರಕಾರ ಸಂಸದ ಅನಂತಕುಮಾರ್ ಆದಿಯಾಗಿ ಎಲ್ಲ ಚೆಡ್ಡಿಗಳು ಚಂಪಾ ವಿರುದ್ಧ ಪ್ರಚಾರ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಎಲ್ಲ ಬಿಜೆಪಿ ಕಾರ್ಯಕರ್ತರನ್ನೂ ಈ ಚುನಾವಣೆಯಲ್ಲಿ ಉಪಯೋಗಿಸಿ ಕೊಳ್ಳುತ್ತಾ ಮತದಾರರನ್ನು ಜಾತಿ, ಧರ್ಮದ ಹೆಸರಲ್ಲಿ ಸೆಳೆಯುವ ಟ್ರಿಕ್ಕುಗಳನ್ನು ಜಾರಿ ಮಾಡುತ್ತಿದೆ.



ಚಂಪಾ

ಜಿಲ್ಲಾ ಮಟ್ಟದಲ್ಲೂ ಚೆಡ್ಡಿಗಳ ರಾಜಕೀಯ

ಕೇವಲ ರಾಜ್ಯ ಮಟ್ಟದ ಚುನಾವಣೆಯಲ್ಲಿ ಮಾತ್ರವಲ್ಲ, ಬೆಂಗಳೂರು ನಗರ ಜಿಲ್ಲಾ ಮಟ್ಟದ ಕಸಾಪ ಚುನಾವಣೆಯಲ್ಲೂ ಚೆಡ್ಡಿಗಳ ರಾಜಕಾರಣ ಜೋರಾಗಿ ನಡೆಯುತ್ತಿದೆ. ಈ ಚುನಾವಣೆಯಲ್ಲಿ ಪ್ರಮುಖ ಸ್ಪರ್ಧಿ ಆಗಿರುವ ಟಿ. ತಿಮ್ಮೇಶ್ ಎಂಬುವವರ ವಿರುದ್ಧ ಆರೆಸ್ಸೆಸ್ ಹಿನ್ನೆಲೆಯ ಪಕ್ಕಾ ಚೆಡ್ಡಿ ಬಿಜೆಪಿಯ ಎಂ.ತಿಮ್ಮಯ್ಯರನ್ನು ಕಣಕ್ಕಿಳಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಕೇಸರಿ ಬಣ್ಣ ಹಚ್ಚಲಾಗಿದೆ.



ಹಾಲಂಬಿ

ಈ ಹಿಂದೆ ವಿ.ಸೋಮಣ್ಣ ಕಾಂಗ್ರೆಸ್‌ನಿಂದ ಬಿನ್ನಿಪೇಟೆ ಎಂಎಲ್‌ಎ ಎಲೆಕ್ಷನ್‌ಗೆ ಸ್ಪರ್ಧಿಸಿದಾಗ ಬಿಜೆಪಿ ಆತನ ವಿರುದ್ಧ ತನ್ನ ಅಭ್ಯರ್ಥಿಯನ್ನಾಗಿಸಿದ್ದು ಇದೇ ಎಂ. ತಿಮ್ಮಯ್ಯನನ್ನು. ಬಿಜೆಪಿ ಎಂಎಲ್‌ಸಿ ಅಶ್ವಥ್ ನಾರಾಯಣನಂತೂ ತಿಮ್ಮಯ್ಯನನ್ನು ಬಿಜೆಪಿ ಅಭ್ಯರ್ಥಿ ಅಂತಲೇ ಬಿಂಬಿಸಿ, ಆತನ ಪರವಾಗಿ ಕರ ಪತ್ರ ಮುದ್ರಿಸಿ ಹಂಚುತ್ತಿದ್ದಾನೆ. ಅಸಲಿಗೆ ಅಶ್ವಥ್ ನಾರಾಯಣನ ರಾಜಕೀಯ ಗುರುವೇ ಈ ತಿಮ್ಮಯ್ಯ. "ಮುಖ್ಯಮಂತ್ರಿಗಳು ಪಿ.ಇ.ಎಸ್ ಕಾಲೇಜ್ ಪಕ್ಕದಲ್ಲಿರುವ ಜಾಗವನ್ನು ಸಾಹಿತ್ಯ ಭವನ ನಿರ್ಮಾಣಕ್ಕೆಂದು ಮಂಜೂರು ಮಾಡಿದ್ದು ಇದಕ್ಕೆಂದು ಬಿಬಿಎಂಪಿ ಬಜೆಟ್‌ನಲ್ಲಿ 1.5 ಕೋಟಿ ಮೀಸಲಿಡಲಾಗಿದೆ. ಇದರ ಸಂಪೂರ್ಣ ಉಸ್ತುವಾರಿಯನ್ನು ಎಂಎಲ್‌ಸಿ ಅಶ್ವಥ್ ನಾರಾಯಣ್ ಅವರಿಗೆ ವಹಿಸಲಾಗಿದ್ದು ಅವರ ಬೆಂಬಲಿತ ಎಂ.ತಿಮ್ಮಯ್ಯರಿಗೆ ಮತನೀಡುವಂತೆ ಕೋರಲಾಗಿದೆ" ಎಂಬಂತಹ ಕರಪತ್ರಗಳನ್ನು ಹಂಚಲಾಗುತ್ತಿದೆ. ಇದು ರಾಜಕೀಯ ಪಕ್ಷಗಳ ಕರಪತ್ರಗಳಿಗಿಂತ ಭಿನ್ನವಾಗೇನೂ ಇಲ್ಲ.

ಈ ತಿಮ್ಮಯ್ಯನ ಹಿಂದೆ ಕೋಮುವಾದಿ ಆರೆಸ್ಸೆಸ್ ಅದೆಷ್ಟು ಬಲವಾಗಿ ನಿಂತಿದೆ ಎಂಬುದಕ್ಕೆ ಹಲವಾರು ಸಾಕ್ಷಿಗಳು ಸಿಗುತ್ತವೆ. ಎಂ.ತಿಮ್ಮಯ್ಯ ತನ್ನ ನಾಮಪತ್ರ ಸಲ್ಲಿಸಿದಾಗ ಆತನೊಂದಿಗೆ ಬಿಜೆಪಿಯ ಮೂರು ಜನ ವಿಧಾನ ಪರಿಷತ್ ಸದಸ್ಯರು ಹಾಗೂ ಸಾಕಷ್ಟು ಮಂದಿ ಕಾರ್ಪೋರೇಟರ್‌ಗಳು ಹಾಜರಾಗಿದ್ದರು. ಅದನ್ನು ಕಂಡ ಜನ ಇದು ಸಾಹಿತ್ಯ ಪರಿಷತ್ತಿಗೆ ನಡೆಯುತ್ತಿರುವ ಚುನಾವಣೆಯೋ ಅಥವಾ ಎಂಎಲ್‌ಸಿ ಎಲೆಕ್ಷನ್ನೋ ಎಂದು ಗೊಂದಲಗೊಂಡಿದ್ದರು.


ಹೀಗೆ ತನ್ನ ಜಾತಿ ಲಾಬಿ, ಚೆಡ್ಡಿ ನೆಟ್‌ವರ್ಕ್, ಸರ್ಕಾರದ ನೆರವು, ಹಣ ಬಲ, ಕೋಮುವಾದಿ ಕಿತಾಪತಿ... ಎಲ್ಲವನ್ನೂ ಬಳಸಿಕೊಂಡು ಕೇಸರಿ ಪಡೆ ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೂ ತನ್ನ ಕೇಸರಿ ಧ್ವಜವನ್ನು ಹಾರಿಸುವ ಕಸರತ್ತು ಮಾಡುತ್ತಿದೆ.

ಒಂದೊಮ್ಮೆ ಸಂಘ ಪರಿವಾರದ ಈ ದುರುದ್ದೇಶ ಈಡೇರಿದ್ದೇ ಆದಲ್ಲಿ ಮುಂದಿನ ಮೂರು ವರ್ಷ ಸಾಹಿತ್ಯ ಪರಿಷತ್‌ನ ಸ್ಥಿತಿ ಚಿಂತಾಜನಕವಾಗುವುದರಲ್ಲಿ ಅನುಮಾನವೇ ಇಲ್ಲ. ಸಾಹಿತ್ಯ ಸಮ್ಮೇಳನಗಳು ಕೋಮುವಾದಿ ಸಮಾವೇಶಗಳಾದರೆ, ಅವುಗಳ ಅಧ್ಯಕ್ಷಗಿರಿಯೂ ಚೆಡ್ಡಿ ಸಾಹಿತಿಗಳಿಗೆ ಸಿಗುವುದು ಗ್ಯಾರಂಟಿ. ಇನ್ನು ಪರಿಷತ್ತಿನ ಆಂತರಿಕ ಆಡಳಿತ ಹಾಗೂ ಯೋಜನೆಗಳೂ ಜನಪರ, ಜಾತ್ಯತೀತ ಕಲ್ಪನೆಯಿಂದ ದೂರ ಸರಿಯುತ್ತವೆ.

ಈಗಾಗಲೆ ಶಾಲಾ ಶಿಕ್ಷಣದ ಕೇಸರೀಕರಣಕ್ಕೆ ಮುಂದಾಗಿರುವ ಸಂಘ ಪರಿವಾರ ಸಾಹಿತ್ಯ ಪರಿಷತ್ತನ್ನೂ ಕೇಸರಿಮಯಗೊಳಿಸುವ ಹುನ್ನಾರಕ್ಕೆ ಮುಂದಾಗಿದೆ. ಇದು ಸಂಭವಿಸದಂತೆ ತಡೆಗಟ್ಟುವ ಜವಾಬ್ದಾರಿ ಚಂಪಾ ಮತ್ತು ಪುಂಡಲೀಕ ಹಾಲಂಬಿಯನ್ನೂ ಒಳಗೊಂಡಂತೆ ಇಡೀ ಪ್ರಜ್ಞಾವಂತ ಸಮುದಾಯದ ಮುಂದಿದೆ.

• ಗಿರೀಶ್ ತಾಳಿಕಟ್ಟೆ

ಸಾಹಿತ್ಯ V/s ರಾಜಕೀಯ



ಅನಂತ ಕುಮಾರ್

ಈ ಬಾರಿಯ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ರಾಜಕಾರಣಿಗಳು ನೇರವಾಗಿ ಕಣಕ್ಕಿಳಿದಿರುವುದರಿಂದ ಮತ್ತು ಜಾತಿ ಲೆಕ್ಕಾಚಾರ ಜೋರಾಗಿ ನಡೆದಿರುವುದರಿಂದ ನಿಷ್ಪಕ್ಷಪಾತ ಚುನಾವಣೆ ನಡೆಯುವ ಸಾಧ್ಯತೆಯ ಕುರಿತು ಅನುಮಾನ ಹಲವರಲ್ಲಿ ಮೂಡಿದೆ.

ಬಿಜೆಪಿ ತನ್ನ ಕೋಮುವಾದಿ ಸಿದ್ಧಾಂತವನ್ನು ಕಸಾಪದ ಮೇಲೂ ಹೇರುವ ಕೃತ್ಯಕ್ಕೆ ಕೈ ಹಾಕಿದ್ದರೆ, ಉತ್ತರದಲ್ಲಿ ಮತ್ತೊಬ್ಬ ಪ್ರಮುಖ ಸ್ಪರ್ಧಿಯಾದ ಶೇಖರ್‌ಗೌಡ ಮಾಲೀ ಪಾಟೀಲ್ ಬೆನ್ನಿಗೆ ಕಾಂಗ್ರೆಸ್ ಶಾಸಕ ಅಮರೇಗೌಡ ಬಯ್ಯಾಪುರ ತನ್ನ ಕಾರ್ಯಕರ್ತರ ಸಮೇತ ನಿಂತಿದ್ದಾರೆ. ಜಾತಿಯಲ್ಲಿ ಲಿಂಗಾಯತ ಹಾಗೂ ಹತ್ತಿರದ ಸಂಬಂಧಿ ಎನ್ನುವ ಕಾರಣಕ್ಕೆ ತನ್ನ ಎಂಎಲ್‌ಎ ಪ್ರಭಾವ ಬಳಸಿ ಪ್ರಚಾರಕ್ಕಿಳಿದಿದ್ದಾನೆ. ಇನ್ನು ಒಕ್ಕಲಿಗ ಜಾತಿಗೆ ಸೇರಿರುವ ಜಯಪ್ರಕಾಶ್ ಹೆಗ್ಡೆ ಜೆಡಿಎಸ್‌ನೊಂದಿಗೆ ಗುರುತಿಸಿಕೊಂಡಿರುವುದರಿಂದ ಹಳೇ ಮೈಸೂರು ಪ್ರಾಂತ್ಯದಲ್ಲಿ ತಕ್ಕಮಟ್ಟಿಗೆ ಆತನಿಗೆ ಬೆಂಬಲವಿದೆ. ಹೈದರಾಬಾದ್ ಮತ್ತು ಮುಂಬೈ ಪ್ರಾಂತ್ಯದಲ್ಲಿ ಚಂಪಾ ಪ್ರಾಬಲ್ಯವಿದ್ದರೆ, ಚಿತ್ರದುರ್ಗ-ತುಮಕೂರು-ದಾವಣಗೆರೆ ವ್ಯಾಪ್ತಿಯಲ್ಲಿ ಜರಗನಹಳ್ಳಿಗೆ ಲಿಂಗಾಯತರ ಬೆಂಬಲ ಸಿಗುವ ಸೂಚನೆಯಿದೆ.

ಒಟ್ಟಿನಲ್ಲಿ ಪ್ರಬುದ್ಧ ಮತದಾರರಿರುವ ಸಾಹಿತ್ಯ ಪರಿಷತ್ ಚುನಾವಣೆಗೆ ಜಾತಿ ರಾಜಕಾರಣ ಮತ್ತು ರಾಜಕೀಯ ಪಕ್ಷಗಳ ಕಳಂಕ ತಗುಲಿ ಪರಿಷತ್‌ನ ಘನತೆಯೇ ಮುಕ್ಕಾಗುತ್ತಿದೆ.

ಧಾರವಾಡ ಕ.ಸಾ.ಪ

ಲಿಂಗರಾಜ ಅಂಗಡಿ ಮುಂದೆ ಹಿರೇಮಠ ಹಿಂದೆ

ಧಾರವಾಡ ಜಿಲ್ಲಾ ಕಸಾಪ 1574 ಸದಸ್ಯರನ್ನು ಹೊಂದಿದೆ. ಹಿಂದೊಮ್ಮೆ ರಾಜ್ಯ ಕಸಾಪಕ್ಕೆ ಅಧ್ಯಕ್ಷರಾಗಿದ್ದ ಚಂಪಾ ಅವರು ಕೂಡಾ ಧಾರವಾಡದವರು. ರಾಷ್ಟ್ರ ಮಟ್ಟದ್ದಲ್ಲದೆ ರಾಜ್ಯದ ಹಲವಾರು ಪ್ರಶಸ್ತಿಗಳನ್ನು ತಮ್ಮ ಒಡಲಿಗೆ ಸೇರಿಸಿಕೊಂಡ ದಿ|| ಕರ್ಕಿ, ದ.ರಾ. ಬೇಂದ್ರೆಗಳೊಂದಿಗೆ ಇಂದಿಗೂ ಸಾಹಿತ್ಯಾಸಕ್ತರ ಗಮನ ಸೆಳೆಯುತ್ತಿರುವ ಡಾ. ಚೆನ್ನವೀರ ಕಣವಿ, ಡಾ. ಪಾಪು, ಪಟ್ಟಣಶೆಟ್ಟಿ ಮುಂತಾದವರು ಸಾಹಿತ್ಯ ಕೃಷಿಯಿಂದಾಗಿಯೇ ಜನಮಾನಸದಲ್ಲಿ ಉಳಿದಿರುವವರು.

ಇಂತಹ ವಿಶಿಷ್ಟತೆಗಳನ್ನು ಹೊಂದಿರುವ ಧಾರವಾಡ ಜಿಲ್ಲಾ ಕಸಾಪ ಅಧ್ಯಕ್ಷ ಗಾದಿ ಏರಲು ಪ್ರೊ. ಲಿಂಗರಾಜ ಅಂಗಡಿ, ಡಾ. ಡಿ.ಎಂ. ಹಿರೇಮಠ, ಪ್ರಕಾಶ ಅಂಗಡಿ ಹಾಗೂ ಡಾ. ಹನುಮಾಕ್ಷಿ ಗೋಗಿ ಕಳೆದ ಒಂದು ತಿಂಗಳಿಂದ ಪ್ರಚಾರದ ಭರಾಟೆಯಲ್ಲಿದ್ದಾರೆ. ಪ್ರೊ. ಲಿಂಗರಾಜ ಅಂಗಡಿ ಹಾಗೂ ಡಾ. ಡಿ.ಎಂ. ಹಿರೇಮಠ ನಡುವೆ ಸ್ಪರ್ಧೆ ನಡೆದಿದೆ. ಕಣದಲ್ಲಿದ್ದ ಡಂಗನವರ ಪ್ರೊ. ಲಿಂಗರಾಜ ಅಂಗಡಿ ಪರವಾಗಿದ್ದು ಕಣದಿಂದ ನಿವೃತ್ತಿ ಘೋಷಿಸಿದ್ದಾರೆ.

ಹನುಮಾಕ್ಷಿ ಗೋಗಿ ಎಂಬ ಮಹಿಳೆ ರಾಜ್ಯ ಸರ್ಕಾರದಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದು "ನಾನು ಈ ಚುನಾವಣೆಯಲ್ಲಿ ಗೆದ್ದರೆ ನನ್ನ ಕೆಲಸಕ್ಕೆ ರಾಜೀನಾಮೆ ಕೊಡುತ್ತೇನೆ. ಕಸಾಪ ಚಟುವಟಿಕೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುತ್ತೇನೆ" ಅನ್ನುತ್ತಿದ್ದಾರೆ. ಜೊತೆಗೆ "ನಾನು ಮಹಿಳೆ, ಅದಕ್ಕಾಗಿ ನನಗೆ ಒಂದು ಬಾರಿ ಅಧಿಕಾರ ಕೊಡಿ" ಎಂದು ಕೈ ಮುಗಿಯುತ್ತಿದ್ದಾರೆ. ಆಕೆ ಇವರು ಸೋಲುವುದು ಕಾಯಂ ಆಗಿದೆ.

ಮತ್ತೊಬ್ಬ ಅಭ್ಯರ್ಥಿ ಬದ್ರಾಪಾದ ಗ್ರಾಮದ ಪ್ರಕಾಶ ಅಂಗಡಿ ಎನ್ನುವವರಿಗೆ ಸಾಹಿತ್ಯದ ಗಂಧಗಾಳಿಯೇ ಗೊತ್ತಿಲ್ಲ, ತನ್ನ ಹೆಸರೂ ಸಹ ಅಂಗಡಿ ಆಗಿರುವುದರಿಂದ ಲಿಂಗರಾಜ ಅಂಗಡಿಗೆ ಬೀಳುವ ಮತಗಳು ತನಗೆ ಬಿದ್ದು ತಾನೇ ಅಧ್ಯಕ್ಷನಾಗುವೆ ಎನ್ನುವ ಕನಸು ಕಾಣುತ್ತಿರುವ ಚೆಡ್ಡಿ ಈತ. ಈತನ ಪರವಾಗಿ ಎಬಿವಿಪಿಯ ಕೆಲವರು ಕೆಲಸ ಮಾಡುತ್ತಿರುವುದಾಗಿ ತಿಳಿದುಬಂದಿದೆ. ಆದರೆ ಅದ್ಯಾವುದೂ ಈ ಚುನಾವಣೆಯಲ್ಲಿ ವರ್ಕ್‌ಔಟ್ ಆಗುವ ಸಾಧ್ಯತೆಗಳಿಲ್ಲ.

ಕಳೆದ ಬಾರಿ ಅಧ್ಯಕ್ಷ ಗಾದಿಯನ್ನು ಏರಿದ್ದ ಡಾ.ಡಿ.ಎಂ. ಹಿರೇಮಠ ಈ ಬಾರಿ ಮತ್ತೆ ಸ್ಪರ್ಧಿಸುತ್ತಿದ್ದು "ಮತ್ತೊಂದು ಬಾರಿಗೆ ಅಧ್ಯಕ್ಷಗಿರಿ ನೀಡಿ ಕಸಾಪವನ್ನು ಉದ್ಧಾರ ಮಾಡಲು ಕೈಜೋಡಿಸಿ" ಎಂದು ಊರೂರು ಅಲೆಯುತ್ತಿದ್ದಾರೆ. ಕಳೆದ ಬಾರಿಯ ಚುನಾವಣೆ ನಡೆದಾಗ ಈತ ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರ ಸಭೆಯೊಂದನ್ನೂ ಏರ್ಪಡಿಸಿದ್ದರು. ಅಲ್ಲಿ "ಒಂದು ಬಾರಿ ನನಗೆ ಅಧ್ಯಕ್ಷಗಿರಿ ಗಾದಿ ದಯಪಾಲಿಸಿ. ಮುಂದಿನ ಚುನಾವಣೆಯಲ್ಲಿ ಬೇರೆಯವರಿಗೆ ಅವಕಾಶ ಮಾಡಿಕೊಡುತ್ತೇನೆ" ಎಂದು ಭರವಸೆ ನೀಡಿಯೇ ಅಂದಿನ ಚುನಾವಣೆಯಲ್ಲಿ ಗೆದ್ದಿದ್ದರು. ಆದರೆ ಈಗ ನೋಡಿದರೆ ಎಲ್ಲರಿಗೂ ಮಕಮಲ್ ಟೋಪಿ ತೊಡಿಸಿರುವ ಈತ ಈಗ "ಮತ್ತೊಂದು ಚುನಾವಣೆ ಬಂದಿದೆ, ನನಗೆ ಮತ್ತೊಂದು ಅವಕಾಶ ನೀಡಿ" ಎನ್ನುತ್ತಾ ಹಲ್ಲು ಕಿರಿಯುತ್ತಾ ನಿಂತಿದ್ದಾರೆ.



ಪ್ರೊ. ಲಿಂಗರಾಜ ಅಂಗಡಿ

ಕಳೆದ ಬಾರಿಯ ಚುನಾವಣೆಯಲ್ಲಿ ಹಿರೇಮಠರ ಹಿಂದೆ ಅಡ್ಡಾಡಿ ಅವರ ಪರವಾಗಿ ಮತಯಾಚಿಸಿದ್ದ ಯುವ ಸಾಹಿತಿಗಳಾದ ಶಂಕರ ಹಲಗತ್ತಿ, ಎಂ.ಡಿ ವಕ್ಕುಂದ, ಶ್ರೀಶೈಲ ಹುದ್ದಾರ, ಮೋಹನ ನಾಗಮ್ಮನವರ ಮುಂತಾದವರು ಈಗ ಇವರಿಂದ ದೂರ ಸರಿದಿದ್ದಾರೆ. ಅಷ್ಟೇ ಅಲ್ಲ, ಈ ಬಾರಿಯ ಚುನಾವಣೆಯಲ್ಲಿ ಹುಬ್ಬಳ್ಳಿ ಮಹಿಳಾ ವಿದ್ಯಾಪೀಠದ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಪ್ರೊ. ಲಿಂಗರಾಜ ಅಂಗಡಿಯವರನ್ನು ಬೆಂಬಲಿಸಿದ್ದಾರೆ.


ಪ್ರೊ.ಲಿಂಗರಾಜ ಅಂಗಡಿ ಎಡಪಂಥೀಯ ಚಳವಳಿಗಳಲ್ಲಿ ಹಾಗೂ ಪ್ರಗತಿಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದವರು. ಆ ಕಾರಣಕ್ಕಾಗಿಯೇ 47 ಹಿರಿಯ ಸಾಹಿತಿಗಳು ಅಂಗಡಿ ಅವರನ್ನು ಬೆಂಬಲಿಸಿ ಮತ ನೀಡುವಂತೆ ವಿನಂತಿಸಿದ್ದಾರೆ. ಜೊತೆಗೆ ಸಿ.ಪಿ.ಎಂನ ಸೊಪ್ಪಿನ ಹಾಗೂ ಅವರ ಗೆಳೆಯರು ಈ ಚುನಾವಣೆಯಲ್ಲಿ ಲಿಂಗರಾಜ ಅಂಗಡಿ ಪರವಾಗಿ ಓಡಾಡುತ್ತಾ ಮತ ಯಾಚಿಸುತ್ತಿದ್ದಾರೆ.

ಧಾರವಾಡ ಜಿಲ್ಲಾ ಕಸಾಪ ಅಧ್ಯಕ್ಷ ಗದ್ದುಗೆ ಈ ಬಾರಿ ಲಿಂಗರಾಜ ಅಂಗಡಿ ಅವರತ್ತ ವಾಲಿರುವುದು ಸ್ಪಷ್ಟವಾಗಿದೆ.

• ಹುಬ್ಬಳಿಯಾಂವ

...ಂಪಿ ವಿರುದ್ಧ ಮಹಿಪಾಲನ ಸಂಪು

...ಕಳೆದ ಎರಡು ಅವಧಿಗಳಿಗೂ ಕಲಬುರ್ಗಿ ಕ.ಸಾ.ಪ. ಅಧ್ಯಕ್ಷರಾಗಿ ಆಯ್ಕೆ ...ಗಿದ್ದ ವೀರಭದ್ರ ಸಿಂಪಿ ನಿಜಕ್ಕೂ ಶ್ಲಾಘನೀಯ ಕೆಲಸ ಮಾಡಿದವರು. ...ಮು ಸಾಹಿತಿಯಲ್ಲದಿದ್ದರೂ ಸಹೃದಯನಾಗಿ ಸಾಹಿತ್ಯದ ಎಲ್ಲಾ ಜನಗಳನ್ನು ... ತೆಕ್ಕೆಗೆ ತೆಗೆದುಕೊಂಡು, ರಾಜಕಾರಣಿಗಳ ಬೆಂಬಲ ಪಡೆದು ಮಾಡಿದ ... ಸಾಹಿತ್ಯ ಸಮ್ಮೇಳನಗಳು, ಕಾರ್ಯಕ್ರಮಗಳು, ಕ.ಸಾ.ಪ. ಕಟ್ಟಡ ಮುಂತಾ ಮುಖ್ಯ.




"ಆದರೆ ಎಷ್ಟು ವರ್ಷಗಳ ಕಾಲ ಕ.ಸಾ.ಪ. ... ಒಬ್ಬರಿಗೆ ಮೀಸಲು?" ಎಂದು ಪ್ರಶ್ನಿಸಿ ...ಂಪಾಲ ರೆಡ್ಡಿ ಮುನ್ನೂರು ಎಂಬ ಯುವ ...ತಿ ಕಂ ಪತ್ರಕರ್ತ ಈಗ ಸಿಂಪಿಗೆ ಸೆಡ್ಡು ...ಡೆದು ನಿಂತಿದ್ದಾನೆ. ಕಳೆದ ಸಲ ಕನ್ನಡ ...ತ್ಯ ಪರಿಷತ್ತು ತಮ್ಮನ್ನು ಗಣನೆಗೆ ತೆಗೆದು ...ಲಿಲ್ಲ ಎಂದು ಸಿಡಿದೆದ್ದು ಕರ್ನಾಟಕ ಸಾಹಿತ್ಯ ...ಷತ್ತನ್ನು ಸ್ಥಾಪಿಸಿದ ಡಾ.ವೀರಣ್ಣ ಅವರ ...ಶನದಲ್ಲಿ ಈ ಮುನ್ನೂರು ನಿಂತು ಮಾಡಿದ್ದ ...ಗಗಳನ್ನು ಇಲ್ಲಿನ ಜನ ಮರೆತಿಲ್ಲ. ಹೀಗಾಗಿ ಮುನ್ನೂರು ಈ ಸಲ ...ಪ.ದ ಚುನಾವಣೆಗೆ ನಿಂತುದೆ ಸರಿಯಲ್ಲ ಎಂಬುದು ಸಿಂಪಿ ಬೆಂಬಲಿಗರ ... ಆದರೆ ಮುನ್ನೂರು ಗುಂಪು ಮಾತ್ರ "ಸಿಂಪಿಯೆ ಎಷ್ಟು ವರ್ಷ ... ಕ.ಸಾ.ಪ.ನ ಅಧ್ಯಕ್ಷನಾಗಿರಬೇಕು? ಯಾವುದೇ ವ್ಯಕ್ತಿಗೆ ಸಮಾಜದ ...ಮಾನ ಕಾಯಂ ಆಗುತ್ತ ಹೋದರೆ ಆತನ ಸುತ್ತಮುತ್ತ ಕಸಕಡ್ಡಿ ಬೆಳೆಯುತ್ತದೆ. ...ಕೆಗೆ ಇನ್ನೊಬ್ಬರಿಗೆ ಅವಕಾಶ ಇಲ್ಲದಂತಾಗುತ್ತದೆ" ಎಂದು ಕಲಬುರ್ಗಿಯ ...ಪ. ಮತದಾರರ ಮನೆಗೆ ಓಡಾಡುತ್ತಿದ್ದೆ.



ಮತದಾರ ಮಾತ್ರ ತುಟಿ ಎರಡು ಮಾಡದೆ ಅವರಿಗೂ ಸೈ, ಇವರಿಗೂ ಸೈ ಎಂಬಂತೆ ನಡಕೊಂಡು ಅಚ್ಚರಿ ಮೂಡಿಸಿದ್ದಾನೆ. "ನಾನು ಇದೊಂದು ಸಲ ಮಾತ್ರ ಕ.ಸಾ.ಪ. ಅಧ್ಯಕ್ಷನಾಗಿರುತ್ತೇನೆ. ಹೇಗಾದರೂ ಮಾಡಿ ನನ್ನನ್ನು ಗೆಲ್ಲಿಸಲೇ ಬೇಕು" ಎಂದು ಹೇಳುತ್ತಿರುವ ಸಿಂಪಿ ಕಟ್ಟಕಡೆಯದಾಗಿ ಎಲ್ಲಾ ರಾಜಕೀಯ ಮುಖಂಡರ ಬೆಂಬಲ ಪಡೆದಾದರೂ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾನೆ. ಈಗ ಪ್ರತ್ಯೇಕ ಜಿಲ್ಲೆಯಾಗಿರುವ ಯಾದಗಿರಿಗೆ ಇದು ಕ.ಸಾ.ಪ.ದ ಮೊದಲ ...ಾವಣೆ. ಇದುವರೆಗೆ ಗುಲಬರ್ಗಾ ಜಿಲ್ಲಾ ಕ.ಸಾ.ಪ ಅಧ್ಯಕ್ಷರಾದವರು ...ಗೆ ಅನುಕೂಲಕರವಾಗಿರುವ ಜನರನ್ನು ನಾಮಿನೇಟ್ ಮಾಡುತ್ತಿದ್ದರು. ...ಪುರ-ಸುರಪುರ ಮತ್ತು ಯಾದಗಿರಿಗಳನ್ನೊಳಗೊಂಡ ಜಿಲ್ಲೆಯಲ್ಲಿ ಬಹುತೇಕ ...ದಾರರು ಸಾಹಿತ್ಯದ ಗಂಧಗಾಳಿ ಗೊತ್ತಿಲ್ಲದವರು. ಇದುವರೆಗೆ ನಿಯುಕ್ತರಾದ ...ಲೂಕು ಅಧ್ಯಕ್ಷರುಗಳು ತಮ್ಮ ಜಾತಿಯವರನ್ನೋ ಅಥವಾ ತಮ್ಮ ವ್ಯಾಪಾರಿ ...ದವರನ್ನೋ ಸದಸ್ಯರನ್ನಾಗಿ ಮಾಡುತ್ತಿದ್ದರು. ಸಹಜವಾಗಿ ಈಗ ಇವರುಗಳಲ್ಲಿ ...ರು ಮಾತ್ರ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಬೇಕಾಗಿದೆ. ...ಚುನಾವಣಾ ಕಣದಲ್ಲಿ ಹಲವಾರು ಜನರಿದ್ದರೂ ಸೈದಾಪುರದ ವೆಂಕಪ್ಪ ...ಮನಿ, ವೆಂಕಟರಾವ ಕುಲ್ಕರ್ಣಿ ಹಾಗೂ ಸಿದ್ದಪ್ಪ ಹೊಟ್ಟಿ ಮಾತ್ರ ಮತದಾರರ ...ಗಣನೆಯಲ್ಲಿದ್ದಾರೆ. ವೆಂಕಟರಾವ ಕುಲ್ಕರ್ಣಿ ಅವರನ್ನು ಹೊರತುಪಡಿಸಿ ...ದ ಇಬ್ಬರು ಸಾಹಿತಿಗಳಲ್ಲದವರು. ವೆಂಕಪ್ಪ ಅಲೆಮನಿಯವರು ಜಾತ್ಯತೀತ ...ಸ್ಸುಳ್ಳವರಾಗಿದ್ದರೂ ಸದಾ ಅವರ ಸುತ್ತಮುತ್ತ ತ.ಮ.ಸ. (ತಳಮಟ್ಟದ ...ಮುದಾಯದ) ಕಾರ್ಯಕರ್ತರು ಇರುವುದರಿಂದ ಸಹಜವಾಗಿ ಲಿಂಗಾಯತರು ...ನಿಸಿಕೊಂಡಿದ್ದಾರೆ. ಸಿದ್ದಪ್ಪ ಹೊಟ್ಟಿಯವರು ಈಗಾಗಲೇ ಎ.ಪಿ.ಎಂ.ಸಿ. ...ಕ್ಷರಾಗಿ ಕೆಲಸ ಮಾಡಿರುವುದರಿಂದ ಸಾಕಷ್ಟು ರಾಜಕೀಯ ವ್ಯಕ್ತಿಗಳ ...ಬಲವಿದೆ. ಸಿದ್ದಪ್ಪ ಹೊಟ್ಟಿಯವರ ಬಗೆಗೆ ಪ್ರೀತಿ ಇಲ್ಲದೆ ಇದ್ದರೂ ...ರ್ಗದ ಜನಗಳಲ್ಲಿ ಮೂಡುತ್ತಿರುವ ಒಕ್ಕಟ್ಟಿನ ಪ್ರಭಾವ ಹೊಟ್ಟಿಯವರನ್ನು ...ಬಲಿಸುವಂತಾಗುತ್ತಿರುವುದು ವಿಷಾದನೀಯ ಬೆಳವಣಿಗೆ. ವೆಂಕಟರಾವ್ ...ಕರ್ಣಿ ಸಾಹಿತಿಯಾಗಿದ್ದರೂ ಜಿಲ್ಲೆಯ ಎಲ್ಲಾ ಕ.ಸಾ.ಪ. ಸದಸ್ಯರ ಪರಿಚಯಕ್ಕೆ ...ಗಿ ಬಂದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಕನ್ನಡ ...ಹಿತಿಗಳು ಗೆದ್ದು ಬರುವುದು ಸರಿಯಾದರೂ ಕೂಡ ಕುಲ್ಕರ್ಣಿ ಗೆಲುವು ...ಟ್ಟ ಸುಲಭವಲ್ಲ. ರಾಜ್ಯ ಮಟ್ಟದ ಕಸಾಪಕ್ಕೆ ಬೇಕಾದಷ್ಟು ಜನ ಅಭ್ಯರ್ಥಿಗಳಾಗಿ ...ದ್ದರೂ ಈ ಭಾಗದ ಜನ ಪರಿಗಣನೆಗೆ ತೆಗೆದುಕೊಂಡಿರುವುದು ಕೊಪ್ಪಳದ ...ರಗೌಡ ಪಾಟೀಲ ಹಾಗೂ ಚಂದ್ರಶೇಖರ ಪಾಟೀಲರನ್ನು ಮಾತ್ರ. ❖


ಶಿವಮೊಗ್ಗ ಸಹಕಾರಿ ಬ್ಯಾಂಕ್ ರಾಜಶೇಖರನ ಡೆತ್‌ನೋಟ್



"ನನ್ನ ಆತ್ಮಹತ್ಯೆಗೆ ನಾನೇ ಕಾರಣ..."

-ಹೀಗೆ ರಾಜಶೇಖರ್ ಅವರು ಬಿಟ್ಟುಹೋಗಿರುವ ನಾಲ್ಕು ಪುಟದ ಡೆತ್ ನೋಟ್ ಆರಂಭವಾಗುತ್ತಾದರೂ, ಅದರ ಒಳಗಿಳಿದಂತೆ ಶಿವಮೊಗ್ಗದ ಆಲಗೇರಿ ಮಂಡ್ರಿ ವ್ಯವಸಾಯ ಸೇವಾ ಸಹಕಾರ ಸಂಘದ ನಿಗೂಢ ವ್ಯವಹಾರಗಳ ಬಗ್ಗೆ ಗಾಢವಾದ ಅನುಮಾನಗಳನ್ನು ಹುಟ್ಟುಹಾಕುತ್ತದೆ.

ಐವತ್ತೈದು ವರ್ಷದ ರಾಜಶೇಖರ್ ವ್ಯವಸಾಯ ಸೇವಾ ಸಹಕಾರ ಸಂಘದ ಹೊಸನಗರ ವ್ಯಾಪ್ತಿಯ ಆಲಗೇರಿ ಮಂಡ್ರಿ ಶಾಖೆಯ ಕಾರ್ಯದರ್ಶಿಯಾಗಿದ್ದರು. ಅವರ ಮಗ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯೋಗದಲ್ಲಿದ್ದರೆ ಮಗಳು ಅಮೆರಿಕಾದಲ್ಲಿದ್ದಾಳೆ. ರಾಜಶೇಖರ್ ಮತ್ತು ಅವರ ಪತ್ನಿ ಮುಡುಬದಲ್ಲಿ ನೆಲೆಸಿದ್ದರು. ಸ್ವಲ್ಪ ಅನಾರೋಗ್ಯ ಅನ್ನುವುದನ್ನು ಬಿಟ್ಟರೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಯಾವ ಕಾರಣವೂ ರಾಜಶೇಖರ್‌ಗೆ ಇರಲಿಲ್ಲ. ಆದರೂ ಅವರು ಭಾನುವಾರ, ಏಪ್ರಿಲ್ 22ರಂದು, ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಮೇಲ್ನೋಟಕ್ಕೆ ಮತ್ತು ಅವರೇ ಬರೆದಿರುವ ಡೆತ್‌ನೋಟ್‌ನ ಹೆಡ್‌ಲೈನ್ ಹೇಳುವಂತೆ ಇದು ಸ್ವಪ್ರೇರಿತ ಆತ್ಮಹತ್ಯೆಯಂತೆ ಕಂಡುಬಂದರೂ ಇಡೀ ಡೆತ್ ನೋಟ್ ಸಂಘದ ಅಧ್ಯಕ್ಷ ವಾಟಗೋಡು ಸುರೇಶ್ ಮತ್ತು ಹೊಸನಗರ ಶಾಖೆಯ ಮ್ಯಾನೇಜರ್ ಅರವಿಂದ್‌ರನ್ನು ವಿಲನ್‌ಗಳಂತೆ ಬಿಂಬಿಸುತ್ತದೆ. ಪೊಲೀಸರು ಗಟ್ಟಿ ತನಿಖೆ ಮಾಡಿದರೆ ಸತ್ಯಾಂಶ ಹೊರಬೀಳುವ ಸಾಧ್ಯತೆ ಇದೆಯಾದರೂ ಅದ್ಯಾಕೋ ಪೊಲೀಸರು ಆದಷ್ಟು ಬೇಗ ಈ ಕೇಸ್‌ನ ಫೈಲ್‌ಗೆ ಕಟ್ಟು ಬಿಗಿಯುವ ಸಿದ್ಧತೆಯಲ್ಲಿರುವಂತಿದೆ. ಅದಕ್ಕೆ ಪುಷ್ಟಿ ಕೊಡುವಂತೆ ತಮ್ಮ ತಂದೆ ರಾಜಶೇಖರ್ ಅವರ ಸಾವನ್ನು ಕುರಿತು ಅವರ ಮಕ್ಕಳು ಕಂಪ್ಲೇಂಟ್ ನೀಡಲು ಹೋದರೆ ಪೊಲೀಸರು ಇಲ್ಲದ ಉಸಾಬರಿಗಳ ಲಿಸ್ಟ್ ಹೇಳಿ ಅವರ ಧೃತಿಗೆಡಿಸಲು ಯತ್ನಿಸಿದ್ದಾರೆ.

ನಾಲ್ಕು ಪುಟದ ಡೆತ್‌ನೋಟಿನ ಎರಡು ಪುಟಗಳಲ್ಲಿ ಸಂಘಕ್ಕೆ ಸಂಬಂಧಿಸಿದ ವ್ಯವಹಾರ ಲೆಕ್ಕಗಳನ್ನು ರಾಜಶೇಖರ್ ಬರೆದಿದ್ದಾರೆ. ಇನ್ನುಳಿದಂತೆ ಅವರ ಮೇಲಿದ್ದ ಕೆಲಸದ ಒತ್ತಡ ಮತ್ತು ತಮ್ಮದಲ್ಲದ ತಪ್ಪಿಗೆ ತಮ್ಮನ್ನು ಗುರಿಯಾಗಿಸಬಹುದಾದ ಆತಂಕಗಳು ರಾಜಶೇಖರ್ ಅವರನ್ನು ಪ್ರಮುಖವಾಗಿ ಕಾಡಿರುವಂತೆ ಕಂಡುಬರುತ್ತದೆ. ಮೊದಲನೇ ಪುಟದ ಕೊನೆಯಲ್ಲಿರುವ 'ಈ ಸಾರಿಯ ಲೆಕ್ಕದಲ್ಲಿ ಏನೇ ವ್ಯತ್ಯಾಸವಾದರೂ ಅದಕ್ಕೆ ಸಂಘದ ಅಧ್ಯಕ್ಷರು/ ಮ್ಯಾನೇಜರ್, ಡಿಸಿಸಿಬಿ, ಹೊಸನಗರ, ಇವರೇ ಕಾರಣ' ಎನ್ನುವ ಸಾಲುಗಳು ಅವರ ಆತಂಕವನ್ನು ಸ್ಪಷ್ಟವಾಗಿ ತೆರೆದಿಡುತ್ತವೆ. ಸಂಘದ ಅಧ್ಯಕ್ಷನಾಗಿರುವ ವಾಟಗೋಡು ಸುರೇಶ್ ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರೂ ಆಗಿರುವುದರಿಂದ ರಾಜಶೇಖರ್ ಅವರ ಆತಂಕ ಮತ್ತಷ್ಟು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಡೆತ್‌ನೋಟಿನಲ್ಲಿ ರಾಜಶೇಖರ್ ಅವರು ಬರೆದಿರುವ ಸುಮಾರು ಲೆಕ್ಕಗಳಲ್ಲಿ ತಾವು ಇದುವರೆವಿಗೂ ನೀಡಿರುವ ಸಾಲದ ಬಾಬ್ತು ಮತ್ತು ಅದರ ಬಡ್ಡಿ ಪಾವತಿ, ಇದುವರೆವಿಗೂ ಹಣ ವಾಪಾಸು ಬರದೇ ಇರುವುದು, ತಾವೇ ಸ್ವತಃ ತಮ್ಮ ಕೈಯಿಂದ ಎಪ್ಪತ್ತು ಸಾವಿರ ಬಡ್ಡಿ ತುಂಬಿರುವುದು; ಹೆಚ್ಚುವರಿ ಹಣವನ್ನು ಅಧ್ಯಕ್ಷರ ಹೆಸರಿನಲ್ಲಿ ಡಿಪಾಸಿಟ್ ಮಾಡಿರುವುದು, ಹೀಗೆ ಒಂದೊಂದೇ ವ್ಯವಹಾರವನ್ನು ನಮೂದಿಸುತ್ತಾ ಹೋಗಿದ್ದಾರೆ.

ತನ್ನ ಸಾವಿಗೆ ತಾನೇ ಕಾರಣ ಎಂದು ಉಲ್ಲೇಖಿಸಿರುವ ಅತಿ ಖಾಸಗಿಯಾದ ಆತ್ಮಹತ್ಯೆಯ ನೋಟ್‌ನಲ್ಲಿ ತಮ್ಮ ವೃತ್ತಿಯ ವ್ಯವಹಾರಗಳನ್ನು ಕ್ಲಿಯರ್ ಮಾಡುವ ಜರೂರತ್ತಾದರೂ ಏನಿತ್ತು? ಇದಕ್ಕಿಂತಲೂ ಮುಖ್ಯವಾಗಿ ಎಲ್ಲಾ ವ್ಯವಹಾರಗಳು ಅಧ್ಯಕ್ಷ ವಾಟಗೋಡು ಸುರೇಶ್ ಮತ್ತು ಹೊಸನಗರ ಶಾಖೆಯ ಮ್ಯಾನೇಜರ್ ಆಣತಿಯಂತೆಯೇ ನಡೆದಿದ್ದು ತಾನು ಅವರು ಹೇಳಿದಂತೆ ಸಹಿ ಮಾತ್ರ ಮಾಡಿರುವುದಾಗಿ ರಾಜಶೇಖರ್ ಅವರು ಹೇಳಿಕೊಂಡಿರುವುದು ಯಾಕೆ? ಈ ಪ್ರಶ್ನೆಗಳೇ ಸದ್ಯ ಸಂಘದ ವ್ಯವಹಾರಗಳನ್ನು ಅನುಮಾನದಿಂದ ನೋಡುವಂತೆ ಮಾಡುತ್ತವೆ.

ಸಂಘದ ಹಣದಲ್ಲಿ ಭಾರೀ ಅವ್ಯವಹಾರ ನಡೆದು ಅದನ್ನು ರಾಜಶೇಖರ್ ತಲೆಗೆ ಕಟ್ಟುವ ಹುನ್ನಾರ ನಡೆದಿತ್ತೇ? ಇದರ ಸುಳಿವು ಅರಿತ ರಾಜಶೇಖರ್ ಬಂದೆರಗುವ ಅಪಮಾನದ ಭೀಕರತೆಗೆ ಬೆದರಿ, ತನ್ನ ಪ್ರಾಮಾಣಿಕತೆಯನ್ನು ಪ್ರೂವ್ ಮಾಡುವಂತೆ ಲೆಕ್ಕಗಳನ್ನು ಬರೆದಿಟ್ಟು ಆತ್ಮಹತ್ಯೆಗೆ ಶರಣಾದರೇ?

ಡೆತ್‌ನೋಟ್‌ನಲ್ಲಿ ರಾಜಶೇಖರ್ ಉಲ್ಲೇಖಿಸಿರುವ ಮತ್ತೊಂದು ಅಂಶ ಕೆಲಸದ ಒತ್ತಡಕ್ಕೆ ಸಂಬಂಧಿಸಿತ್ತು. ಅದನ್ನವರು 'ಅನವಶ್ಯಕ' ಎಂದಿರುವುದೂ ಗಂಭೀರವಾಗಿ ಪರಿಗಣಿಸಬೇಕಾದ್ದೆ. ಮರಣ ಪತ್ರದ ಒಂದು ಕಡೆ 'ಕೆಲಸ.... ಕೆಲಸ.... ಕೆಲಸ.. ತುಂಬಾ ಕೆಲಸ. ಈ ಲೆಕ್ಕ ಪದ್ಧತಿ ನನ್ನ ಜೀವವನ್ನೇ ತೆಗೆದುಕೊಂಡು ಹೋಗಿದೆ. ಈ ಲೆಕ್ಕ ಪದ್ಧತಿಯಲ್ಲಿ ತುಂಬಾ ಜಾಸ್ತಿ ಬರವಣಿಗೆ, ಅನವಶ್ಯಕ ಬರವಣಿಗೆ ಇದೆ' ಎಂಬುದಾಗಿ ಬೇಸರಿಸಿಕೊಂಡಿರುವುದು ರಾಜಶೇಖರ್ ಮೇಲಿದ್ದ ಒತ್ತಡವನ್ನು ಸ್ಪಷ್ಟವಾಗಿ ತೋರಿಸುತ್ತದೆ.


ಶಿವಮೊಗ್ಗದ ಸಹಕಾರಿ ಬ್ಯಾಂಕ್‌ಗಳಲ್ಲಿ ಬಡ್ಡಿ ಮಾಫಿಯಾವೇ ಅಧಿಕಾರ ಹಿಡಿದು ಕೂತಿರುವ ಬಗ್ಗೆ ಸಾಕಷ್ಟು ಅನುಮಾನಗಳಿವೆ. ಅಂತಹ ಸಂಘಗಳ ಅಧ್ಯಕ್ಷರು ಮತ್ತು ಮ್ಯಾನೇಜರ್‌ಗಳಂತವರೇ ಬೋಗಸ್ ಹೆಸರಿನಲ್ಲಿ ಫಲಾನುಭವಿಗಳ ಖೊಟ್ಟಿ ಅರ್ಜಿ ಮತ್ತು ದಾಖಲಾತಿಗಳನ್ನು ಸೃಷ್ಟಿಸಿ ಸರ್ಕಾರದ ನಿಯಮದಂತೆ 3 % ಬಡ್ಡಿಯ ಮೇಲೆ ಸಾಲ ಪಡೆದು ಅದನ್ನು 9%ಗೂ ಹೆಚ್ಚಿನ ಬಡ್ಡಿಗೆ ಡಿಪಾಸಿಟ್ ಇಟ್ಟುಕೊಳ್ಳುವ ದಂಧೆ ಚಾಲ್ತಿಯಲ್ಲಿದೆ. ಇಂತಹ ಅವ್ಯವಹಾರಕ್ಕೆ ಬೇಕಾದ ಲೆಕ್ಕಾಚಾರವನ್ನೇ ರಾಜಶೇಖರ್ 'ಅನವಶ್ಯಕ ಬರವಣಿಗೆ' ಅಂತ ಕರೆದಿರುವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಒಟ್ಟಿನಲ್ಲಿ ವೈಯಕ್ತಿಕ ಕಾರಣಗಳಿಗಿಂತ ವ್ಯವಹಾರಿಕ ಒತ್ತಡ ಮತ್ತು ಆತಂಕಗಳೇ ಈ ಆತ್ಮಹತ್ಯೆಗೆ ಕಾರಣವಾಗಿರುವುದನ್ನು ರಾಜಶೇಖರ್ ಅವರ ಡೆತ್‌ನೋಟ್ ಸ್ಪಷ್ಟವಾಗಿ ಹೇಳುತ್ತಿದೆ.

ಈ ನಿಟ್ಟಿನಲ್ಲಿ ಪೊಲೀಸರ ತನಿಖೆ ಸಾಗಿದರೆ ನಡೆದಿರಬಹುದಾದ ಬೃಹತ್ ಸಹಕಾರಿ ಹಗರಣ ಬೆಳಕಿಗೆ ಬರಬಹುದು. ಆದರೆ ಯಾರ್ಯಾರ ಪ್ರಭಾವ ಹೇಗೇಗೆ ಕೆಲಸ ಮಾಡಬಹುದು ಮತ್ತು ಅವನ್ನು ಧಿಕ್ಕರಿಸಿ ಮುಂದುವರೆಯುವ ಬದ್ಧತೆ ಪೊಲೀಸರಿಗಿದೆಯಾ ಎಂಬುದೇ ಸದ್ಯದ ಪ್ರಶ್ನೆ. ಮಹತ್ವದ ಸುಳಿವುಗಳನ್ನು ನೀಡುತ್ತಿರುವ ರಾಜಶೇಖರ್ ಅವರ ಡೆತ್‌ನೋಟ್ ಹೊಸನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಸಾವನ್ನಪ್ಪದಿರುವಂತಾಗಲಿ...

• ವರದಿಗಾರ


...ಹಾಸನ: ದಾರಿ ಯಾವುದಯ್ಯ ಗಾದಿಗೆ?

...ಶಕ್ತಿ ಇದ್ದವರು ಸಾಹಿತ್ಯ ಪರಿಷತ್‌ನಲ್ಲಿ ವಿವಿಧ ಕಾರ್ಯಕ್ರಮಗಳ ...ಸರಿನಲ್ಲಿ ವರ್ಷಕ್ಕೆ ಲಕ್ಷಗಟ್ಟಲೇ ಚಂದಾ ಎತ್ತಿ ದಾನಿಗಳನ್ನು ...ಂಡಾಮೋಚಿರುವ ದಾರಿ ತೋರಿಸಿಕೊಟ್ಟಿರುವುದರಿಂದ ಚುನಾವಣೆ ...ದಲ್ಲಿರುವ ಐವರು ಸಹ ಸಾಹಿತ್ಯ ಪರಿಷತ್‌ನ ಗಾದಿಗೆ ...ೇರಲು ದಾರಿಯಾವುದಯ್ಯಾ ಎನ್ನುತ್ತಲೇ ತಮ್ಮೆಲ್ಲಾ ...ಣ್ಯೆಯನ್ನು ಪ್ರದರ್ಶಿಸುತ್ತಿದ್ದಾರೆ.



ಅದರಲ್ಲಿ ಒಬ್ಬೊಬ್ಬರದ್ದು ಒಂದೊಂದು ಕಥೆ ಇದೆ: ... ನಾಯಕರಹಳ್ಳಿ ಮಂಜೇಗೌಡ ಶಿಕ್ಷಕನಾಗಿ ಮತ್ತು ...ಡ ಸಾಹಿತ್ಯ ಪರಿಷತ್ ಚುನಾವಣೆಗೆ ಸ್ಪರ್ಧಿಸುವ ...ಕ ಉದ್ದೇಶದಿಂದಲೇ ಜಿಲ್ಲೆಯಲ್ಲಿ ವಚನ ಸಾಹಿತ್ಯ ...ಡೆಮಿ ಮಾಡಿಕೊಂಡು ಸಾಹಿತ್ಯ ಚಟುವಟಿಕೆಯಲ್ಲಿ ...ಡಗಿಕೊಂಡಿದ್ದರು. ಒಂದೆರಡು ಪುಸ್ತಕಗಳನ್ನು ...ದಿದ್ದೇನೆಂದು ಹೇಳಿಕೊಳ್ಳುತ್ತಾ ವಚನ ಸಾಹಿತ್ಯ ...ಷತ್, ಶಿಕ್ಷಕ ಪರಿಷತ್ ಎನ್ನುತ್ತಾ ಹತ್ತಾರು ...ರ್ಯಕ್ರಮಗಳನ್ನು ಮಾಡಿಕೊಂಡು ಮೂರು ವರ್ಷದಿಂದ ಕನ್ನಡ ಸಾಹಿತ್ಯ ...ಷತ್‌ನ ಮತದಾರರ ಮೇಲೆ ಕಣ್ಣಿಟ್ಟುಕೊಂಡೇ ಅಂತಹವರನ್ನು ಆಯ್ದು ...ಮ್ಮು ಸನ್ಮಾನ ಮಾಡಿದ್ದಾರೆ. ತಾನು ಮಾಡಿರುವ ಸನ್ಮಾನ ಮತ್ತು ಹೊದಿಸಿರುವ ...ಲುಗಳಷ್ಟು ಮತ ಬಂದರೆ ತನ್ನ ಗೆಲುವು ಸುಲಭವೆನ್ನುವ ಲೆಕ್ಕಾಚಾರದಲ್ಲಿ ...ಟಿಸಿ ಮತ ಪ್ರಚಾರದಲ್ಲಿ ತೊಡಗಿದಂತಿದೆ.

ವೈದ್ಯ ಜನಾರ್ಧನ್ :-ಈ ಹಿಂದೆ ಹೆಚ್.ಬಿ.ರಮೇಶ್ ಎಂಬ ಸಜ್ಜನ ಹಿರಿಯ ವ್ಯಕ್ತಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹಾಸನ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದೇನೆ. ಈ ಬಾರಿ ಅವಕಾಶ ಕೊಡಿ ಎನ್ನುತ್ತಾ ತಮ್ಮ ಆಪ್ತರನ್ನು ಕಟ್ಟಿಕೊಂಡು ಹಾಗೂ ತಾಲ್ಲೂಕು ಆಸ್ಪತ್ರೆಗಳ ವೈದ್ಯರು, ದಾದಿಯರ ಮುಖಾಂತರ ಮತಯಾಚನೆ ಮಾಡುತ್ತಲೇ ತಮ್ಮ ಗೆಲುವು ಶತ ಸಿದ್ಧವೆನ್ನುವ ಮಾತನಾಡುತ್ತಿದ್ದಾರೆ.



ಧರ್ಮರಾಜ್ ಕಡಗ-ಕಾವೇರಿ ನೀರಾವರಿ ಹೋರಾಟ ದಲ್ಲಿ ಪಾಲ್ಗೊಂಡಿದ್ದೇನೆ ಮತ್ತು ಕನ್ನಡ ಸೇನೆ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆಂದು ಹಾಗೂ ಹಿಂದಿನ ಚುನಾವಣೆಯಲ್ಲಿ ಪರಾಭವಗೊಂಡಿದ್ದೇನೆಂದು ಹೇಳುತ್ತಾ ಚುನಾವಣಾ ಕಣದಲ್ಲಿದ್ದಾರೆ. ಇತ್ತೀಚೆಗೆ ಅವರಿವರ ಭಾವನೆಗಳನ್ನು ಹೇಳುವಂತಹ ಪುಸ್ತಕಕ್ಕೆ ಶುಭಕೋರುವ ಒಂದು ಸಾವಿರದಷ್ಟು ಹೆಸರುಗಳಿರುವಂತಹ ಪುಸ್ತಕವೊಂದನ್ನು ಮುದ್ರಿಸಿ ನಾನೇನು ಯಾರಿಗೂ ಕಡಿಮೆ ಇಲ್ಲ ಎನ್ನುತ್ತಾ ಪುಸ್ತಕದಲ್ಲಿ ಮುದ್ರಿಸಿರುವ ಒಂದೊಂದು ಹೆಸರು ಒಂದು ಮತಗಳಾಗಿ ಬಂದರೆ ಸಾಕು ನಾನು ಗೆದ್ದೇ ಎಂಬ ಹುಮ್ಮಸ್ಸಿನಲ್ಲಿದ್ದಾರೆ. ಇನ್ನು ದಿನೇಶ್ ಕಳೆದ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡ ನಂತರ ಕನ್ನಡ ಸಾಹಿತ್ಯ ಪರಿಷತ್‌ನ್ನು ಮರೆತೇ ಬಿಟ್ಟಿದ್ದರು. ಮೂಲತಃ ಎಲ್.ಐ.ಸಿ. ಏಜೆಂಟ್ ಎನ್ನುತ್ತಲೇ ಖಾದಿ ಗ್ರಾಮೋದ್ಯೋಗದ ಸಾಲ ಕೊಡಿಸುವ ಕಮಿಷನ್ ಪಡೆಯುವ ಕೆಲಸ ಮಾಡುವ ದಿನೇಶ್‌ಗೆ ಈ ಹಿಂದಿನ ಚುನಾವಣೆ ಸಮಯದಲ್ಲಿಯೇ ಮುಂಜಾಗ್ರತೆಯಾಗಿ ೧೫೦೦ ಸದಸ್ಯರನ್ನು ನೊಂದಣಿ ಮಾಡಿಸಿರುವ ಅದಮ್ಯ ನಂಬಿಕೆ ಇತ್ತು. ಪಕ್ಕಾ ಕ್ಯಾಲಿಕ್ಯೂಲೆಟಿವ್ ಮೈಂಡ್ ಆಗಿರುವ ದಿನೇಶ್ ಈ ಚುನಾವಣೆಯಲ್ಲಿ ಗೆದ್ದೆ ಗೆಲ್ಲುವೆ ಎನ್ನುವ ಹುಮ್ಮಸ್ಸಿನಲ್ಲಿದ್ದಾರೆ. ಹಾಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಎರಡನೇ ಅವಧಿಗೆ ಚುನಾವಣೆಗೆ ಸ್ಪರ್ಧಿಸಿರುವ ಉದಯರವಿ ತಮಗೆ ಮೂರು ವರ್ಷದಲ್ಲಿ ಅಂದುಕೊಂಡಿದ್ದನ್ನು ಸಾಧಿಸಲಾಗಿಲ್ಲ ಇನ್ನೊಂದು ಅವಧಿ ಕೊಟ್ಟುಬಿಡಿ ಎನ್ನುತ್ತಿದ್ದಾರೆ. ಕಳೆದ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಮತ್ತು ಪತ್ರಕರ್ತ ಮದನ್‌ಗೌಡ ಅವರ ಗುಂಪಿನಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಮ್ಮೇಳನ ನಡೆಸುವ ಹೆಸರಿನಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ವಿದ್ಯೆಯನ್ನು ಕರಗತ ಮಾಡಿಕೊಂಡ ಉದಯರವಿ ಈ ಬಾರಿ ತಮ್ಮ ಅದಮ್ಯ ಆಸೆಯನ್ನು ನೆರವೇರಿಸಿಕೊಳ್ಳುವತ್ತ ಸಾಗಲು ವಿಫಲ ಯತ್ನ ನಡೆಸಿದ್ದಾರೆ.

ಒಟ್ಟಾರೆ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ ಜಿಲ್ಲೆಯಲ್ಲಿ ಯಾವ ಸಾರ್ವತ್ರಿಕ ಚುನಾವಣೆಗಿಂತ ಕಡಿಮೆ ಇಲ್ಲದಂತೆ ನಡೆಯುತ್ತಿದ್ದು ಅದರಲ್ಲಿ ಪತ್ರಕರ್ತರು ಸಹ ತಮ್ಮ ಕಾಣಿಕೆ ಸಲ್ಲಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್‌ನ ಆಮದನಿಯ ಉದ್ದ ಅಗಲ, ಆಳ ತಿಳಿದಿರುವವರು ತೆರೆಮರೆಯಲ್ಲಿ ಅಭ್ಯರ್ಥಿಗಳನ್ನು ತಮ್ಮ ಕುಣಿಕೆಯಲ್ಲಿಟ್ಟುಕೊಂಡು ಚುನಾವಣೆಯಲ್ಲಿ ತಮ್ಮದೇ ಪಾತ್ರ ವಹಿಸುತ್ತಿದ್ದಾರೆ. ಈ ಐವರಲ್ಲಿ ಯಾರೇ ಚುನಾವಣೆಯಲ್ಲಿ ಗೆದ್ದರೂ ಕನ್ನಡ ಸಾಹಿತ್ಯ ಪರಿಷತ್ ಇಂದಿಗಿಂತ ಭಿನ್ನವಾಗುವುದಿಲ್ಲ.

• ವರದಿಗಾರ


ಮುದ್ದಲಚೆರವು ಸೂರಿ

500 ಕೋಟಿಯ ಆಸ್ತಿಗಾಗಿ ಕೊಂದನಂತೆ!

ಸೂರಿ ಹಂತಕ ಭಾನು ಅರೆಸ್ಟ್

• ರಾ. ಸೋಮನಾಥ್

ರಾಯಲಸೀಮದ ರಕ್ತಚರಿತ್ರೆಯ ಒಂದು ಅಂಕ ಮುಗಿದಿದೆ.

ಕೊನೆಗೂ ಸಿಕ್ಕಿಬಿದ್ದಿದ್ದಾನೆ ಸೂರಿ ಹಂತಕ ಭಾನು. ಅಲ್ಲಿಗೆ ಒಂದೂವರೆ ವರ್ಷದ ಆಂಧ್ರಾ ಪೊಲೀಸರ ಸರಬೇಟೆಯೊಂದು ಮುಕ್ತಾಯಗೊಂಡಿದೆ!

ಪರಿಟಾಲ ರವಿಯ ಹಂತಕ ಮುದ್ದಲಚೆರವು ಸೂರಿಯನ್ನು ಜೊತೆಗಿದ್ದೇ ಕೊಂದವನು. ಕಳೆದ ಒಂದೂವರೆ ವರ್ಷದಿಂದ ಆಂಧ್ರಾ ಪೊಲೀಸರನ್ನು ಇನ್ನಿಲ್ಲದಂತೆ ಕಾಡಿದವನು. ಆಂಧ್ರದ ಡಾನ್ ಸೂರಿಯ ಅಷ್ಟೂ ಆಸ್ತಿಪಾಸ್ತಿಗೆ ಬೇನಾಮಿಯಾಗಿದ್ದವನು. ಸರಿಸುಮಾರು ಐನೂರು ಕೋಟಿಯ ಸೂರಿಯ ಸಾಮ್ರಾಜ್ಯವನ್ನು ಭೂಗತನಾಗಿದ್ದೇ ಸಂಭಾಳಿಸಿದವನು. ತಾಕತ್ತಿದ್ದರೆ ನನ್ನನ್ನು ಹಿಡಿಯಿರಿ ಎಂದು ಆಂಧ್ರಾ ಪೊಲೀಸರಿಗೇ ಸವಾಲೆಸೆದವನು ಇಷ್ಟೊಂದು ಸಲೀಸಾಗಿ ಆಂಧ್ರದ ಸಿಐಡಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾದರೂ ಹೇಗೆ?

ಇದು ಸೂರಿ ಹಂತಕ ಭಾನು ಬಂಧನದ ಸುತ್ತ ಹೊಗೆಯಾಡುತ್ತಿರುವ ಅಸಲೀ ಪ್ರಶ್ನೆ.


ಸೂರಿ ಹಂತಕ ಭಾನು

ಭಾನು ಅಲಿಯಾಸ್ ಮಲಿಶೆಟ್ಟಿ ಭಾನು ಕಿರಣ್ ಉರ್ಫ್ ಪ್ರಕಾಶ್ ತನ್ನ ಧಣಿ ಮುದ್ದಲಚೆರವು ಸೂರಿಯನ್ನು ಕೊಂದಿದ್ದು 2011 ರ ಜನವರಿ 3 ರಂದು. ಹೈದರಾಬಾದಿನ ಐಷಾರಾಮಿ ಏರಿಯಾ ಬಂಜಾರಾಹಿಲ್ಸ್‌ನ ನವೋದಯ ಕಾಲೋನಿಯಲ್ಲಿ ಸೂರಿಯ ಕಾರಲ್ಲಿದ್ದುಕೊಂಡೇ ಮುಂದೆ ಡ್ರೈವರ್ ಪಕ್ಕದ ಸೀಟಿನಲ್ಲಿ ಕೂತಿದ್ದ ಧಣಿ ಸೂರಿಯನ್ನು ಭಾನು ತನ್ನ ರಿವಾಲ್ವರಿನಿಂದ ಪಾಯಿಂಟ್ ಬ್ಲಾಂಕ್ ರೇಂಜ್‌ನಲ್ಲಿ ಗುಂಡಿಟ್ಟು ಕೊಂದಿದ್ದ. ಅಂಥಾ ಪರಿಟಾಲ ರವಿಯನ್ನೇ ತೆಲುಗು ದೇಶಂ ಪಕ್ಷದ ಕಚೇರಿಗೆ ನುಗ್ಗಿ ಹೀನಾಯವಾಗಿ ಕೊಲ್ಲಿಸಿದ್ದ ಸೂರಿ ಯಾರನ್ನು ತನ್ನ ಬೆಂಗಾವಲಿಗೆಂದು, ಬಲಗೈ ಬಂಟನೆಂದು ಜೊತೆಗಿಟ್ಟುಕೊಂಡಿದ್ದನೋ ಅದೇ ಭಾನು ಕೈಯಲ್ಲಿ ಕ್ಷುಲ್ಲಕವಾಗಿ ಕೊಲೆಯಾಗಿದ್ದ.

ನರಹಂತಕ ಸೂರಿ

ಅವತ್ತು ಎಸ್ಕೇಪಾದ ಭಾನು ಈಗ ಸಿಕ್ಕಿದ್ದಾನೆ. ಆಂಧ್ರದ ಸಿಐಡಿ ಮುಖ್ಯಸ್ಥ ರಮಣಮೂರ್ತಿಯವರ ಪ್ರಕಾರ ಭಾನು ಕಳೆದ ಒಂದೂವರೆ ವರ್ಷದಿಂದ ತಲೆಮರೆಸಿಕೊಂಡಿದ್ದ. ಸೂರಿಯನ್ನು ಕೊಂದಿದ್ದೇ ದೆಹಲಿಗೆ ಬಂದ. ಅಲ್ಲಿಂದ ಗುರಗಾಂವ್‌ನ ಲಾಡ್ಜ್ ಒಂದರಲ್ಲಿ ತಂಗಿದ್ದ. ಆನಂತರ ಮಧ್ಯಪ್ರದೇಶ, ಸಿಯೋನಿಗೆ ಬಂದು ತನ್ನ ಹೆಸರನ್ನು ಮಹೇಶ್ ಕುಂಜುಮನ್ ಎಂದು ಬದಲಿಸಿಕೊಂಡ. ಅಲ್ಲಿ ಮಾಸಿಕ 3 ಸಾವಿರ ರೂಪಾಯಿಗೆ ಬಾಡಿಗೆ ಮನೆಯೊಂದನ್ನು ಮಾಡಿ ಹೊಸ ಹೆಸರಲ್ಲೇ ಪ್ಯಾನ್‌ಕಾರ್ಡ್, ಸಿಮ್ ಕಾರ್ಡ್, ಗುರುತಿನ ಚೀಟಿ ಎಲ್ಲವನ್ನೂ ಸಂಪಾದಿಸಿದ. ಇದಾದ ನಂತರವೇ ಭಾನುವಿನ ಅಜ್ಞಾತ ಯಾತ್ರೆ ಶುರುವಾಗಿದ್ದು.

ಗೋವಾ, ದೆಹಲಿ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಬಿಹಾರ, ಕರ್ನಾಟಕ, ಯುಪಿ- ಹೀಗೆ ಕಂಡಕಂಡ ರಾಜ್ಯ ಊರುಗಳನ್ನು ಸುತ್ತಿಕೊಂಡಿದ್ದ ಭಾನು ಏಕಾಏಕಿ ಈ ಹೊತ್ತಿನಲ್ಲೇ ಏಕೆ ಸಿಕ್ಕಬಿದ್ದ? ಇಷ್ಟು ದಿನ ಏನು ಮಾಡಿಕೊಂಡಿದ್ದ? ಆತ ಸೂರಿಯನ್ನು ಕೊಂದಿದ್ದೇಕೆ? ಇತ್ಯಾದಿ ಪ್ರತಿಯೊಂದು ಪ್ರಶ್ನೆಗೂ ಆತನಲ್ಲೇ ಉತ್ತರವಿತ್ತು. ಅದು ಭಾನುವಿನ ಕ್ರಿಮಿನಲ್ ಬದುಕಿನ ಸಾರಾಂಶವಷ್ಟೆ.


ಜಗನ್ ರೆಡ್ಡಿ

ಬಾಡಿಗೆ ಹಂತಕರನ್ನು ಬಿಟ್ಟು ಮುದ್ದಲಚೆರವು ಸೂರಿ ತನ್ನ ಆಜನ್ಮ ವೈರಿ ಪರಿಟಾಲ ರವಿಯನ್ನು ಕೊಲ್ಲಿಸಿದ್ದು 2005 ರ ಜನವರಿಯಲ್ಲಿ, ಅದಕ್ಕೂ ಮುನ್ನ 1997 ರ ನವೆಂಬರ್ 19 ರಂದು ಜ್ಯೂಬಿಲಿ ಹಿಲ್ಸ್‌ನ ರಾಮಾನಾಯ್ಡು ಸ್ಟುಡಿಯೋದಲ್ಲಿ ರವಿಯನ್ನು ಬಾಂಬ್ ಇಟ್ಟು ಉಡಾಯಿಸಲು ಯತ್ನಿಸಿದ ಸೂರಿ ಬರೋಬ್ಬರಿ 26 ಮಂದಿಯನ್ನು ಬಾಂಬ್ ಸ್ಫೋಟದಲ್ಲಿ ಮುಗಿಸಿಹಾಕಿದ್ದ. ಅದು ಆಂಧ್ರ ಕಂಡು ಕೇಳರಿಯದ ಹತ್ಯಾಕಾಂಡವಾಗಿತ್ತು. ತನ್ನ ತಂದೆ ನಕ್ಸಲ್ ನಾಯಕ ಪರಿಟಾಲ ಶ್ರೀರಾಮುಲು ಜೀವಿತಗಾಥೆ ಕುರಿತಂತೆ ನಿರ್ಮಿಸುತ್ತಿದ್ದ 'ಶ್ರೀರಾಮುಲಯ್ಯ' ಎಂಬ ತೆಲುಗು ಚಿತ್ರದ ಮುಹೂರ್ತದಂದೇ ಸೂರಿ ಇಡೀ ಸ್ಟುಡಿಯೋ ತುಂಬ ಬಾಂಬುಗಳನ್ನಿರಿಸಿದ್ದ!

ಹೀಗೆ ಜ್ಯೂಬಿಲಿ ಹಿಲ್ಸ್ ಬಾಂಬ್ ದಾಳಿಯಲ್ಲಿ ಜೈಲುಪಾಲಾದ ಸೂರಿಗೆ ಜೈಲಲ್ಲಿ ಪರಿಚಯವಾದವನೇ ಮಲಿಶೆಟ್ಟಿ ಭಾನು ಅಲಿಯಾಸ್ ಭಾನು ಕಿರಣ್. ಯಾವುದೋ ರಿವಾಲ್ವರ್ ಕೇಸಲ್ಲಿ ಜೈಲು ಸೇರಿದ್ದ ಭಾನು ಮುಂದೆ ಸೂರಿಗೆ ಪರಮಾಪ್ತನಾದ. ಅಷ್ಟಕ್ಕೂ ಭಾನು ಕೂಡ ಅನಂತಪುರದವನೆ. ಆತನ ತಾಯಿ ಸ್ಕೂಲ್ ಟೀಚರ್. ಪರಿಟಾಲ ರವಿಯ ಹತ್ಯೆಯ ನಂತರ ಪೆನುಕೊಂಡದಲ್ಲಿ ತೆಲುಗು ದೇಶಂ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು ರವಿಯ ವಿಧವಾ ಪತ್ನಿ ಪರಿಟಾಲ ಸುನೀತಾ. ವಿಕಟವೆಂದರೆ ಸುನೀತಾ ವಿರುದ್ಧ ತನ್ನ ಪತ್ನಿ ಗಂಗುಲ ಭಾನುಮತಿಯನ್ನೇ ಸೂರಿ ಚುನಾವಣೆಗೆ ನಿಲ್ಲಿಸಿದ್ದ. ಅವತ್ತು ಜೈಲಲ್ಲಿದ್ದ ಸೂರಿಯ ಪರವಾಗಿ ಆತನ ಪತ್ನಿ ಭಾನುಮತಿಯ ಇಡೀ ಚುನಾವಣಾ ಪ್ರಚಾರ, ಖರ್ಚು, ವೆಚ್ಚ ಎಲ್ಲವನ್ನೂ ನಿಭಾಯಿಸಿದ್ದು ಇದೇ ಭಾನುಕಿರಣ್.


ಪರಿಟಾಲ

ಪ್ರತಾಪ್ ರೆಡ್ಡಿ

ಮುಂದೆ ಸೂರಿಯ ಪಾಲಿಗೆ ಭಾನುವೇ ನಂಬಿಕಸ್ಥ ಬಂಟನಾದ. ಅದೇ ಹೊತ್ತಿಗೆ ಸರಿಯಾಗಿ ಆಂಧ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ವೈ.ಎಸ್. ರಾಜಶೇಖರ ರೆಡ್ಡಿ ಮುಖ್ಯಮಂತ್ರಿಯಾದರೆ ಮು.ಮಂ. ಪುತ್ರ ಜಗನ್ ಮೋಹನ್ ರೆಡ್ಡಿಗೆ ಸೂರಿ ಹಿತೈಷಿಯಾದ. ಜೊತೆಗೆ ಬಳ್ಳಾರಿಯ ಗಣಿಕಳ್ಳ ಜನಾರ್ದನ ರೆಡ್ಡಿಯ ಗೆಳೆತನವೂ ಇತ್ತು, ಆಂಧ್ರ-ಕರ್ನಾಟಕದ ಗಡಿಯುದ್ದಕ್ಕೂ ಶುರುವಾದ ಅಕ್ರಮ ಗಣಿಗಾರಿಕೆಗೆ ಜಗನ್ ಮತ್ತು ಗಾಲಿ ರೆಡ್ಡಿಗಳೇ ಸೂತ್ರಧಾರರಾದರೆ ಈ ಗಣಿ ಸಾಮ್ರಾಜ್ಯದ ರಕ್ಷಣಾ ಪಡೆಯಂತಿದ್ದದ್ದು ಸೂರಿಯ ತಂಡ!

ಜೈಲಲ್ಲಿದ್ದುಕೊಂಡೇ ಇಡೀ ಆಂಧ್ರದ ಗಣಿ ಲೂಟಿ, ರಿಯಲ್ ಎಸ್ಟೇಟ್, ಸಿನಿಮಾ ದಂಧೆಗಳನ್ನು ನಿಭಾಯಿಸುತ್ತಿದ್ದ ಮುದ್ದಲಚೆರವು ಸೂರಿಗೆ ಆತನ ಕುಖ್ಯಾತಿ ಮತ್ತು ಪಾಪದ ಆಮದನಿಯೇ ಕಂಟಕವಾಯಿತು. ಎಲ್ಲಿ ತನ್ನ ಹೆಸರಲ್ಲಿ ದುಡ್ಡು ಆಸ್ತಿಯನ್ನು ಮಾಡಿಟ್ಟರೆ ಇವತ್ತಲ್ಲ ನಾಳೆ ಅದು ಪೊಲೀಸರ ಪಾಲಾಗುತ್ತೋ ಎಂದು ಎಲ್ಲವನ್ನೂ ತನ್ನ ಭಂಟ ಭಾನು ಹೆಸರಿಗೆ ಮಾಡಿಟ್ಟಿದ್ದ. ಅದೇ ಆತನ ಮಹಾಪರಾಧವಾಗಿತ್ತು.


ಆಂಧ್ರದ ಗೃಹ ಸಚಿವೆ ಸಬೀತಾ ಇಂದ್ರಾರೆಡ್ಡಿ

ವೈ.ಎಸ್.ಆರ್. ದುರ್ಮರಣಕ್ಕೀಡಾಗಿ ಕಾಂಗ್ರೆಸ್ ಹೊಸ ಮುಖ್ಯಮಂತ್ರಿಯನ್ನು ನೇಮಿಸಿದ್ದೇ ತಡ, ಆಂಧ್ರದ ರಾಜಕಾರಣ ಮತ್ತು ರಿಯಲ್ ಎಸ್ಟೇಟ್‌ನಲ್ಲಿ ಹೊಸ ಸಮೀಕರಣ ಶುರುವಾಯಿತು. ಹೊಸ ಸಂಪುಟದಲ್ಲಿ ಆಂಧ್ರದ ಗೃಹ ಮಂತ್ರಿಯಾಗಿದ್ದು ಸಬೀತಾ ಇಂದ್ರಾ ರೆಡ್ಡಿ. ಈಕೆಯ ಮಗನೇ ಪ್ರತಾಪ್ ರೆಡ್ಡಿ.

ಜಗನ್ ರೆಡ್ಡಿ ಜೊತೆ ಗಣಿ ಲೂಟಿಯ ನಂಟಿರುವಂತೆ ಗೃಹ ಸಚಿವೆಯ ಪುತ್ರ ಪ್ರತಾಪ್ ರೆಡ್ಡಿ ಜೊತೆಗೂ ಸೂರಿಗೆ ರಿಯಲ್ ಎಸ್ಟೇಟ್ ನೆಂಟಸ್ತಿಕೆಯಿತ್ತು. ಕೆಡುಕಿಗೋ ಗ್ರಹಚಾರಕ್ಕೋ ಗೊತ್ತಿಲ್ಲ 2004 ರ ಅಂತ್ಯದ ಹೊತ್ತಿಗೆ ಸೂರಿಗೆ ಜಾಮೀನು ಸಿಕ್ಕಿ ಜೈಲಿಂದ ಹೊರಬಿದ್ದ. ಜೈಲಲ್ಲೇ ಇದ್ದಿದ್ದರೆ ಬದುಕಿರುತ್ತಿದ್ದನೇನೊ. ಬಿಡುಗಡೆಗೊಂಡವನೇ ಆತನಕ ತಾನು ಭಾನುವನ್ನು ಬೇನಾಮಿಯಾಗಿಟ್ಟುಕೊಂಡು ಮಾಡಿದ ಅಷ್ಟೂ ಆಸ್ತಿಯನ್ನು ತನ್ನ ಹೆಸರಿಗೆ ವಾಪಸ್ಸು ಬರೆದುಕೊಡುವಂತೆ ಒತ್ತಾಯಿಸಲಾರಂಭಿಸಿದ. ಅದೇ ಸೂರಿಗೆ ಮುಳುವಾಯಿತು.

ಸರಿಸುಮಾರು ಐನೂರು ಕೋಟಿ ರೂಪಾಯಿ ಮೊತ್ತದ ಆಸ್ತಿ ಏಕಾಏಕಿ ತನ್ನ ಕೈತಪ್ಪಿ ಹೋಗುತ್ತದೆಯೆಂದರೆ ಯಾರಿಗೆ ತಾನೆ ತಲೆ ಕೆಡುವುದಿಲ್ಲ.

ಗ್ರೇಟ್ ಎಸ್ಕೇಪ್

ಸೂರಿಗಾಗಿದ್ದೂ ಅದೇ. ತನ್ನ ನೆಂಟರಿಷ್ಟರನ್ನೆಲ್ಲ ಬಿಟ್ಟು ನಂಬಿಕಸ್ತ ಭಾನು ಹೆಸರಿಗೆ ಮಾಡಿಟ್ಟಿದ್ದ ಕೋಟಿಗಟ್ಟಲೆ ಆಸ್ತಿಯೇ ವಿಷಪ್ರಾಗಿತ್ತು, ತನ್ನ ಹೆಸರಿನಲ್ಲಿದ್ದ ಸೂರಿಯ ಅಗಣಿತ ಆಸ್ತಿಯನ್ನು ಲಪಟಾಯಿಸುವ ಒಂದೇ ಉದ್ದೇಶದಿಂದ ಭಾನು 2011 ರ ಜನವರಿ 3 ರಂದು

ಯಲಹಂಕ ಶಾಸಕ ವಿಶ್ವನಾಥ್ ನೆರಳಲ್ಲಿ ಸೂರಿ ಗ್ಯಾಂಗ್

ಭಂಟ ಭಾನು ಹೆಸರಿಗೆ ಸೂರಿ ಮಾಡಿಟ್ಟಿದ್ದ ಕೋಟಿಗಟ್ಟಲೆ ಆಸ್ತಿ ಹೇಗೆ ಆತನಿಗೇ ಮುಳುವಾಯಿತೋ ಅದೇರೀತಿ ಈಗ ಅದೇ ಆಸ್ತಿಯೇ ಭಾನುವಿನ ಪ್ರಾಣಕ್ಕೆ ಎರವಾಗಲಿದೆ!

ಇದು ರಕ್ತ ಚರಿತ್ರದ ಕಟು ವಾಸ್ತವ. ಸದ್ಯ ಮುದ್ದಲಚೆರವು ಸೂರಿಯ ಕತೆಯೇನೋ ಮುಗಿದಿದೆ. ಹಾಗಂತ ಬಾನು ನೆಮ್ಮದಿಯಿಂದ ನಿದ್ರಿಸುವಂತಿಲ್ಲ, ಏಕೆಂದರೆ ಸೂರಿ ಹತ್ಯೆಯ ಪ್ರತೀಕಾರ ಬಿಡಬೇಕಲ್ಲ, ಪೆನುಕೊಂಡದ ಫ್ಯೂಡಲ್ ಲಾರ್ಡ್ ಮುದ್ದಲಚೆರವು ನಾರಾಯಣರೆಡ್ಡಿಯ ಮಗ ಸೂರಿಯ ಹತ್ಯೆಯೊಂದಿಗೆ ರಾಯಲಸೀಮದ ರಕ್ತ ಚರಿತ್ರೆ ಮುಗಿಯುವುದಾಗಿದ್ದರೆ ಆ ಮಾತು ಬೇರೆ. ಸೂರಿಯ ಹತ್ಯೆ ಜಿದ್ದಾಜಿದ್ದಿಯ ಒಂದು ತಲೆಮಾರಿನ ಅಂತ್ಯವೇನೋ ನಿಜ, ಆದರೆ ಸೂರಿಯ ಐನೂರು ಕೋಟಿಯ ಸಾಮ್ರಾಜ್ಯವಿದೆಯಲ್ಲ!

ಈ ಪೈಕಿ ಅತಿಹೆಚ್ಚು ಆಸ್ತಿಯಿರುವುದು ಬೆಂಗಳೂರು ಸುತ್ತಮುತ್ತಲೇ. ದೇವನಹಳ್ಳಿಯ ಅಂತರರಾಷ್ಟ್ರೀಯ ಏರ್‌ಪೋರ್ಟ್ ಸುತ್ತಮುತ್ತ ಸೂರಿಗೆ ಕಮ್ಮಿಯೆಂದರೂ ಇನ್ನೂರು ಕೋಟಿ ರೂ. ಆಸ್ತಿಯಿತ್ತು, ಹೊಸೂರು ರಸ್ತೆ ಸರ್ಜಾಪುರದಲ್ಲಿ ಎಕರೆಗಟ್ಟಲೇ ಭೂಮಿ ಖರೀದಿಸಿ ಅದನ್ನು ಭಾನು ಹೆಸರಿಗೆ ಸೂರಿ ಮಾಡಿಟ್ಟದ್ದು ಬೇರೆ ಯಾರಿಗಲ್ಲದಿದ್ದರೂ ಆತನ ಚಿಕ್ಕಪ್ಪನ ಮಗ ಅಂದರೆ ಸೂರಿಯ ತಂದೆ ಮುದ್ದಲಚೆರವು ನಾರಾಯಣ ರೆಡ್ಡಿಯ ತಮ್ಮನ ಮಗ ಗಂಗುಲ ಸುಧೀರ್ ರೆಡ್ಡಿಗೆ ಚೆನ್ನಾಗಿ ಗೊತ್ತಿತ್ತು.



ಸದ್ಯ ಸೂರಿ ರಕ್ತ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿ ಅಂತಿದ್ದರೆ ಅದು ಗಂಗುಲ ಸುಧೀರ್ ರೆಡ್ಡಿ ಮಾತ್ರ. ಕೊಲ್ಲುವುದಾಗಲಿ, ಕೊಲೆಯಾಗುವುದಾಗಲಿ ಮುದ್ದಲಚೆರವು ಗ್ಯಾಂಗ್‌ಗೆ ಹೊಸತೇನಲ್ಲ, ಸೂರಿ ಹತ್ಯೆಯ ಪ್ರತೀಕಾರವನ್ನು ಅದು ಕೈಗೊಳ್ಳದೇ ಬಿಡುವುದಿಲ್ಲ. ಇವತ್ತಲ್ಲ ನಾಳೆ ಹಂತಕ ಭಾನುವಿಗೆ ವಿಪತ್ತು ತಪ್ಪಿದ್ದಲ್ಲ. ಅದರಲ್ಲೂ ಆತನ ಕೋಟಿಗಟ್ಟಲೇ ಆಸ್ತಿಗಾದರೂ ಸೂರಿಯ ಗ್ಯಾಂಗ್ ಬೆನ್ನಟ್ಟದೇ ವಿರಮಿಸುವುದಿಲ್ಲ. ಒಂದು ಮೂಲದ ಪ್ರಕಾರ ಈಗಾಗಲೇ ಸೂರಿಯ ಅರ್ಧಗ್ಯಾಂಗ್ ಬೆಂಗಳೂರಿಗೆ ಬಂದು ನೆಲೆ ನಿಂತಾಗಿದೆ. ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ಕೇವಲ ಜಾತಿಯಲ್ಲಷ್ಟೇ ಅಲ್ಲ, ರಿಯಲ್ ಎಸ್ಟೇಟ್ ನೆಂಟಸ್ತಿಕೆಯಲ್ಲೂ ಸೂರಿ ಗ್ಯಾಂಗಿಗೆ ಪರಮಾಪ್ತ. ದೇವನಹಳ್ಳಿ ಸುತ್ತಮುತ್ತಲ ಸೂರಿಯ ಯಾವ್ಯಾವ ಆಸ್ತಿಗೆ ಆಂಧ್ರದ ಗ್ಯಾಂಗುಗಳು ಕೈ ಹಾಕಿವೆಯೋ ಗೊತ್ತಿಲ್ಲ.

ಈಗ ಸಿಕ್ಕಬಿದ್ದ ಭಾನು ಮಾತ್ರ ಸೂರಿಯ ಆಸ್ತಿ ರಹಸ್ಯವನ್ನು ಬಾಯಿ ಬಿಡಬಲ್ಲ, ಅಷ್ಟಕ್ಕೂ ಆಸ್ತಿಗಾಗಿ ಧಣಿಯನ್ನು ಕೊಂದದ್ದನ್ನು ಆತ ದಕ್ಕಿಸಿಕೊಳ್ಳಬೇಕಲ್ಲ? ಅದಕ್ಕೂ ಮೊದಲೇ ಸೂರಿಯ ಗ್ಯಾಂಗ್ ಆತನನ್ನು ಮುಗಿಸಿಬಿಟ್ಟರೆ...?

ಿನಲ್ಲಿ ತನ್ನ ಜೊತೆ ಪ್ರಯಾಣಿಸುತ್ತಿದ್ದ ಧಣಿ ಕೊಂದುಬಿಟ್ಟ. ವಿಪರ್ಯಾಸವೆಂದರೆ ಕೇವಲ ಾತ್ರವೇ ಅಲ್ಲ, ಸೂರಿಯ ಗನ್‌ಮನ್ ಮದನ್ ರೆಡ್ಡಿ, ಅಂಗರಕ್ಷಕರಾದ ಸುಲಂ ಸುಬ್ಬಯ್ಯ, ರಿಬಾಬು ಬೋಯಾ ವೆಂಕಟರಮಣ ುವರೆಲ್ಲರೂ ಭಾನು ಜೊತೆ ಕೈಜೋಡಿಸಿ ತಮ್ಮ ್ಲಿ ಕೊಂದುಬಿಟ್ಟರು.

ಪರಿಟಾಲ ರವಿಯನ್ನೇ ಕೊಲ್ಲಿಸಿದವನು, ಹಿಲ್ಸ್ ಬಾಂಬ್ ಬ್ಲಾಸ್ಟ್‌ನಲ್ಲಿ 26 ಮಂದಿಯ ೋಮಕ್ಕೆ ಕಾರಣನಾದವನು, ಇಡೀ ಆಂಧ್ರದ ಭೂಗತ ದೊರೆಯಾಗಿ ಮೆರೆದವನು ಯಕಶ್ಚಿತ್ ಕ್ಷ ಬಂಟರಿಂದಲೇ ಹೆಣವಾಗಿ ಹೋದ!

ೆ ಭಾನು ಮಾತ್ರ ಪೊಲೀಸರ ಕಣ್ಣಿಗೆ ಚಿಕೊಂಡೇ ಬಂದ. ಸೂರಿಯನ್ನು ್ಟಿಕೊಂಡೇ ಕೊಂದವನು ಗನ್‌ಮನ್ ಮದನ್‌ನ ಲ್ಲಾಪುರಕ್ಕೆ ಬಂದು ಅಲ್ಲಿಂದ ಮುಂಬೈ ತಲುಪಿ ದೆಹಲಿಗೆ ಬಂದ. ಅಲ್ಲಿಂದ ಗುರಗಾಂವ್‌ನ ್ಥಳಾಂತರಗೊಂಡ. ಅದೇನಾಯಿತೋ ಜೊತೆಗಿದ್ದ ಮದನ್ ಭಾನು ಮಲಗಿದ್ದ ಸಮಯವನ್ನೇ ರಾರಿಯಾಗಿಬಿಟ್ಟ. ಇದಾಗಿ ಎರಡೇ ತಿಂಗಳಿಗೆ ತಮಿಳುನಾಡಿನಲ್ಲಿ ಪೊಲೀಸರಿಗೆ ಸೆರೆಸಿಕ್ಕಿಬಿಟ್ಟ. ಾಗಲೇ ಭಾನು ಮಧ್ಯಪ್ರದೇಶದ ಸಿಯೋನಿಯಲ್ಲಿ ಮನೆ ಮಾಡಿ ತನ್ನ ಹೆಸರು, ಗುರುತು, ಷಣ ಎಲ್ಲವನ್ನೂ ಬದಲಿಸಿಕೊಂಡಿದ್ದ.

್ಟಿತ್ತಿಗಾಗಲೇ ಸೂರಿಯ ಹತ್ಯೆಗೆ ಸಹಕರಿಸಿದ್ದ ಟರರಾದ ಬೋಯಾ ವೆಂಕಟ, ಸುಲಂ ಸುಬ್ಬಯ್ಯ ವೆಂಕಟ ಹರಿಬಾಬುರನ್ನು ಆಂಧ್ರದ ಸಿಐಡಿ ು ಹಿಡಿದಾಗಿತ್ತು. ಈ ಎಲ್ಲಾ ಬೆಳವಣಿಗೆಗಳನ್ನು ಗಿದ್ದುಕೊಂಡೇ ಭಾನು ಗಮನಿಸಿದ್ದ ಸೂರಿ ಹತ್ಯೆಯ ನ ಬಳಿಯಿದ್ದದ್ದು ಬರೇ ನಾಲ್ಕು ಲಕ್ಷ ಮಾತ್ರ. ನು ರಾಜ್ಯದಿಂದ ರಾಜ್ಯಕ್ಕೆ ಊರಿನಿಂದ ಊರಿಗೆ ಾಗುತ್ತಲೇ ಇದ್ದ. ಓಡಾಡಲು ಕಾರು, ರಿವಾಲ್ವರ್, ು ಹೋಟೆಲುಗಳು ಪ್ರತಿನಿತ್ಯ ಕುಡಿತ ಎಲ್ಲವೂ ದರರ್ಥ ಸೂರಿಯ ಕೋಟಿಗಟ್ಟಲೇ ಅಕ್ರಮ ಭಾನು ತನ್ನ ಭೂಗತವಾಸಕ್ಕೆಂದು ಪೋಲು ್ದ. ಹೀಗೆ ಒಂದೂಕಾಲು ವರ್ಷವನ್ನು ಾಗಿದ್ದೇ ಕಳೆದ.

ಂನೂರು ಕೋಟಿಯ ಆಸ್ತಿ?

ಮಧ್ಯೆ ಸೂರಿಯ ಕೊಲೆ ಕೇಸಿಗೆ ಸಂಬಂಧಪಟ್ಟಂತೆ ಆರೋಪಪಟ್ಟಿಯನ್ನು ಸಲ್ಲಿಸಿದ್ದಾಗಿತ್ತು. ಪ್ರಕರಣದ ಯೂ ಶುರುವಾಗಿತ್ತು. ಸರ್ಕಾರ ಸೂರಿಯ ್ನು ಸಿಐಡಿಗೆ ವಹಿಸಿದ ಮೇಲಂತೂ ವಿವಿಧ ಡಗಳು ಭಾನುವಿನ ಬೆನ್ನು ಹತ್ತಿದ್ದವು. ಪ್ರಮುಖ ಭಾನು ಸಿಗದೆ ಸೂರಿಯ ಹತ್ಯೆಯ ಕೇಸೇ ವರಿಯುವುದು ಕಷ್ಟ ಎಂಬಂಥ ಬಿಕ್ಕಟ್ಟಿಗೆ ಆಂಧ್ರ ರು ತಲೆಕೊಡಬೇಕಾಯಿತು. ಬಹುಶಃ ಈ ್ಕೆ ಪೊಲೀಸರ ಮತ್ತು ಭಾನು ಮಧ್ಯೆ ರಾಜಿ ಬಹುದೆ?

ನುವಿನ ಬಂಧನದ ನಿಗೂಢದ ಸುತ್ತ ಾಡುವುದು ಇದೊಂದೇ ಪ್ರಶ್ನೆ. ಏಪ್ರಿಲ್ 21 ರ ಕರ್ನಾಟಕ ಮತ್ತು ಆಂಧ್ರ ಗಡಿಯ ಮೇಡು ಜಹೀರಾಬಾದ್‌ನ ಧಾಬಾ ಒಂದಕ್ಕೆ ದುಡ್ಡಿಗೆಂದು ಭಾನುವನ್ನು ಹೊಂಚು ಹಾಕಿ ಹಿಡಿದೆವೆಂದು ೊಲೀಸರು ಹೇಳುತ್ತಿದ್ದಾರೆ. ಪತ್ರಿಕಾಗೋಷ್ಠಿ ಕೂಡ ೆ. ಆದರೆ ಭಾನು ಮಾತ್ರ ಪತ್ರಕರ್ತರೆದುರು ನಗುತ್ತಿದ್ದಾನೆ. ಆತನ ಕಪಟ ನಗೆ, ಮಾರ್ಮಿಕ ಪೊಲೀಸರ ಕತೆ, ಸಿಕ್ಕಿಬಿದ್ದ ಸನ್ನಿವೇಶ ಎಲ್ಲವೂ ದೇ ಕತೆಯೊಂದನ್ನು ಹೇಳುತ್ತಿವೆ. ಇದರರ್ಥ ಮತ್ತು ಆಂಧ್ರ ಪೊಲೀಸರ ಮಧ್ಯೆ ಮೊದಲೇ ಕುದುರಿತ್ತೆ? ಸರ್ಕಾರದ ಉನ್ನತ ಅಧಿಕಾರಸ್ಥರ ಭಾನು ಶರಣಾಗಿರಬಹುದೆ? ಸೂರಿಯ ಅಕ್ರಮ ಒಂದು ಪಾಲನ್ನು ಬಿಟ್ಟುಕೊಡುತ್ತೇವೆಂಬ ಆಸೆ ಮೇ ಪೊಲೀಸರು ಡೀಲು ಕುದುರಿಸಿರಬಹುದೆ? ಾದರೆ ಪೊಲೀಸರಿಗೂ ಭಾನುವಿಗೂ ಮಧ್ಯೆ ರಾಜಿ ದ್ದು ಯಾರು?

ಪ್ರಶ್ನೆಗೆ ಆಂಧ್ರದ ವಿರೋಧಿ ನಾಯಕ ಚಂದ್ರಬಾಬು ತೋರಿಸುವುದು ಗೃಹಮಂತ್ರಿ ಸಬಿತಾ ್ಡಿಯ ಮಗನನ್ನು!


ನಿಜವೇ ಆಗಿದ್ದರೆ ಸೂರಿಯ ಬೇನಾಮಿ ಗೃಹಮಂತ್ರಿಣಿಯ ಪುತ್ರನಿಗೂ ಪಾಲು ್ಯು, ಎಷ್ಟೊಂದರೂ ಪಾಪಿ ಸೊತ್ತು ಪರಾಯಿ ?

ಹತ್ಯೆಯ ರಹಸ್ಯ ಮತ್ತು ಆತನ ಐನೂರು ಸಾಮ್ರಾಜ್ಯದ ಪ್ರಶ್ನೆ ಮಾತ್ರ ಕೊನೆಗೂ ಉಳಿಯುತು.

ಸಿಬಿಐ ಎಂಬ ಹಾವಿನ ಹೆಡೆ

ಏಪ್ರಿಲ್ 30 ಯಡ್ಡಿ ಪಾಲಿಗೆ ಪ್ರಳಯ ಮುಹೂರ್ತ

ಹಾವು ಹೆಡೆಯೆತ್ತಿ ನಿಂತಿದೆ. ಅಪ್ಪಳಿಸುವುದಕ್ಕಿನ್ನೂ ಎರಡೇ ದಿನ ಬಾಕಿ. ಏಪ್ರಿಲ್ ತಿಂಗಳ ಕೊನೆಯ ದಿನ ಅಂದರೆ 30ನೇ ತಾರೀಖಿಗೆ ಸುಪ್ರೀಂಕೋರ್ಟಿನ ನ್ಯಾಯಮೂರ್ತಿ ಕಪಾಡಿಯಾರ ಹಸಿರುಪೀಠ ಅಂದರೆ ಗ್ರೀನ್ ಬೆಂಚ್‌ನ ಆದೇಶ ಹೊರಬಿತ್ತೆಂದರೆ ಸಿಬಿಐ ಎಂಬ ಘಟಸರ್ಪ ಹೆಡೆಯ ಅಡಿಯಲ್ಲಿ ಇಡೀ ಯಡ್ಡಿಯ ಭವಿಷ್ಯ ಸಿಲುಕಿಕೊಳ್ಳುತ್ತದೆ!



ಒಮ್ಮೆ ಸಿಬಿಐ ಕಪಿಮುಷ್ಟಿಗೆ ಸಿಲುಕಿದ ಯಾವ ರಾಜಕಾರಣಿ ತಾನೇ ಮತ್ತೆ ಎದ್ದು ನಿಂತಿದ್ದಾನೆ?

ಇದೇ ಭೀತಿಗೆ ಬಿದ್ದ ಯಡ್ಡಿ ಬೆಂಬಲಿಗ ಮಂತ್ರಿಗಳೆಲ್ಲ ಸಿಇಸಿ ಸುಪ್ರೀಂಕೋರ್ಟಿಗೆ ವರದಿ ಸಲ್ಲಿಸಿದ ಮರುಕ್ಷಣಕ್ಕೇ ಯಡ್ಡಿ ನಿವಾಸಕ್ಕೆ ಧಾವಿಸಿ ಬಂದು ತಮ್ಮ ನಾಯಕನಿಗೆ ಧೈರ್ಯ ಹೇಳಲಾರಂಭಿಸಿದ್ದು!


Of course ಸಿಇಸಿ ಸಿಬಿಐ ತನಿಖೆಯೊಂದನ್ನೇ ಒತ್ತಿ ಹೇಳಿಲ್ಲ ನಿಜ. ಆದರೆ ಉನ್ನತ ಮಟ್ಟದ ತನಿಖೆಯಂತೂ ನಡೆಯಲೇಬೇಕೆಂದು ಪಟ್ಟು ಹಿಡಿದಿದೆಯೆಂದರೆ ಅದು ಸಿಬಿಐ ತನಿಖೆಯಲ್ಲದೆ ಮತ್ತೇನು?

ಇಲ್ಲಿಗೆ ವಾರದ ಹಿಂದೆ ಸಿಇಸಿ ತನ್ನ ವರದಿಯನ್ನು ಸುಪ್ರೀಂಕೋರ್ಟಿಗೆ ಸಲ್ಲಿಸುವುದಕ್ಕೂ ಮುನ್ನ ಇದ್ದ ಯಡ್ಡಿಯ ವರ್ತನೆಗೂ ಆನಂತರದ ವರ್ತನೆಗೂ ಇರುವ ವ್ಯತ್ಯಾಸವೊಂದೇ ಸಾಕು-ಯಡ್ಡಿಯ ಭವಿಷ್ಯ ಎಂಥಾ ಅಪಾಯದಲ್ಲಿದೆ ಎಂಬುದನ್ನು ಸಾರಿ ಹೇಳಲು-

ಏಪ್ರಿಲ್ 30 ಕ್ಕೆ ಸುಪ್ರೀಂಕೋರ್ಟ್‌ನ ಹಸಿರುಪೀಠವೇನಾದರೂ ಗಣಿಲೂಟಿಗೆ ಸಂಬಂಧಪಟ್ಟಂತೆ ಯಡ್ಡಿಯ ಪಾತ್ರದ ಕುರಿತಂತೆ ಸಿಬಿಐ ತನಿಖೆಗೆ ಆದೇಶಿಸಿತೆಂದರೆ ಸದ್ಯ ಜೈಲಲ್ಲಿರುವ ಗಾಲಿ ಜನಾರ್ದನ ರೆಡ್ಡಿಗೂ ಮಾಜಿ ಮುಖ್ಯಮಂತ್ರಿ ಯಡ್ಡಿಗೂ ಹೆಚ್ಚು ವ್ಯತ್ಯಾಸವಿರುವುದಿಲ್ಲ!

ಸಿಬಿಐ ಕುಣಿಕೆ


ಅದಕ್ಕೇ ಇರಬೇಕು ರೆಸಾರ್ಟ್ ಯಾತ್ರೆ, ಉಪಾಹಾರ ಕೂಟ, ಬೆಂಬಲಿಗರ ಸಮಾವೇಶ, ಬರಪೀಡಿತ ಪ್ರದೇಶಗಳ ಯಾತ್ರೆಗೆಂದು ಹೊರಟಿದ್ದ ಯಡ್ಡಿ ಏಕಾಏಕಿ ಥಂಡಾ ಹೊಡೆದು ಕುಳಿತಿದ್ದಾರೆ. ಹಿಂದಿನಂತೆ ಹೈಕಮಾಂಡ್ ವಿರುದ್ಧದ ಆಕ್ರೋಶವಿಲ್ಲ, ಪದೇಪದೇ ಮುಖ್ಯಮಂತ್ರಿ ವಿರುದ್ಧ ಗುಡುಗುತ್ತಿಲ್ಲ, ಕಂಡಕಂಡ ದೇವಸ್ಥಾನಗಳ ಮೊರೆಹೊಕ್ಕು, ಯಾವುದೇ ಕಾರಣಕ್ಕೂ ನಾನು ಬಿಜೆಪಿಯನ್ನು ಬಿಡುವುದಿಲ್ಲ, ವಿನಾಕಾರಣ ದೆಹಲಿಗೂ ಹೋಗುವುದಿಲ್ಲ, ನನಗೆ ಸ್ಥಾನಮಾನವನ್ನು ಕೊಡಬೇಕೋ ಬೇಡವೋ ಎಂಬುದನ್ನು ಪಕ್ಷದ ವರಿಷ್ಠರೇ ಸೂಕ್ತ ಕಾಲದಲ್ಲಿ ನಿರ್ಧರಿಸುತ್ತಾರೆ!



ಇದು ಯಡ್ಡಿಯ ಬದಲಾದ ವರಸೆ ಮತ್ತು ಹತಾಶೆ ಕೂಡ. ಅಲ್ಲಿಗೆ ತಾನೆಂಥಾ ಅಪಾಯಕ್ಕೆ ಸಿಲುಕಿದ್ದೇನೆಂಬುದು ಯಡ್ಡಿಗೆ ಗ್ಯಾರಂಟಿಯಾಗಿರಬೇಕು! ಮತ್ತೆ ಮುಖ್ಯಮಂತ್ರಿ ಪದವಿ ಅಥವಾ ಪಕ್ಷಾಧ್ಯಕ್ಷ ಗಾದಿಗಿಂತಲೂ ತಾನು ಸಿಬಿಐ ಕುಣಿಕೆಗೆ ಸಿಲುಕದಂತೆ ಬಚಾವಾಗುವುದೇ ಯಡ್ಡಿಯ ಸದ್ಯದ ಪರಮಗುರಿ. ಇದು ಗೊತ್ತಾಗಿಯೇ ಯಡ್ಡಿ ನಿಷ್ಠರೆಲ್ಲ ಸೇರಿ ಈಶ್ವರಪ್ಪ ಸದಾನಂದ ಗೌಡರ ಜೊತೆ ಯಡ್ಡಿಯನ್ನು ಪಕ್ಷದ ಕಚೇರಿಯಲ್ಲಿ ಕೂರಿಸಿ ಮರು ಬೆಸುಗೆ ಹಾಕಿದ್ದಾಯ್ತು. ಯಾವತ್ತು ಸಿಬಿಐ ಕುಣಿಕೆ ಬಿಗಿಯಾಗುತ್ತಿದೆಯೆಂಬುದು ಡೀವಿಗೆ ಗೊತ್ತಾಯಿತೋ, ತನ್ನ ಮುಖ್ಯಮಂತ್ರಿಗಿರಿ ನಿರಾತಂಕ ಎಂಬುದು ಖಾತರಿಯಾಯಿತೋ ಆಗಲೇ ಸಚಿವ ಸಂಪುಟದ ಪುನರ್ರಚನೆಯ ರಾಗ ಶುರುವಿಟ್ಟದ್ದು!

ಅದು ಸಚಿವ ಸಂಪುಟದ ವಿಸ್ತರಣೆಯೋ ಅಥವಾ ಪುನರ್ರಚನೆಯೋ ಸ್ವತಃ ಡೀವಿಯಲ್ಲೇ ಸ್ಪಷ್ಟತೆಯಿಲ್ಲ. ಅಂತೂ ಯಡ್ಡಿಯ ರಕ್ತಪ್ರಕ್ಷ ಕತ್ತರಿಸಬೇಕು. ತಾನು ಬಲಗೊಳ್ಳಬೇಕು. ಉಳಿದ ಅವಧಿಯ ತನಕ ಹೇಗಾದರೂ ಕಾಲ ತಳ್ಳಬೇಕು. ಇಂಥ ಲೆಕ್ಕ ಹಾಕಿಯೇ ಸಂಪುಟದ ಪುನರ್ರಚನೆಯ ಗಿಣೀಪಾಠ ಒಪ್ಪಿಸತೊಡಗಿದ ಮು.ಮಂ. ಡೀವಿಯ ಹಿಂದಿದ್ದದ್ದು ಪಕ್ಷಾಧ್ಯಕ್ಷ ಈಶ್ವರಪ್ಪ!

ಹೇಗೂ ಸುಪ್ರೀಂಕೋರ್ಟ್ ಸಿಬಿಐ ತನಿಖೆಗೆ ಆದೇಶಿಸುವುದು ಶತಸ್ಸಿದ್ಧ. ಹಾಗಾದ ಮರುಗಳಿಗೆಯಲ್ಲೇ ಇಡೀ ಯಡ್ಡಿ ಗ್ಯಾಂಗ್‌ನ ಅರ್ಧ ಶಕ್ತಿ ಉಡುಗುತ್ತದೆ. ತನ್ನನ್ನು ಸಿಬಿಐ ಕುಣಿಕೆಯಿಂದ ಬಚಾವು ಮಾಡುವಂತೆ ಕೇಂದ್ರದ ಕಾಂಗ್ರೆಸ್ ಹೈಕಮಾಂಡನ್ನು ಓಲೈಸಲು ಯಡ್ಡಿಗಿರುವುದು ಎರಡೇ ದಾರಿ. ಒಂದು ಬಿಜೆಪಿಯನ್ನು ತೊರೆದು ಸರ್ಕಾರ ಉರುಳಿಸುವುದು. ಅದಕ್ಕೆ ಪೂರಕವಾಗಿ ತನ್ನದೇ ಪಕ್ಷ ಕಟ್ಟುವುದು ಅಥವಾ ಶರದ್ ಪವಾರ್‌ಗೆ ಶರಣಾಗಿ ಎನ್‌ಸಿಪಿ ಸೇರುವುದು!



ಪಕ್ಷ ತೊರೆದರೆ....

ಇದರ ಹೊರತಾಗ್ಯೂ ಇರುವ ಎರಡನೇ ದಾರಿಯೆಂದರೆ ಬಿಜೆಪಿಯಲ್ಲೇ ಇದ್ದು ತನ್ನ ಕಾಂಗ್ರೆಸ್ ಪರಮಾಪ್ತ ಕೆ.ಎಚ್. ಮುನಿಯಪ್ಪನವರ ಮೂಲಕ ಸೋನಿಯಾರ ದಯೆ ಯಾಚಿಸುವುದು!

ಈ ನಿಟ್ಟಿನಲ್ಲಿ ಯಡ್ಡಿ ಏನೇ ಹೆಜ್ಜೆಯಿಟ್ಟರೂ ಅದೂ ಕೂಡ ಯಡ್ಡಿಗೇ ಮುಳುವೆಂಬುದು ಅವರ ವಿರೋಧಿ ಬಣಕ್ಕೆ ಚೆನ್ನಾಗಿ ಗೊತ್ತಿದೆ. ಹಾಗೊಮ್ಮೆ ಬಿಜೆಪಿಯಿಂದ ಯಡ್ಡಿ ಹೊರಕ್ಕೊಂದು ಕಾಲಿಟ್ಟ ಮರುಗಳಿಗೇನೇ ಅವರ ಬಹುತೇಕ ಬೆಂಬಲಿಗರೆಲ್ಲ ಉಲ್ಟಾ ಹೊಡೆಯುತ್ತಾರೆ. ಹೆಚ್ಚೆಂದರೆ ಸೋಮಣ್ಣ ನಿರಾಣಿ, ಕರಂದ್ಲಾಜೆ ಮತ್ತು ರೇಣುಕಾಚಾರ್ಯರಂಥವರು ಯಡ್ಡಿ ಬೆನ್ನಿಗೆ ನಿಲ್ಲಬಹುದು. ಶೆಟ್ಟರ್, ಬೊಮ್ಮಾಯಿ, ಉದಾಸಿ, ಕತ್ತಿ ಬೆಳಮಗಿಯಂಥವರ್‍ಯಾರೂ ಪಕ್ಷದಿಂದಾಚೆಗೆ ಯಡ್ಡಿಯ ಜೊತೆ ನಿಲ್ಲಲಾರರು. ಈಗಿರುವ 65 ಕ್ಕೂ ಅಧಿಕ ಮಂದಿ ಶಾಸಕರ ಬೆಂಬಲವೆಂಬುದು ಪಕ್ಷದಿಂದಾಚೆಗೆ ಯಡ್ಡಿ ಕಾಲಿಟ್ಟ ಮರುಕ್ಷಣಕ್ಕೇ ಇಪ್ಪತ್ತಕ್ಕಿಂತ ಕಮ್ಮಿ ಸಂಖ್ಯೆಗೆ ಇಳಿಯುತ್ತದೆ. ಆಗ ಸಹಜವಾಗಿಯೇ ಜೆಡಿಎಸ್ ಡೀವಿಯ ಬೆಂಬಲಕ್ಕೆ ನಿಲ್ಲುತ್ತದೆ ಅಥವಾ ಆಪರೇಷನ್ ಕಮಲದ ಮೂಲಕ ಒಂದಷ್ಟು ಜೆಡಿಎಸ್, ಕಾಂಗ್ರೆಸ್ ಶಾಸಕರ ರಾಜೀನಾಮೆ ಕೊಡಿಸಿದರೂ ಸಮಸ್ಯೆ ಬಗೆಹರಿದಂತೆಯೇ.



ಇಂಥದೊಂದು ಲೆಕ್ಕ ಹಾಕಿಯೇ ಈ ಬಾರಿಯ ಸಚಿವ ಸಂಪುಟ ವಿಸ್ತರಣೆಯಲ್ಲಿ ನಿರಾಣಿ, ಸೋಮಣ್ಣ, ರೇಣುಕಾಚಾರ್ಯ ಮತ್ತು ಉದಾಸಿಯನ್ನು ಕೈಬಿಟ್ಟು ಮೂಲ ಬಿಜೆಪಿಯವರಿಗೇ ಅವಕಾಶ ಕಲ್ಪಿಸುವಂತೆ ಒತ್ತಾಯಿಸಿ ಸಹಿ ಸಂಗ್ರಹಣೆ ಶುರುವಾಗಿದೆ. ಹೀಗೆ ಮೂಲ ಬಿಜೆಪಿ ವಲಸೆ ಬಿಜೆಪಿ ಎಂಬ ವಿಚಿತ್ರ ಭೇದವೊಂದನ್ನು ಹುಟ್ಟುಹಾಕಿ ಪರೋಕ್ಷವಾಗಿ ಯಡ್ಡಿಯನ್ನು ಹಣಿಯಲು ಸಹಿ ಸಂಗ್ರಹಣೆಗಿಳಿದಿರುವುದು ಸೊಗಡು ಶಿವಣ್ಣ, ಸಿ.ಟಿ. ರವಿ, ಚರಂತಿಮಠ, ಅಪ್ಪಚ್ಚು ರಂಜನ್, ಪಟ್ಟಣ ಶೆಟ್ಟಿ, ಶಂಕರಲಿಂಗೇಗೌಡ ಮುಂತಾದ ಆರೆಸ್ಸೆಸ್ ನಿಷ್ಠ ಶಾಸಕರಾದರೂ ಅದರ ಹಿಂದಿರುವುದು ಡೀವಿ ಮತ್ತು ಈಶ್ವರಪ್ಪ ಜೋಡಿಯೇ.

ಏಪ್ರಿಲ್ 30.....!

ಮೂಲ ಬಿಜೆಪಿ ಅಥವಾ ಎರವಲು ಬಿಜೆಪಿ ಎಂಬ ಹೊಸ ಪಂಕ್ತಿಭೇದ ಸಚಿವ ಸಂಪುಟದ ಪುನರ್ರಚನೆಯ ಮಟ್ಟಿಗಷ್ಟೇ ಏಕೆ ತಲೆ ಎತ್ತಿದೆಯೆಂದರೆ ಇವತ್ತಲ್ಲಾ ನಾಳೆ ಯಡ್ಡಿಯಿಂದ ಪಕ್ಷಕ್ಕೆ ಆಪತ್ತೆಂಬುದು ಆರೆಸ್ಸೆಸ್‌ಗೆ ಖಾತರಿಯಾಗಿದೆ. ಹಾಗೊಮ್ಮೆ ಪಕ್ಷ ತೊರೆಯದೇ ಹೋದರೂ ನಾಳೆ ಸಿಬಿಐ ಯಡ್ಡಿಯನ್ನು ಬಂಧಿಸಿತೆಂದರೆ ಮುಂಬರುವ ಚುನಾವಣೆಯಲ್ಲಿ ಪಕ್ಷದ ಪಾಲಿಗದು ದೊಡ್ಡ ಕಳಂಕವೆ. ಈ ಎಲ್ಲಾ ಹಿನ್ನೆಲೆಯಲ್ಲೇ 27 ಮಂದಿ ಬಿಜೆಪಿ ಶಾಸಕರು ಈಗಾಗಲೇ ಸಹಿ ಹಾಕಿದ್ದಾರೆ. ಸದ್ಯ ಬಿಜೆಪಿಯಲ್ಲಿರುವುದು ಯಡ್ಡಿ ಪರ ಮತ್ತು ಯಡ್ಡಿ ವಿರೋಧಿ ಬಣ ಮಾತ್ರವೆಂಬುದು ಜಗಜ್ಜಾಹೀರುಗೊಂಡಾಗಿದೆ.

ಇದು ಯಡ್ಡಿಗೂ ಗೊತ್ತಿದೆ. ಸದ್ಯ ಬಿಜೆಪಿಯ ಬೆಂಬಲವಿಲ್ಲದೆ ಹೋದರೆ ತನ್ನದು ನಾಯಿಪಾಡೆಂಬುದು ಮನದಟ್ಟಾಗಿಯೇ ಪಕ್ಷ ಬಿಡುವುದಿಲ್ಲ, ದೆಹಲಿಗೆ ಹೋಗಲ್ಲ, ಸ್ಥಾನಮಾನ ಕೇಳುವುದಿಲ್ಲ ಎಂಬ ಹೊಸ ವರಸೆ ಆರಂಭಿಸಿದ್ದಾರೆ. ಅತ್ತ ಪಕ್ಷ ತೊರೆದರೂ ಕಷ್ಟ. ತೊರೆಯದೇ ಹೋದರೂ ಕಷ್ಟ. ಇಂಥದೊಂದು ಅಡಕತ್ತರಿಗೆ ಯಡ್ಡಿಯನ್ನು ಸಿಲುಕಿಸಿರುವುದು ಸಿಇಸಿ ಮುಖ್ಯಸ್ಥ ಜಯಕೃಷ್ಣನ್ ಮತ್ತು ಸದಸ್ಯ ಕಾರ್ಯದರ್ಶಿ ಜೀವರಾಜ್ಖು!

ಏಪ್ರಿಲ್ 30 ಕ್ಕೆ ಸಿಇಸಿಯ ವರದಿಯ ಕುರಿತಂತೆ ಸುಪ್ರೀಂಕೋರ್ಟ್ ತನ್ನ ಆದೇಶ ಪ್ರಕಟಿಸಲಿದೆ. ಹೆಚ್ಚೆಂದರೆ ಅದು ಇನ್ನೊಂದು ವಾರ ಮುಂದಕ್ಕೆ ಹೋಗಬಹುದು. ಗಾಲಿ ಜನಾರ್ದನರೆಡ್ಡಿಯನ್ನು ಹಣಿದು ಗಣಿ ಧಣಿಗಳು ಶ್ರೀರಾಮುಲು ಮೂಲಕ ಹೊಸ ಪಕ್ಷ ಹುಟ್ಟುಹಾಕುವಂತೆ ಮಾಡಿದ ಸಿಬಿಐ ನಾಳೆ ಯಡ್ಡಿಗೂ ಇದೇ ಗತಿ ಕಾಣಿಸಲಾರದು ಎಂಬುದಕ್ಕೆ ಏನು ಗ್ಯಾರಂಟಿ?

ಸದ್ಯ ರಾಜ್ಯ ಬಿಜೆಪಿ ಪಾಲಿಗೆ ಯಡ್ಡಿಯೇ ಸೆರಗಿನ ಕೆಂಡ. ಇಟ್ಟುಕೊಂಡರೂ ಕಷ್ಟ ದೂರವಿಟ್ಟರೂ ಕಷ್ಟ.

ಉತ್ತರ ಕನ್ನಡದಲ್ಲೂ 'ಎಂಡೋ' ನರಕ!!

ಈ ವರದಿಗಾರನಿಗಿನ್ನೂ ಚೆನ್ನಾಗಿ ನೆನಪಿದೆ. 1987 ರ ಸಮಯವದು; ಕಾಲೇಜಿಗೆ ಹೋಗುತ್ತಿದ್ದ ದಿನಗಳವು. ಆಗ ಜನರು-ವಿದ್ಯಾರ್ಥಿಗಳು ಗೇರು ತೋಪಿನ ಮೇಲೆ ಹೆಲಿಕಾಪ್ಟರ್ ಹಾರಾಡುವ 'ಅಬ್ಬರ' ಬಗ್ಗೆ ಮಾತಾಡಿಕೊಳ್ಳುತ್ತಿದ್ದರು! "ಗೇರು ಬೆಟ್ಟಕ್ಕೆ ಮದ್ದು ಹೊಡೀಲಿಕ್ಕೆ ಹೆಲಿಕಾಪ್ಟರ್ ಬರ್‍ತದಂತೆ... ಭಟ್ಕಳದ ಕಡೆಗೆಲ್ಲ ಔಷಧಿ ಹೊಡ್ಡು ಹೋಯ್ತಂತೆ... ಬಾಕಿ ತಾಲ್ಲೂಕ್‌ನ ಗೇರು ಹೂವಿಗೆ ಬಂದ ಕ್ರಿಮಿರೋಗಕ್ಕೆ ಮದ್ದು ಸಿಂಪಡಿಸ್ಲಿಕ್ಕೆ ಹೆಲಿಕಾಪ್ಟರ್ ಬರ್‍ತದಂತೆ...!!" ಎಂಬಂಥ ಕುತೂಹಲಕರ ನುಡಿಕಟ್ಟುಗಳು 1980 ಉತ್ತರಾರ್ಧದಲ್ಲಿ ಉತ್ತರ ಕನ್ನಡದ ಕರಾವಳಿಯಲ್ಲಿ ಕೇಳಿಬಂದಿತ್ತು.

ಆಗ ಭಟ್ಕಳದಲ್ಲಿ ಸಿಂಪಡಣೆಯಾಗಿದ್ದು "ಎಂಡೋ ಸಲ್ಫಾನ್" ಎಂಬ ಅನಾಹುತಕಾರಿ ಕ್ರಿಮಿನಾಶಕ! ಇದು ಅಂತಿಂಥ ಪ್ರಳಯಾಂತಕ ರಾಸಾಯನಿಕವಲ್ಲ!! ಮನುಷ್ಯನ ವಂಶವಾಹಿನಿಯನ್ನೇ ಬದಲಿಸುವ ಮ್ಯೂಟೇಷನ್‌ಗೂ ಕಾರಣವಾಗಬಲ್ಲ ಅತಿ ವಿಷವಿದು. ಒಮ್ಮೆ ಸಿಂಪಡಣೆಯಾದ "ಎಂಡೋ"ದ ದುಷ್ಪರಿಣಾಮ ಅರ್ಧದಷ್ಟು ಕಡಿಮೆಯಾಗಲಿಕ್ಕೂ ವರ್ಷ ಎರಡಕ್ಕಿಂತ ಹೆಚ್ಚು ಕಾಲ ಬೇಕು! ಈ ರಾಸಾಯನಿಕವನ್ನು ಮನುಷ್ಯರ ಪುಪ್ಪುಸ, ಜಠರ ಮತ್ತು ಚರ್ಮ ಬಹುಬೇಗ ಹೀರಿಕೊಳ್ಳುತ್ತದೆ. ಇದರಿಂದ ರಕ್ತಹೀನತೆ, ನಿಶ್ಶಕ್ತಿ, ಬುದ್ಧಿ ಮಾಂದ್ಯತೆ, ಬಂಜೆತನ, ಕುರುಡುತನ, ಕ್ಯಾನ್ಸರ್‌ನಂಥ ರೌರವ ರೋಗರುಜಿನಗಳು ಬರುತ್ತವೆಂದು ಸಂಶೋಧನೆಗಳೇ ಸಾಬೀತುಪಡಿಸಿವೆ. ಇಂಥ ಭೀಭತ್ಸ "ಎಂಡೋ" ಆವತ್ತು ಭಟ್ಕಳದ 'ಬೆಳ್ಳಿ' ಎಂಬ ಹಳ್ಳಿಯ ಸುತ್ತಲಿನ ಎಂಟ್ಹತ್ತು ಕಿ.ಮೀ. ವ್ಯಾಪ್ತಿಯ ಹತ್ತಾರು ಊರುಗಳಲ್ಲಿ ಮಾಡಿದ ಅನಾಹುತ ಈಗೀಗ ಅರಿವಿಗೆ ಬರುತ್ತಿದೆ! ಈ ಎಂಡೋ ಮಹಾಮಾರಿ ಹೆಚ್ಚುಕಮ್ಮಿ 250 ಮಂದಿಯ ಬದುಕನ್ನೇ ಆಪೋಷನ ಪಡೆದುಬಿಟ್ಟಿದೆ!!

1980 ದಶಕದಲ್ಲಿ ಗೇರುಬೀಜ ಉತ್ಪಾದನೆ ಲಾಭದಾಯಕ ಬೆಳೆಯಾಗಿ ಅವತರಿಸಿತ್ತು. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಯಥೇಚ್ಛವಾಗಿದ್ದ ಈ ಗೇರು ಮರಗಳ ಮೇಲೆ ಆಗ ಸರ್ಕಾರಿ ಪ್ರಭೃತಿಗಳ ಕಣ್ಣುಬಿತ್ತು, 'ಗೇರು ಅಭಿವೃದ್ಧಿ ನಿಗಮ'ವೂ ರಚನೆಯಾಯ್ತು. 'ರಂಗೀಲಾ' ಸಾಹಿತಿ ವಿಶುಕುಮಾರ್, ಗಂಡಾಗುಂಡಿ ಶಾಸಕ ಗೋಪಾಲ ಕಾನಡೆಯಂಥವರು ಇದರ ಆರಂಭಿಕ ಅಧ್ಯಕ್ಷರಾಗಿ ಗೂಟದ ಕಾರಲ್ಲಿ ಮೆರೆದು ಮಾಯವಾದರು. ಈಗ ಹೋಪ್‌ಲೆಸ್ ಚಡ್ಡಿ ಚತುರ ವಿನೋದ್ ಪ್ರಭು ಎಂಬ ನಿರಾಶ್ರಿತನಿಗೆ ಬಿಜೆಪಿ ಸರ್ಕಾರ ಈ ನಿಗಮದಲ್ಲಿ 'ಪುನರ್ವಸತಿ' ಕಲ್ಪಿಸಿದೆ. ಈ ಗೇರು ಅಭಿವೃದ್ಧಿ ನಿಗಮ 80ರ ದಶಕದಲ್ಲಿ ಕರಾವಳಿಯಲ್ಲಿ ಅಲ್ಲಲ್ಲಿ ಸಾವಿರಾರು ಹೆಕ್ಟೇರ್ ಗೇರುತೋಪು ಮಾಡಿತು. ಆಗ ಅದಕ್ಕೆ ಮಾರಕ ಕ್ರಿಮಿ ರೋಗವೊಂದು ಬಂತು. ಈ ಪೊಕ್ಕು ಕ್ರಿಮಿಗಳನ್ನು ನಾಶ ಮಾಡಲು ನಿಗಮದ ಪಂಡಿತರು 'ಎಂಡೋಸಲ್ಫಾನ್' ಎಂಬ ಕಾರ್ಕೋಟಕ ವಿಷವನ್ನೇ ಆಯ್ದುಕೊಂಡರು.

ಯಾವುದಾದರೂ ಮೃದು ವಿಷ ಪ್ರಯೋಗಿಸಬಹುದಿತ್ತು, ಆದರೆ ನಿಗಮದ ಗೋಲ್‌ಮಾಲ್ ಗಿರಾಕಿಗಳಿಗೆ 'ಎಂಡೋ' ಉತ್ಪಾದಕ ಕಂಪನಿಗಳೊಂದಿಗಿದ್ದ ರಹಸ್ಯ ಸ್ನೇಹದಿಂದ ಎಲ್ಲ ಎಡವಟ್ಟಾಗಿ ಹೋಯ್ತು, ಇದೇರೀತಿ ದಕ್ಷಿಣ ಕನ್ನಡದ ಗಡಿಯಲ್ಲಿರುವ ಕೇರಳ ರಾಜ್ಯದ ಕಾಸರಗೋಡಿನಲ್ಲೂ ಎಂಡೋ ಸಿಂಪಡಿಸಲಾಗಿತ್ತು, ವಿದೇಶದಲ್ಲಿ ನಿಷೇಧಿಸಲಾಗಿರುವ 'ಎಂಡೋ' ಕೇರಳ ಮತ್ತು ಕರ್ನಾಟಕದಲ್ಲಿ ಮನಸೋ ಇಚ್ಛೆ ಬಳಸಲಾಯ್ತು, ಇದರಿಂದಾಗಿ ಗೇರು ಮರಕ್ಕೆ ಅಂಟಿದ್ದ ಕ್ರಿಮಿಗಳ ಜೊತೆಗೆ ಪರಿಸರ-ಜೀವಸಂಕುಲ-ಮಾನವ ಸಂತತಿ ನಾಶಕ್ಕೂ ಸರ್ಕಾರಗಳೇ ಮುಂದೆ ನಿಂತು ಕಾರ್ಯಾಚರಣೆ ನಡೆಸಿದಂತಾಯ್ತು!






ಎಂಡೋಸಲ್ಫಾನ್ ಕ್ರಿಮಿನಾಶಕದಿಂದ ಅಂಗವೈಕಲ್ಯಕ್ಕೆ ಈಡಾಗಿರುವ ಮಕ್ಕಳು

ಗೇರುಬೀಜ ತರುತ್ತಿದ್ದ ಭರ್ಜರಿ ದುಡ್ಡಿನ ಲಾಲಸೆಯಿಂದ ಸರ್ಕಾರಿ ಮಂದಿ ಮಾಡಿದ ಪಾತಕದ ಪರಿಣಾಮ ಮೊದಲು ಗೋಚರವಾಗಿದ್ದು ಕೇರಳದ ಕಾಸರಗೋಡಿನ ಪಡ್ರೆ ಎಂಬಲ್ಲಿ, ನಂತರ ಕರ್ನಾಟಕದ ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಹೆಲಿಕಾಪ್ಟರ್‌ನಿಂದ 'ಎಂಡೋ' ಸಿಂಪಡಿಸಿದ್ದರಿಂದ ನೆಲ-ಜಲ ವಿಷವಾಗಿ ನಾನಾ ನಮೂನೆಯ ರೋಗಗಳು ಹಬ್ಬಿದ್ದು ಕಂಡುಬಂತು! ಈಗ ಭಟ್ಕಳದಲ್ಲಿ ಎಂಡೋ ಹಾವಳಿ ಗೋಚರಿಸಿದೆ. ಗೇರು ಮರ ನೆಟ್ಟು, ಅದಕ್ಕೆ ಬರುವ ಕ್ರಿಮಿಗಳನ್ನು ಕೊಂದು ಹಣ ಮಾಡಲು ಸ್ಕೆಚ್ ಹಾಕಿದ್ದ ಸರ್ಕಾರಿ ಶೂರರಿಗೆ 'ಎಂಡೋ'ದಿಂದ ಪರಿಸರ-ಜೀವ ಜಾಲದ ಮೇಲಾಗುವ ಘೋರ ಪರಿಣಾಮ ಗಣನೆಗೇ ಬಂದಿರಲಿಲ್ಲ, 'ಎಂಡೋ'ದ ಸಾಧಕಬಾಧಕ ಪರಿಗಣಿಸುವ ಮನುಷ್ಯತ್ವವೂ ನಿಗಮದ ಅಧ್ಯಕ್ಷ-ಅಧಿಕಾರಿಗಳಿಗಿರಲಿಲ್ಲ,

'ಎಂಡೋ' ಸಿಂಪಡಣೆಯಿಂದ ದಕ್ಷಿಣ ಕನ್ನಡ ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳ ಕೆಲವು ಹಳ್ಳಿಗಳಲ್ಲಿ ಸೃಷ್ಟಿಯಾಗಿರುವ ರೋಗಿಗಳ ಲೋಕವನ್ನು ಬಹುವಾಗಿ ಹೋಲುವ ನರಕ ಉತ್ತರ ಕನ್ನಡದ ಭಟ್ಕಳದ ಹಲವು ಮಜಿರೆಗಳಲ್ಲಿ ನೆಲೆ ನಿಂತಿದೆ! ಭಟ್ಕಳದ ಬೆಳ್ಳಿ ಸರಹದ್ದಿನಲ್ಲಿರುವ ಮುಂಡಳ್ಳಿ, ಹಡೀನ್, ಬೆಳ್ಳಿ, ಗೊರಟೆ, ಮೂಡುಭಟ್ಕಳ, ನೂರುಫ್, ಅಬ್ಬಿಹಿತ್ಲು, ಮೊಗೇರರ ಕೇರಿ, ಜನತಾ ಕಾಲೋನಿ, ಹೊಳೆಗದ್ದೆ, ಹೊನ್ನೆಮಡಿ... ಹೀಗೆ ಎಂಟರಿಂದ ಹತ್ತು ಕಿ.ಮೀ. ಸುತ್ತಳತೆಯ ಏರಿಯಾದಲ್ಲಿ ನಾನಾ ನಮೂನೆಯ ಅಂಗವೈಕಲ್ಯತೆ, ಬುದ್ಧಿ ಮಾಂದ್ಯತೆಯ ರೋಗಿಗಳೇ ತುಂಬಿಹೋಗಿದ್ದಾರೆ! ಇದು ಪಕ್ಕಾ 'ಎಂಡೋ'ದ ಅಡ್ಡ ಪರಿಣಾಮ. ಆದರೆ ಆಳುವ ಖೂಳರಿಗೆ-ಅವರನ್ನು ಅಡ್ಡದಾರಿಗೆಳೆವ ಅಧಿಕಾರಶಾಹಿಗೆ ಮಾತ್ರ ಇದು 'ಕಾರಣ' ಇಲ್ಲದ ರೋಗದ ಲೋಕ!!



ಕೆ.ಡಿ. ಸಾ...

ಭಟ್ಕಳದ ಎಂಡೋ ಪೀಡಿತ ಪ್ರದೇಶದ ಯಾತನೆ ನೂರು-ನೂರು ತರಹ. ಇಲ್ಲಿ ಬುದ್ಧಿಮಾಂದ್ಯರಿದ್ದಾರೆ, ನರದೌರ್ಬಲ್ಯದವರಿದ್ದಾರೆ, ಖಿನ್ನತೆಯವರಿದ್ದಾರೆ, ಕಿವುಡರಿದ್ದಾರೆ, ಕುರುಡರಿದ್ದಾರೆ, ಹೆಳವರಿದ್ದಾರೆ; ಹುಟ್ಟುತ್ತಲೇ ರೋಗದೊಂದಿಗೆ ಬಂದವರು, ಹುಟ್ಟಿದ ಬಳಿಕ ಕಾಯಿಲೆ ಅಂಟಿಸಿಕೊಂಡವರು ಇಲ್ಲಿದ್ದಾರೆ. 60 ಕ್ಕಿಂತ ಹೆಚ್ಚು ಜನ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ 10 ಮಂದಿ ಬುದ್ಧಿಮಾಂದ್ಯರಿದ್ದಾರೆ. 6 ಮಂದಿಗೆ ಖಿನ್ನತೆ ಕಾಡುತ್ತಿದೆ. 20 ಜನರು ಮೂಕರು. ಐದು ಮಂದಿಗೆ ಕಣ್ಣೇ ಕಾಣಿಸದು. ಮೂವರಿಗೆ ನರ ರೋಗ. 18 ಮಂದಿಗೆ ಇನ್ನಿತರ ತೊಂದರೆ ಸತಾಯಿಸುತ್ತಿದೆ. ಈ ನತದೃಷ್ಟರ ಗೋಳು ಹೇಳತೀರದು.

ಇವರ ಕುಟುಂಬದ ಕಣ್ಣೀರ ಕತೆಯಂತೂ ಎಂಥ ಕಲ್ಲು ಹೃದಯವನ್ನೂ ಕರಗಿಸುವಂತಿದೆ.

ಅಬ್ಬಿ ಹಿತ್ಲಿನ ಕುಪ್ಪಯ್ಯ-ಕಲ್ಯಾಣಿ ದಂಪತಿಗಳ 13 ರ ಹರೆಯ ಚೇತನನಿಗೆ ಚೈತನ್ಯವೇ ಇಲ್ಲ! ಕೈ-ಕಾಲಿಗೆ ಕಸುವಿಲ್ಲ; ಕುಬ್ಜ ದೇಹ. ಮಾತಿಲ್ಲ ಕತೆಯಿಲ್ಲ, ಬರೀ ವ್ಯಥೆಯಷ್ಟೇ!! ಈ ಕೂಲಿಕಾರ ದಂಪತಿಗಳಿಗೆ ತುತ್ತಿನ ಚೀಲ ತುಂಬಿಕೊಳ್ಳಲು ಕೆಲಸಕ್ಕೆ ಹೋಗುವಂತೆಯೂ ಇಲ್ಲ. ಚೇತನನ ಆರೈಕೆ ಪಾಳಿಯಲ್ಲಿ ತಾಯ್ತಂದೆ ಮಾಡುತ್ತಿದ್ದಾರೆ. ಹದಿನೈದು ವರ್ಷ ಮಮತಾ ನಾಯ್ಕಳ ಕತೆಯೂ ಇದಕ್ಕಿಂತ ಭಿನ್ನವಾಗೇನಿಲ್ಲ, ಇವೆರಡು ಸ್ಯಾಂಪಲ್ ಅಷ್ಟೇ. ಇಂಥ ನೂರಾರು ಉದಾಹರಣೆಯೊಂದಿಗೆ 'ಎಂಡೋ' ಹಿಂಸಾಚಾರ ವಿವರಿಸಬಹುದು. ಇದಕ್ಕಿಂತಲೂ ದೊಡ್ಡ ದುರಂತವೆಂದರೆ 'ಎಂಡೋ' ಸಂತ್ರಸ್ತರು ಈವರೆಗೆ ಆಳುವ ಮಂದಿಗೆ ಗೋಚರಿಸದಿರುವುದು!!

ಸರ್ಕಾರಿ ಮಂದಿಯ ಎಂಡೋಸಲ್ಫಾನ್ ಅಸ್ತ್ರದ ದಾಳಿಯಿಂದ ಅಂಗಾಂಗ ಕಳೆದುಕೊಂಡವರು, ಮಾತು, ಕಿವಿ ಕಳೆಕೊಂಡವರೆಲ್ಲ ಆರ್ಥಿಕ ಮತ್ತು ಸಾಮಾಜಿಕವಾಗಿ ತೀರ ಹಿಂದುಳಿದಿರುವ ದೀವರು (ಈಡಿಗ), ಮೊಗೇರ (ಮೀನುಗಾರ) ಸಮುದಾಯದವರು. ಈ ಧ್ವನಿಯಿಲ್ಲದ ಜನರ 'ಎಂಡೋ' ಪಾಡು ಸ್ಥಳೀಯ ಶಾಸಕ, ಮಂತ್ರಿ, ಸಂಸದರಾದಿಯಾಗಿ ಯಾರೂ ಕಣ್ಣೆತ್ತಿಯೂ ನೋಡಿಲ್ಲ, ಒಂದು ರೌಂಡು, ಎಂಡೋ ಬಾಧಿತ ಪ್ರದೇಶದಲ್ಲಿ ಹಾಕಿದರೆ ದಾರುಣ ಕತೆ ಕಣ್ಣಿಗೆ ಕಟ್ಟುತ್ತದೆ. ಸರ್ಕಾರದ ಆರೋಗ್ಯ, ಸಮಾಜ ಕಲ್ಯಾಣ, ಅರಣ್ಯ, ಅಂಗವಿಕಲ ಕಲ್ಯಾಣ ಇಲಾಖೆಯ ಅಧಿಕಾರಿಗಳು ತಂತಮ್ಮ ಮೂಗಿನ ನೇರಕ್ಕೆ 'ಬೆಳ್ಳಿ' ಪ್ರದೇಶದ ಅಂಗ ಊನತೆಯನ್ನು ವ್ಯಾಖ್ಯಾನಿಸಿಕೊಂಡಿದ್ದಾರೆ. ಆರೋಗ್ಯ ಇಲಾಖೆಯ 'ತಜ್ಞ'ರು ಅಂಗವೈಕಲ್ಯಕ್ಕೆ ತರತರದ ಕಾರಣ ನೀಡಿದ್ದಾರೆ. ಕಾಲಿನ ತೊಂದರೆಯವರಿಗೆ 'ಪೋಲಿಯೋ' ಎಂದು ನಾಮಕರಣ ಮಾಡಿದರೆ, ಉಳಿದವರಿಗೆ 'ವಿಕಲಚೇತನ' ಎಂದು ಘೋಷಿಸಿದ್ದಾರೆ. ಹಾಗಂತ ಒಂದೇ ಏರಿಯಾದಲ್ಲಿ-ಕಡಿಮೆ ಅಂತರದ ಅವಧಿಯಲ್ಲಿ ಇಷ್ಟೊಂದು ಅಂಗವಿಕಲರು-ಬುದ್ಧಿಮಾಂದ್ಯರು ಹೇಗೆ ಸೃಷ್ಟಿಯಾದರೆಂಬ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿಲ್ಲ, ಅದರಲ್ಲೂ 'ಎಂಡೋ' ಏರಿಯಾ ಇದೆಂದು ಗೊತ್ತಿದ್ದೂ 'ಎಂಡೋ' ಎಡವಟ್ಟು ತಿಳಿದೂ ಸಂಬಂಧಿಸಿದವರು ಉದಾಸೀನತೆ-ಕೋಣಗೇಡಿತನದಲ್ಲಿರುವುದು ಅಕ್ಷಮ್ಯವೇ ಸರಿ!

ಹಿಂಡು-ಹಿಂಡು ಜನ ಚಿತ್ರ-ವಿಚಿತ್ರ ವಾಸಿಯಾಗದ ಕಾಯಿಲೆಯಿಂದ ನರಳುತ್ತಿರುವಾಗ, ಆ ರೋಗಿಗಳನ್ನು ಪಾಲಿಸಲು-ಪೋಷಿಸಲು-ಬಚಾವಾಗಿಸಲು ಹೆತ್ತವರು ಒದ್ದಾಡುತ್ತಿರುವಾಗ ಇಂಥದೊಂದು ದುಃಸ್ಥಿತಿ ಹೇಗೆ ಬಂತೆಂದು ಸಮಗ್ರ ಸಮೀಕ್ಷೆ ಅದೆಂದೋ ಎಂಪಿ-ಎಮ್ಮೆ... -ಮಂತ್ರಿ-ಅಧಿಕಾರಿಗಳು ಮಾಡಿಸಬೇಕಿತ್ತು ಆದರೆ ಯಾರಿ... ಭಟ್ಕಳದ ಎಂಡೋ ಪೀಡಿತರ ಬಗ್ಗೆ ಕಾಳಜಿ-ಕರುಣೆ ಇ... ವಿಚಿತ್ರವೆಂದರೆ ಎನ್‌ಜಿಓಗಳಿಗೆ, ಪರಿಸರವಾದಿಗಳ... ಪರಿಸರವನ್ನೇ ಬಂಡವಾಳ ಮಾಡಿಕೊಂಡು ಪ್ರಶಸ್ತಿ ಹೊ... ಸ್ವರ್ಣವಲ್ಲಿ ಸಂಸ್ಥಾನದ ಗಂಗಾಧರೇಂದ್ರ ಸ್ವಾಮಿಯಂಥವ... ಭಟ್ಕಳದ ಎಂಡೋ ಅವಾಂತರ ಕಾಣಿಸದಿರುವು... ವಿಪರ್ಯಾಸ! ಕೈಗಾ ಅಣುಸ್ಥಾವರದ ವಿಕಿರಣದ ... ಅಗತ್ಯಕ್ಕಿಂತ ಹೆಚ್ಚು ಬೊಬ್ಬೆ ಬೀಳುವ ಈ ಜಿಲ್ಲೆಯ... ಎಂಡೋ ಸಂತ್ರಸ್ತರ ಬಗ್ಗೆ ಮಾತಾಡುವವರೇ ಇಲ್ಲ! ಇ... ಕಾರಣ ಇಷ್ಟೇ. ಎಂಡೋ ಪೀಡಿತರು ಶೂದ್ರರು; ಕೈ... ವಿಕಿರಣ ಏರಿಯಾದಲ್ಲಿ ಬಾಯಿ ಲಾಬಿಯ ಬ್ರಾಹ್ಮ... ರಿಕಾಣೆಗಳಿವೆ.


ಬೇಸರದ ಸಂಗತಿಯೆಂದರೆ, ಭಟ್ಕಳದ ಶೂದ್ರ ನಾ... ಯಕರಿಗೂ ತಮ್ಮವರ ಸಂಕಷ್ಟಕ್ಕೆ ಸ್ಪಂದಿಸಬೇಕೆಂ... ಪರಿಜ್ಞಾನವಿಲ್ಲ! ಭಟ್ಕಳದ ಶಾಸಕ ಜೆ.ಡಿ. ನಾಯ್ಕ ಸ್ವ... ಎಂಡೋ ಪೀಡಿತ ಬೆಳ್ಳಿ ಭಾಗದವರು. ವಿಕ್ಷಿಪ್ತ ಮನಸ್ಥಿತಿ... ಜೆಡಿ ಚಿಲ್ಲರೆ ಪ್ರಕರಣದಲ್ಲಿ ಮೂಗು ತೂರಿಸುವುದರ... ಬಿಜಿಯಾಗಿರುತ್ತಾರೆ. ಹಾಗಾಗಿ ಆತನಿಗೆ ಎಂಡೋ ಎಫೆ... ಬಗ್ಗೆ ಯೋಚಿಸಲು ಪುರುಸೊತ್ತಿಲ್ಲ, ಈ ಜೆಡಿಗಿಂತ ಮೊದ... ಶಾಸಕನಾಗಿದ್ದ ಶಿವಾನಂದ ನಾಯ್ಕನೂ ಮತ್ತೂ... ಹಿಂದುಳಿದವರ ಸ್ವಯಂ ಘೋಷಿತ ನಾಯಕನೇ. ... 'ಕೋಜಾ' ಸರ್ಕಾರದಲ್ಲಿ ಮಂತ್ರಿಯೂ ಆಗಿದ್ದ ಈಗ ತೂ... ಸಾಬೂನು-ಮಾರ್ಜಕ ಕಂಪನಿಯ ಗೂಟದ ಕಾರಿನ ದೊ... ಆದರೆ ಅಧಿಕಾರವನ್ನು ಸ್ವಜೇಬೋದ್ಧಾರಕ್ಕೆ ... ಬಳಸಿಕೊಂಡಿದ್ದೇ ಜಾಸ್ತಿ. ಭರ್ಜರಿ ಬಂಗಲೆ ಕಟ್ಟಿಕೊಂ... ಹಾಯಾಗಿರುವ ಈ ಮಾಜಿ ಮೀನಿನ ಲಾರಿ ಕ್ಲೀ... ಮಾಮನಿಗೆ ಸ್ವಕ್ಷೇತ್ರದ ಹೆಳವರ-ಕುರುಡರ-ಕಿವು... ಉಸಾಬರಿ ಬೇಡವಾಗಿದೆ.

ಭಟ್ಕಳವನ್ನು 'ಕರ್ಮಕ್ಷೇತ್ರ' ಮಾಡಿಕೊಂಡು ಎಂಪಿಯ... ರುವ ಅಪಾಯಕಾರಿ ಚಡ್ಡಿ ಪುಂಡ ಅನಂತಕುಮಾ... ಹೆಗಡೆ ಯಾನೆ ಅನಂತ್ಮಾಣಿಗೆ ಓಟಿಗಷ್ಟೇ ಶೂದ್ರರು ಬೇ... ಸ್ವಜಾತಿ ಹೈಗರು ಮಾತ್ರ ಹಿತವಾಗಿರಬೇಕು. ಕೋ... ಕಿತಾಪತಿ ಮಾಡುವ ಕಸರತ್ತಿನ ಕಾಲು ಭಾಗ ಭಟ್ಕ... ಎಂಡೋಪೀಡಿತರತ್ತ ಅನಂತ್ಮಾಣಿ ಗಮನ ಹರಿಸಿದ... ಸಾಕಿತ್ತು, ಕೊಂಚ ಅನುಕೂಲ-ಆಧಾರ ಈ ಜನರಿಗೆ ಆ... ತ್ತಿತ್ತು. ಹಾಲಿ ಜಿಲ್ಲಾ ಮಂತ್ರಿ ಕಾಗೇರಿ ಎಂಬ ವಿಪ್ರೋತ್ತಮ... ಶಿರಸಿ ಸೀಮೆಯ ಹೈಗರು ಬಿಟ್ಟರೆ ಉಳಿದವರ್ಯಾ... ಮನುಷ್ಯರಂತೆಯೇ ಕಾಣಿಸದು. ಕಂತ್ರಿ ಕಾಗೇರಿ ಈ ನತದ... ಜಿಲ್ಲೆಯ ಪಾಲಿಗೆ ಇದ್ದೂಇಲ್ಲದಂತ ಮಂತ್ರಿ!! ಹೇತ್ಲಾ... ಜನಪ್ರತಿನಿಧಿಗಳ ದರ್ಬಾರಿನಲ್ಲಿ ಅಧಿಕಾರಿಗಳೂ ಅಂಗವಿ... ರಂತಾಡುತ್ತಿದ್ದಾರೆ. ಹೀಗಾಗಿ ಭಟ್ಕಳದ ಎಂಡೋಬಾಧಿ... ಚೀರಾಟ-ನರಳಾಟ ವಿಧಾನಸೌಧಕ್ಕೆ ಮುಟ್ಟುತ್ತಲೇ ಇ...

ಇನ್ನಾದರೂ ಸಂಬಂಧಿಸಿದವರು ಭಟ್ಕಳದ ಎಂಡೋ... ಸಂತ್ರಸ್ತರತ್ತ ಕಣ್ಣು ಹಾಯಿಸುವರಾ? ಅಸಹಾಯಕ ಶೂ... ಸಮೂಹ ರೊಚ್ಚಿಗೆದ್ದು ಬೀದಿಗಿಳಿವ ಮೊದಲು ಶಾಸ... ಸಂಸದ-ಮಂತ್ರಿಗಣ ಎಚ್ಚೆತ್ತುಕೊಂಡೀತಾ? ಏನೂ ಬೇ... ಪುತ್ತೂರು-ಬೆಳ್ತಂಗಡಿಯ ಎಂಡೋ ಪೀಡಿತರಿಗೆ ಸರ್ಕಾ... ಘೋಷಿಸಿರುವ ಪರಿಹಾರದ ಪ್ಯಾಕೇಜ್ ಕೊಟ್ಟರೂ ಸಾ... ನೊಂದವರಿಗೆ ಸ್ವಲ್ಪ ಸಮಾಧಾನ ಆಗುತ್ತದೆ. ಅನಂ... ಬೇಕಿದ್ದರೆ ಸಮಸ್ಯೆಗೆ ಕಾರಣ ಹುಡುಕಲಿ, ಸಮೀಕ್ಷೆ ಮಾಡಿಸ... ಮಂತ್ರಿ ಕಾಗೇರಿ, ಶಾಸಕ ಜೆ.ಡಿ. ನಾಯ್ಕ, ಸಂಸದ ಅನಂತ್ಮಾ... ಅಧಿಕಾರಿಗಳಿಗೆ ಅಂಕುಶ ಇಟ್ಟು ಎಂಡೋ ಪೀಡಿತ... ಪರಿಹಾರ ಕೊಡಿಸದಿದ್ದರೆ, ಸಾಂತ್ವನ ಹೇಳದಿದ್ದರೆ, ನೆರ... ಬಾರದಿದ್ದರೆ ಆ ರೋಗಿಗಳ ಕಣ್ಣೀರ ಶಾಪ ತಟ್ಟದೇ ಇರು...

• ನಹು...

ಆಶೀಸರ ಪ್ರಹಸನ



ಭಟ್ಕಳದ ಎಂಡೋಸಲ್ಫಾನ್ ಪೀಡಿತ ನತದೃಷ್ಟರಿಗೆ ಬೇಕಾಗಿರುವುದು ಪರಿಹಾರವೇ ಹೊರತು ಪ್ರಹಸನವಲ್ಲ, ಆದರೆ ಯಾರದೋ ಮನೆಗೆ ಬೆಂಕಿಬಿದ್ದಾಗ ಮೈಕಾಯಿಸಿಕೊಳ್ಳುತ್ತ ಮೊಸಳೆ ಕಣ್ಣೀರು ಸುರಿಸುವ ಕಲೆ ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಆಶೀಸರಗೆ ಕರತಲಾಮಲಕವಾಗಿದೆ. ಆತ ಮೊನ್ನೆ ಓಡೋಡಿ ಭಟ್ಕಳದ ಎಂಡೋಪೀಡಿತ ಪ್ರದೇಶಕ್ಕೆ ಹೋಗಿದ್ದಾನೆ. ಹೋಗುವಾಗ ಅಂಗವಿಕಲ ಕಲ್ಯಾಣಾಧಿಕಾರಿ, ಅರಣ್ಯಾಧಿಕಾರಿ, ತಹಶೀಲ್ದಾರ್, ತಾಲ್ಲೂಕ್ ವೈದ್ಯಾಧಿಕಾರಿ ಮುಂತಾದ ಹತ್ತಾರು ಸರ್ಕಾರಿ ಅಧಿಕಾರಿಗಳ ದಂಡು ಕಟ್ಟಿಕೊಂಡು ಹೋಗಿ ಶೋ ಮಾಡಿದ್ದಾನೆ. ವೈದ್ಯಕೀಯ ಶಿಬಿರ ಮಾಡಿಸಿ ಅಂಗ ಊನ, ಬುದ್ಧಿಮಾಂದ್ಯಕ್ಕೆ ಕಾರಣ ಕಂಡುಹಿಡಿಯುವುದಾಗಿ ಹೇಳಿದ್ದಾನೆ. ಮತ್ತೊಮ್ಮೆ ಬೆಳ್ಳಿ ಭಾಗದಲ್ಲಿ ಎಂಡೋ ದುಷ್ಪರಿಣಾಮದ ದಟ್ಟಛಾಯೆ ಇದೆ ಎಂದಿದ್ದಾನೆ. ಒಟ್ಟಿನಲ್ಲಿ ಈ ಪವರ್‌ಲೆಸ್ ನಾಟಕಕಾರನಲ್ಲಿ ಎಂಡೋ ಅನಾಹುತದ ಬಗ್ಗೆ ಸ್ಪಷ್ಟತೆಯಿಲ್ಲ, ಸರ್ಕಾರದ ಕಣ್ಣು ತೆರೆಸುವ ತಾಕತ್ತಿಲ್ಲ,


ಆಶೀಸರನ ಕಾರ್ಯಪಡೆ ಕರ್ಮಪಡೆಯೆಂದೇ ಜಿಲ್ಲೆಯಲ್ಲಿ ಜನಜನಿತ. ಯಾವ ಅರಣ್ಯ ಸಂಬಂಧಿ ಸಮಸ್ಯೆಯಾಗಲಿ, ಪರಿಸರ ಸಮಸ್ಯೆಯಾಗಲಿ ಈತನಿಂದ ಪರಿಹರಿಸಲಾಗಿಲ್ಲ, ಅರಣ್ಯ ಭೂಮಿ ಅತಿಕ್ರಮಿಸಿ ಭರ್ಜರಿ ತೋಟ ಮಾಡಿಕೊಂಡಿರುವ ಈ ಅರಣ್ಯಭಕ್ಷಕ ಅರಣ್ಯ ಕಾರ್ಯಪಡೆಯ ಅಧ್ಯಕ್ಷನಾಗಿರುವುದೇ ಒಂದು ತಮಾಷೆ! ಬರೀ ಸೆಮಿನಾರು-ಸಭೆ-ಅರಣ್ಯ ಪದ್ಯಗೋಷ್ಠಿಗಳಲ್ಲೇ ಕಾಲಹರಣ ಮಾಡುತ್ತಿರುವ ಈ ಸುದ್ದಿಶೂರನಿಗೆ ಕೊಟ್ಟಿರುವ ಹುದ್ದೆ-ಕಾರು-ಭತ್ಯೆಗಳೇ ಬೊಕ್ಕಸಕ್ಕೆ ದಂಡ!

ಈಗ ಎಂಡೋಪೀಡಿತರ ಬಗ್ಗೆ ನಾಟಕ ನಡೆಸಿದಂತೆಯೇ ಈ ಆಶೀಸರ ಕೆಲವು ತಿಂಗಳ ಹಿಂದೆ ಇದೇ ಭಟ್ಕಳದ 'ಮಾವಿನ ಕುರ್ವೆ' ಎಂಬ ಕಡಲತಡಿಯ ಊರಿಗೆ ತನ್ನ ಅಧಿಕಾರಿ ದಂಡಿನೊಂದಿಗೆ ಲಗ್ಗೆ ಇಟ್ಟಿದ್ದ. ಅಲ್ಲಿರುವ ಅಪಾರ ಸಂಖ್ಯೆಯ ಪಾರ್ಶ್ವವಾಯು (ಪ್ಯಾರಲೈಸಿಸ್) ಪೀಡಿತರ ಭೇಟಿಗೆಂದು ಈತ ಹೋಗಿದ್ದ. ಒಂದೇ ಭಾಗದಲ್ಲಿ ಹಲವು ಪಾರ್ಶ್ವವಾಯು ಪೀಡಿತರಿರುವುದು ವೈದ್ಯಕೀಯ ವಿಸ್ಮಯವಾಗಿತ್ತು, ಇದರ ಬಗ್ಗೆ ಪತ್ರಿಕೆಗಳಲ್ಲಿ ಸ್ಟೋರಿ ಬರುತ್ತಿದ್ದಂತೆಯೇ ಮಾವಿನ ಕುರ್ವೆಗೆ ಹೋಗಿದ್ದ ಆಶೀಸರ ಪರಿಹಾರ-ಆರೋಗ್ಯ ಸಮೀಕ್ಷೆಯ ಭೋಂಗು ಬಿಟ್ಟಿದ್ದ, ಆದರೆ ಈವರೆಗೆ ಆಶೀಸರನ ವೈದ್ಯಕೀಯ ತಪಾಸಣೆಯ ವರದಿಯೇ ಬಂದಿಲ್ಲ, ಪಾರ್ಶ್ವವಾಯು ಪೀಡಿತರಿಗೆ ನಯಾಪೈಸೆ ಈತನಿಂದ ಪ್ರಯೋಜನವಾಗಿಲ್ಲ...

ಬರೀ ಗುಲ್ಲು ನಿದ್ದೇಡು-ಜಾತಿಯ ಆಸಾಮಿ ಈ ಆಶೀಸರ. ಮುರ್ಡೇಶ್ವರ... ಸಮುದ್ರದ ನಡುವೆಯಿರುವ 'ನೇತ್ರಾಣಿ' ಎಂಬ ನಡುಗಡ್ಡೆ ಜೀವ ವೈವಿಧ್ಯತೆಯ... ತಾಣ. ಇಲ್ಲಿ ಅಪರೂಪದ ಪ್ರಾಣಿ-ಸಸ್ಯಸಂಕುಲವಿದೆ. ಸೀಬರ್ಡ್ ನೌಕಾನೆಲೆಯ... ಶೋಧರು ಇಲ್ಲಿ ಕವಾಯತು, ಸಮರಾಭ್ಯಾಸ, ಬಾಂಬ್ ಬ್ಲಾಸ್ಟ್ ಮಾಡುತ್ತಾರೆ... ಈ ಬಗ್ಗೆ ಮೀನುಗಾರರು-ಪರಿಸರ ಪ್ರಿಯರು ಆಕ್ಷೇಪವೆತ್ತಿದ್ದರು. ತಕ್ಷಣ... ಜಾಗೃತನಾದ ಪ್ರಚಾರಪ್ರಿಯ ಆಶೀಸರ ಮಾಣಿ ನೌಕಾ ನೆಲೆಯ ಕವಾಯತು... ನೇತ್ರಾಣಿ ಗುಡ್ಡದಲ್ಲಿ ನಿಷೇಧಿಸುತ್ತೇನೆಂದು ಬೊಬ್ಬೆ ಹಾಕಿದ್ದೇ ಹಾಕಿದ್ದು... ಆದರೆ ಈತನಿಂದೇನೂ ಮಾಡಲಾಗಲಿಲ್ಲ. ಬೆಂಗಳೂರಿನ ವಕೀಲರೊಬ್ಬರು... ನೇತ್ರಾಣಿಯ ರಕ್ಷಣೆ ಬಗ್ಗೆ ಹೈಕೋರ್ಟಿನಲ್ಲಿ ಲಿಟಿಗೇಷನ್ ಹಾಕಿದರು... ಅವರಿಗೆ ಸೈ ಸಿಕ್ಕಿತೇ ಹೊರತೂ ಆಶೀಸರ ಮಾಣಿಯ ಕರ್ಮ ಪಡೆಯಿಂದ... ಏನೂ ಕಿಸಿಯಲಾಗಲಿಲ್ಲ, ಈತನಿಗೆ ಸರ್ಕಾರದ ಮಟ್ಟದಲ್ಲಿ ಆಧ... ಸ್ಥಾನ-ಮಾನವೂ ಇಲ್ಲ!

ಆಶೀಸರನ ಇತಿಹಾಸ-ಭೂಗೋಳ ನೋಡಿದರೆ ಅಪ್ಪಿಕೋ ಚಳವಳಿ... ಕಾಲದಿಂದಲೂ ಆತ ಪ್ರಚಾರಪ್ರಿಯನೆಂಬುದು ಖಾತ್ರಿಯಾಗುತ್ತದೆ. ಎಂಪಿಗಿರಿ... ಮೇಲೆ ಕಣ್ಣಿಟ್ಟಿರುವ ಈತ ಸುದ್ದಿಯಾಗುವ ತೆವಲಿನಿಂದ ಭಟ್ಕಳದ ಎಂಡೋ... ಪೀಡಿತರನ್ನು ಬಂಡವಾಳ ಮಾಡಿಕೊಳ್ಳಲು ಹವಣಿಸುತ್ತಿದ್ದಾನಷ್ಟೇ. ಈತನಿಂದ... ಭಟ್ಕಳದ ಎಂಡೋ ಬಾಧಿತರಿಗೆ ನ್ಯಾಯ ಸಿಗುವುದು ಅನುಮಾನ!

ರಪ್ಪನಹಳ್ಳಿಯಲ್ಲಿ ಕರುಣಾಕರನ ಕರುಣಾಜನಕ ಸ್ಥಿತಿ



ಕರುಣಾಕರ ರೆಡ್ಡಿ

ರಪ್ಪನಹಳ್ಳಿಯ ರಾಜಕಾರಣ ಈಗ ರಂಗುಗಟ್ಟತೊಡ
ಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ಸಿನ
ಪ್ರಕಾಶರನ್ನು ಈ ಕ್ಷೇತ್ರದಲ್ಲಿ ಸೋಲಿಸಿದ್ದೇ ತನ್ನ
ಸಾಧನೆ ಎಂಬ ಗುಂಗಿನಿಂದ ಬಿಜೆಪಿಯ ಕರುಣಾಕರ
ಈಗಲೂ ಹೊರಬಂದಿಲ್ಲ. ಆದರೆ ವಾಸ್ತವವಾಗಿ
ಪ್ರಕಾಶ್ ಅವರ ಸೋಲಿಗೆ ರೆಡ್ಡಿ ಖಜಾನೆಯಲ್ಲಿದ್ದ
ಡ್ಡೇ ಪ್ರಧಾನ ಕಾರಣವಾಗಿತ್ತೇ ಹೊರತು ಅದರಲ್ಲಿ
ಸೈದ್ಧಾಂತಿಕ ಸಂಘರ್ಷವಿರಲಿಲ್ಲ.

ಣಾಕರ ರೆಡ್ಡಿ ಮಂತ್ರಿ ಆದನಂತರ ಆತ ತನ್ನನ್ನು
ಹರಪ್ಪನಹಳ್ಳಿಯ ಜನರ ಬವಣೆಗಳನ್ನು ನೀಗಿಸ
ಂಬ ನಿರೀಕ್ಷೆ ಹುಸಿಯಾಗಿದೆ. ಶತಮಾನಗಳಿಂದಲೂ
ಹೊಡೆತದಿಂದ ತತ್ತರಿಸಿರುವ ಹರಪ್ಪನಹಳ್ಳಿಯಲ್ಲಿ
ರಿಯೂ ಬರ ತಾಂಡವವಾಡುತ್ತಿದೆ. ಆದರೆ ಈ


ಕರುಣಾಕರ ಮಾತ್ರ "ಹರಪ್ಪನಹಳ್ಳಿಯಲ್ಲಿ ಬರವೆಂಬುದೇನಿಲ್ಲ" ಎನ್ನುವಷ್ಟು ನಿರ್ಲಕ್ಷ್ಯ ವಹಿಸಿದ್ದಾನೆ. ಅಷ್ಟೇ ಅಲ್ಲ, ಈಗ ಈ ಪ್ರದೇಶದಲ್ಲಿ ಕುಡಿಯುವ ನೀರಿಗೂ ಹಾಹಾಕಾರವೆದ್ದಿದ್ದರೂ ಕರುಣಾಕರ ಜನರತ್ತ ತಿರುಗಿಯೂ ನೋಡದೆ ತಾನು ಮಾತ್ರ ಬಿಸ್ಲೇರಿ ನೀರು ಕುಡಿಯುತ್ತಾ ಹಾಯಾಗಿದ್ದಾನೆ.

ಇತರೆ ಜಿಲ್ಲೆಗಳಂತೆ ಮೊನ್ನೆ ಹರಪ್ಪನಹಳ್ಳಿಯಲ್ಲಿಯಲ್ಲೂ ಬರ ಸಮೀಕ್ಷೆ ಎಂಬ ರಾಜಕಾರಣ ಮುಗಿಲು ಮುಟ್ಟಿದೆ. ಕಾಂಗ್ರೆಸ್ ಪಾರ್ಟಿಯ ಲೀಡರುಗಳು ರಾಜಧಾನಿ ಬೆಂಗಳೂರಿನಿಂದ ಹರಪ್ಪನಹಳ್ಳಿಗೆ ಬಂದು ಸರ್ಕಾರ ಮತ್ತು ಜಿಲ್ಲಾ ಮಂತ್ರಿಯ ಬೇಜವಾಬ್ದಾರಿತನಕ್ಕೆ ಮಂಗಳಾರತಿ ಎತ್ತಿ ಹೋಗಿದ್ದಾರೆ. ಆದರೂ ಕರುಣಾಕರ ಜನರ ಪರಿಸ್ಥಿತಿಯ ಬಗ್ಗೆ ಕರುಣೆ ತೋರುತ್ತಿಲ್ಲ.

ಬಳ್ಳಾರಿಯ ಈ ರೆಡ್ಡಿ ಗ್ಯಾಂಗು ಅಧಿಕಾರಕ್ಕೆ ಬಂದ ದಿನದಿಂದ ಜನರಿಗೆ ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಗ್ಯಾಂಗು 'ಆಪರೇಶನ್ ಕಮಲ'ದಂತಹ ಅನೈತಿಕ ರಾಜಕಾರಣ, ರೆಸಾರ್ಟ್ ರಾಜಕಾರಣ ಮತ್ತು ಗುಂಪುಗಾರಿಕೆಯಲ್ಲೇ ಹೆಚ್ಚು ಕಾಲ ಕಳೆಯಿತು. ಗಣಿ ಕಳ್ಳತನದ ಮೂಲಕ ಸಂಗ್ರಹವಾದ ಅಕ್ರಮ ಹಣದ ಮೇಲೆ ದುರಹಂಕಾರ ಮೆರೆದ ಈ ಗ್ಯಾಂಗಿಗೆ ಈಗ ತಕ್ಕ ಶಾಸ್ತಿ ಸಿಗುತ್ತಿದೆ. ಅತ್ತ ಈ ಗ್ಯಾಂಗಿನ ಲೀಡರ್ ಜನಾರ್ದನ ರೆಡ್ಡಿ ಇವತ್ತಿಗೂ ಜೈಲು ಕಂಬಿಗಳನ್ನು ಎಣಿಸುತ್ತಿದ್ದರೆ ಇತ್ತ ತಾನೂ ಯಾವ ದಿನ ಜೈಲುಪಾಲಾಗುತ್ತೇನೋ ಎಂಬ ಆತಂಕ ಜನಾರ್ದನನ ಅಣ್ಣ ಕರುಣಾಕರನನ್ನು ಕಾಡುತ್ತಿದೆ.

ಈ ಮಧ್ಯೆಯೇ ಬಿಜೆಪಿಯಲ್ಲಿನ ಆಂತರಿಕ ಜಗ್ಗಾಟಗಳು ಕರುಣಾಕರನ ನಿದ್ದೆಗೆಡಿಸಿವೆ. ದಾವಣಗೆರೆ ಸಂಸದ ಸಿದ್ದೇಶ್ "ಬರುವ ಚುನಾವಣೆಯಲ್ಲಿ ನಾನು ದೆಹಲಿಗೆ ಹೋಗುವ ಬದಲು ವಿಧಾನಸಭೆಗೆ ಹೋಗುವೆ" ಎಂಬ ಆಶೆ ವ್ಯಕ್ತಪಡಿಸಿರುವುದು ಜಿಲ್ಲೆಯ ಬಿಜೆಪಿಯಲ್ಲಿ ಸಂಚಲನ ಮೂಡಿಸಿದ್ದರೆ ರೆಡ್ಡಿ ಗ್ಯಾಂಗಿನ ರಾಜಕೀಯ ಅಸ್ತಿತ್ವಕ್ಕೇ ಕೊಡಲಿ ಏಟು ಹಾಕುವ ಸಿದ್ಧತೆಯಂತೆ ಭಾಸವಾಗುತ್ತಿದೆ.

ಅದನ್ನು ನಿರೀಕ್ಷಿಸಿಯೇ ಕರುಣಾಕರ ಮೊನ್ನೆ "ಹರಪ್ಪನಹಳ್ಳಿಯಿಂದ ಮುಂದೆಯೂ ನಾನೇ ಬಿಜೆಪಿ ಪಕ್ಷದ ಅಭ್ಯರ್ಥಿ" ಎಂದು ಘೋಷಿಸಿದ್ದಾನೆ. ಅಷ್ಟೇ ಅಲ್ಲ, ಮುಂದಿನ ಚುನಾವಣೆಗೆ ಇನ್ನೂ ಒಂದು ವರ್ಷ ಇದ್ದರೂ ಈಗಾಗಲೇ ಚುನಾವಣೆಯ ಸಿದ್ಧತೆಗಳನ್ನು ಸದ್ದಿಲ್ಲದೆ ಶುರುವಿಟ್ಟು ಕೊಂಡಿದ್ದಾನೆ. ಕಳೆದ ಬಾರಿ 25 ಸಾವಿರ ಮತಗಳ ಅಂತರದಿಂದ ಪ್ರಕಾಶರ ವಿರುದ್ಧ ಜಯಸಾಧಿಸಿದ್ದ ಕರುಣಾಕರ ಈ ಬಾರಿಯೂ ಅಷ್ಟೇ ಅಂತರದಿಂದ ಗೆಲ್ಲುವ ಆಶೆ ಇಟ್ಟುಕೊಂಡಿರುವಂತಿದೆ. ಆದರೆ ಕರುಣಾಕರ ರೆಡ್ಡಿಯ ವಿರುದ್ಧ ಆತನ ಪಕ್ಷದವರೇ ಗುಪ್ತವಾಗಿ ವಿರೋಧದ ಅಲೆ ಎಬ್ಬಿಸಿದ್ದಾರೆ. ಆತ ಈ ಪ್ರದೇಶಕ್ಕೆ ವಲಸಿಗನಾಗಿರುವುದರಿಂದಲೇ ಇಲ್ಲಿನ ಜನರ ಬಗ್ಗೆ ಆತನಿಗೆ ಅಸಡ್ಡೆ ಎಂಬ ಪುಕಾರನ್ನು ಹಬ್ಬಿಸುತ್ತಿದ್ದಾರೆ.



ಕಾಂಗ್ರೆಸ್‌ನಲ್ಲೂ 'ಮೂಲ ನಿವಾಸಿ' ಮತ್ತು 'ವಲಸಿಗ' ಎಂಬ ಗುಂಪುಗಳು ಜನ್ಮ ಪಡೆದುಕೊಂಡು ಭರತನಾಟ್ಯ ಶುರುವಿಟ್ಟುಕೊಂಡಿವೆ. ಕಳೆದ ಬಾರಿ ಹಡಗಲಿ ಕ್ಷೇತ್ರದಲ್ಲಿ ಐದು ಸಾವಿರ ಮತಗಳಲ್ಲಿ ಸೋಲುಂಡ ಹರಪ್ಪನಹಳ್ಳಿಯ ಮಾಜಿ ಶಾಸಕ ಪಿ.ಟಿ.ಪರಮೇಶ್ವರ ನಾಯ್ಕ ಹರಪ್ಪನಹಳ್ಳಿ ರಾಜಕಾರಣದಲ್ಲೂ ತನ್ನದೊಂದಿರಲಿ ಎಂದು ಕೈಯಿಟ್ಟು ಸಮಸ್ಯೆಯಾಗಿದ್ದಾರೆ. ಆದರೆ ಈ ನಾಯ್ಕನೂ ವಲಸಿಗನೇ ಎಂಬ ಅಸಮಾಧಾನ ಕೇಳಿಬರುತ್ತಿದೆ. ಎಂ.ಪಿ.ಪ್ರಕಾಶರ ನಂತರ ಹರಪ್ಪನಹಳ್ಳಿಯಲ್ಲಿ ಯಾರು ಕಾಂಗ್ರೆಸ್ ಪಕ್ಷದ ಪ್ರತಿನಿಧಿ ಎಂಬ ಪ್ರಶ್ನೆಗೆ ಕಾಂಗ್ರೆಸಿಗರಲ್ಲೇ ನಿಖರವಾದ ಉತ್ತರವಿಲ್ಲ. ಆದರೂ ಪ್ರಕಾಶರ ಮಗ ರವೀಂದ್ರ "ನಾನಿದ್ದೇನೆ" ಎನ್ನುತ್ತಿದ್ದಾರೆ. ಹಡಗಲಿ ಮೀಸಲಾತಿ ಕ್ಷೇತ್ರವಾದ ನಂತರವೇ ಪ್ರಕಾಶರು ತಮ್ಮ ರಾಜಕೀಯ ಅಸ್ತಿತ್ವವನ್ನು ಹರಪ್ಪನಹಳ್ಳಿಯಲ್ಲಿ ಕಂಡುಕೊಳ್ಳಲು ಬಂದು ಚುನಾವಣೆಯಲ್ಲಿ ಸೋತಿದ್ದರು. ಈಗ ಅವರ ಪುತ್ರ ರವೀಂದ್ರ ಈ ಕ್ಷೇತ್ರದಲ್ಲೇ ತನ್ನ ರಾಜಕೀಯ ಅರಂಗೇಟ್ರಮ್ ಮಾಡಲು ಕಾಂಗ್ರೆಸ್ ಪಕ್ಷದ ಟಿಕೆಟಿಗಾಗಿ ಪ್ರಯತ್ನ ನಡೆಸಿದ್ದಾರೆ. ಪಿ.ಟಿ.ಪರಮೇಶ್ವರ ನಾಯ್ಕನ ವಿರೋಧಿ ಗುಂಪು ರವೀಂದ್ರರ ಸುತ್ತ ಕವಿದಿದೆ.



ಹರಪ್ಪನಹಳ್ಳಿಯಲ್ಲಿ ಪಂಚಮಸಾಲಿ ಲಿಂಗಾಯತರ ಮತಗಳೇ ಹೆಚ್ಚೂ ಕಮ್ಮಿ 50 ಸಾವಿರ ಇವೆ. ಬರುವ ಚುನಾವಣೆಯಲ್ಲಿ ಇಲ್ಲಿ ಬರೀ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧಿಸುವುದಿಲ್ಲ, ಜೊತೆಗೆ ಜೆ.ಡಿಎಸ್, ಸಿ.ಪಿ.ಐ., ಸಿ.ಪಿ.ಐ.ಎಂ, ರೈತ ಸಂಘ, ಬಿ.ಜೆ.ಪಿ. ತೊರೆದು ಈಗ ಬಿ.ಎಸ್.ಆರ್. ಪಾರ್ಟಿ ಕಟ್ಟಿರುವ ಶ್ರೀರಾಮುಲು ಕೂಡ ತಮ್ಮ ಅಭ್ಯರ್ಥಿ ಹಾಕುವ ಸಾಧ್ಯತೆಗಳಿವೆ. ಇಂತಹ ಒಂದು ರಾಜಕೀಯ ಜಾತ್ರೆಯಲ್ಲಿ ಪಂಚಮಸಾಲಿ ಮತಗಳು ನಿರ್ಣಾಯಕ ಪಾತ್ರವಹಿಸಲಿವೆ. ಅದೇನೇ ಇರಲಿ, ಹರಪ್ಪನಹಳ್ಳಿಯಲ್ಲಿ ಈ ಬಾರಿ ದುಡ್ಡಿನ ಹೊಳೆ ಹರಿಯುವುದಂತೂ ಗ್ಯಾರಂಟಿ.

ಹರಪ್ಪನಹಳ್ಳಿಯಿಂದ ಬಿಜೆಪಿಯ ಪ್ರತಿನಿಧಿಯಾಗಿ ಕರುಣಾಕರ ರೆಡ್ಡಿ ಗೆದ್ದಿದ್ದರೂ ಈ ಕ್ಷೇತ್ರದಲ್ಲಿ ಈಗ ಕಾಂಗ್ರೆಸಿನ ಆಡಳಿತವೇ ವ್ಯಾಪಿಸಿದೆ. ಇಲ್ಲಿನ 28 ಗ್ರಾಮ ಪಂಚಾಯತಿಗಳಲ್ಲಿ 13 ಗ್ರಾಮ ಪಂಚಾಯತಿಯಲ್ಲಿ ಕಾಂಗ್ರೆಸ್ ಗೆದ್ದಿದೆ. ಜೊತೆಗೆ ಎರಡು ಜಿಲ್ಲಾ ಪಂಚಾಯತಿ ಹಾಗು 16 ತಾಲ್ಲೂಕು ಪಂಚಾಯತಿಗಳಲ್ಲಿ ಅಧಿಕಾರ ಹಿಡಿದಿದೆ. ಎಂಟು ಕಡೆ ಕೃಷಿ ಮಾರುಕಟ್ಟೆಯ ಮೇಲೆ ಕಾಂಗ್ರೆಸ್ ಹಿಡಿತ ಸಾಧಿಸಿದೆ. ಪಿ.ಎಲ್.ಡಿ. ಬ್ಯಾಂಕು ಮತ್ತು 18 ಸಹಕಾರ ಸಂಘಗಳಲ್ಲೂ ಕಾಂಗ್ರೆಸ ಕೈ ಮೇಲಾಗಿದೆ.

ಹೀಗೆ ಚೆಡ್ಡಿ ವೀರ, ಗಣಿ ಕಳ್ಳ ಕರುಣಾಕರ ರೆಡ್ಡಿಯ ಬುಡವನ್ನೇ ಅಲುಗಾಡಿಸುತ್ತಿರುವ ಕಾಂಗ್ರೆಸ್ ಬರುವ ಚುನಾವಣೆಯಲ್ಲಿ ಸಮರ್ಥ ಅಭ್ಯರ್ಥಿಯನ್ನು ನಿಲ್ಲಿಸಿದರೆ ಕರುಣಾಕರನ ಪರಿಸ್ಥಿತಿ ಕರುಣಾಜನಕವಾಗುವುದು ಗ್ಯಾರಂಟಿ.

• ಟಿ.ಎಸ್.ಷಣ್ಮುಖಿ

ರದ ಬೇಗೆ...
ತಳ್ಳಕೆರೆ ರೈತರ ಆಕ್ರೋಶ

ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಪುಢಾರಿಗಳ ನಾಟಕ
ರುವಾಗಲೇ ಚಳ್ಳಕೆರೆಯಲ್ಲಿ ರೈತರ ಆಕ್ರೋಶ ಸ್ಫೋಟಗೊಂಡಿದೆ.
ಮೊದಲೇ ಸದಾ ನೀರಿನ ಅಭಾವದಿಂದ ಬಳಲುತ್ತಿರುವ ಚಳ್ಳಕೆರೆ
ತ್ಯದ ಜನ ಈ ವರ್ಷದ ಬರಗಾಲದ ಬೇಗುದಿಗೆ ಸಿಲುಕಿ
ಸಿಹೋಗಿದ್ದಾರೆ. ಒಂದೆಡೆ ಕುಡಿಯುವ ನೀರಿನ ಅಭಾವ,
ರುಗಳಿಗೆ ನೀರು ಮೇವಿನ ಕೊರತೆಗಳು ನರಕಸದೃಶ ವಾತಾವರಣ
ಿದೆ.

ಇಂತಹ ಕಷ್ಟಕಾಲದಲ್ಲಿ ಸರ್ಕಾರದ ನಿಷ್ಕ್ರಿಯತೆ ಹಾಗೂ ಬ್ಯಾಂಕುಗಳ
-ಬಡ್ಡಿ ವಸೂಲಾತಿ ಎಂದಿನಂತೆಯೇ ಮುಂದುವರೆಯುತ್ತಿದ್ದಾಗ
ಟ್ಟಿಗೆದ್ದ ರೈತರು ಬೃಹತ್ ಪ್ರತಿಭಟನೆ ನಡೆಸಿದ್ದಾರೆ.

ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಗಳ ನೇತೃತ್ವದಲ್ಲಿ ಸಾವಿರಾರು
ು ಮೊನ್ನೆ ಏಪ್ರಿಲ್ 12 ರಂದು ತಾಲ್ಲೂಕು ಆಫೀಸ್‌ನೆದುರು
ಟಿಸಿದ್ದಾರೆ.

ರಾಜ್ಯ ರೈತ ಸಂಘದ
ಶ ಕಾರ್ಯದರ್ಶಿ
.ಆರ್.ಬಸವರಾಜಪ್ಪ,
ು ಮುಖಂಡ ಕಡಿದಾಳು
ಣ್ಣ, ತಾಲ್ಲೂಕು ರೈತ
ಖಂಡರಾದ ಎರಿಸ್ವಾಮಿ,
ೇಶಪ್ಪ, ಕೆ.ಪಿ. ಭೂತಯ್ಯ,
ಳ್ಳಿ ವೀರಣ್ಣ, ಸಿದ್ಧವೀರಪ್ಪ
ಯಪ್ಪ ದೇಸಾಯಿ
ತಾದವರು ರೈತರೊಂದಿಗೆ
ಲ್ಲೂಕು ಆಫೀಸ್‌ನೆದುರು
ು ನಿಂತಾಗ ತಹಶೀಲ್ದಾರ್
ಚಂದ್ರಪ್ಪ ಅನಿವಾರ್ಯವಾಗಿ
ದುರು ಬಂದು
ಾಯಿತು. ಜೊತೆಗೆ
ರೈತರ ಒತ್ತಾಯಕ್ಕೆ ಮಣಿದು ಕೆ.ಇ.ಬಿ., ತೋಟಗಾರಿಕೆ ಅಧಿಕಾರಿಗಳು, ಗ್ರಾಮೀಣ ಭೂ ಅಭಿವೃದ್ಧಿ ಬ್ಯಾಂಕ್, ಕೆನರಾ ಬ್ಯಾಂಕ್‌ನ ಅಧಿಕಾರಿಗಳೆಲ್ಲಾ ಬಂದು ನಿಂತರು.

ಈಗ ಬರಗಾಲವಿರುವ ಕಾರಣ ಸರ್ಕಾರ ತುರ್ತು ಪರಿಹಾರ ಕೈಗೊಳ್ಳುವಂತೆ ರೈತರು ಎಚ್ಚರಿಕೆ ನೀಡಿದ್ದಾರೆ. ಅಲ್ಲದೇ ಯಾವುದೇ ಬ್ಯಾಂಕ್‌ನವರಾಗಲಿ ಸಾಲ ಅಥವಾ ಬಡ್ಡಿ ವಸೂಲಿಗೆ ತಗಾದೆ ನೋಟಿಸ್‌ಗಳನ್ನು ರೈತರಿಗೆ ನೀಡದಂತೆಯೂ ಎಚ್ಚರಿಸಲಾಗಿದೆ.

ಇದೇ ಪ್ರತಿಭಟನಾ ಸಭೆಯಲ್ಲೇ ಬ್ಯಾಂಕ್ ನೋಟಿಸುಗಳಿಗೆ ತಹಶೀಲ್ದಾರ್ ಹಾಗೂ ಬ್ಯಾಂಕ್‌ನವರ ಎದುರಲ್ಲೇ ಬೆಂಕಿ ಹಚ್ಚಿ ಸುಟ್ಟು ಹಾಕಲಾಯಿತು.

ಸರ್ಕಾರವು ಈಗಲಾದರೂ ಬರ ಪರಿಹಾರದ ಬಗ್ಗೆ ಸರಿಯಾಗಿ ಸ್ಪಂದಿಸದೇ ಹೋದಲ್ಲಿ ರೈತಸಂಘದವರ ಈ ಪ್ರತಿಭಟನೆಯು ಇನ್ನಿತರ ಪ್ರದೇಶಗಳಿಗೂ ಹಬ್ಬುವುದು ಖಚಿತ.



ಪದ್ಯಗಳ ಅಸಲು ಬಡ್ಡಿ ಇತ್ಯಾದಿ

ಯಾಕೆ ಒಂದು ಪದ್ಯ ಇಷ್ಟ ಆಗುತ್ತದೆ ಅಂತ ಹೇಳುವುದು ಎಷ್ಟು ಕಷ್ಟ ಅಲ್ಲವಾ? ಕೆಲವು ಪದ್ಯಗಳು ಮನದ ಭಾವವನ್ನು ಪದಗಳಲ್ಲಿ ಹೇಳಿಬಿಟ್ಟರೆ ಅದರ ಒಳಗೆ ಹುದುಗಿದ ನಾಜೂಕು ಅರ್ಥ ಒಡೆದು ನುಚ್ಚು ನೂರಾಗುತ್ತದೇನೋ ಅನ್ನುವ ತಮ್ಮ ಅತಿ ಸೂಕ್ಷ್ಮತೆಯಿಂದ ಚೆಂದ ಅನ್ನಿಸುತ್ತವೆ. ಆಹಾ ಇದೇ ನೋಡಿ ಪದ್ಯದ "ಅಸಲು" ಗುಣ ಅಂದುಕೊಳ್ಳುವಷ್ಟರಲ್ಲಿ ಇನ್ನೊಂದು ಪದ್ಯ ಬಂದು ನೇರ ನೇರ ಗುಂಡು ಹಾರಿಸಿದ ಹಾಗೆ ಮಾತಾಡಿ ನಾವು ಕಂಡುಕೊಂಡ 'ಸತ್ಯ'ದ ಅಸಲು ಬಡ್ಡಿ ಎಲ್ಲವನ್ನೂ ಹುಡಿ ಮಾಡಿಬಿಡುತ್ತದೆ! ಇದು ಯಾವತ್ತೂ ಬಗೆ ಹರಿಯದ, ಅನೇಕಾನೇಕ ಜಗಳಗಳಿಗೆ ಗ್ರಾಸ ಒದಗಿಸಿದ ಹಳೆಯ ಜಿಜ್ಞಾಸೆ?

'ಪೆಂಗ್ವಿನ್ ಬುಕ್ ಆಫ್ ಸೋಶಿಯಲಿಸ್ಟ್ ವರ್ಸ್' ಪುಸ್ತಕ ಓದುತ್ತಾ ಕಾವ್ಯವೆಂಬ ಸೋಜಿಗದ ಬಗ್ಗೆ ಹೀಗೇ ಯೋಚಿಸುತ್ತಿದ್ದೇನೆ. ಎಷ್ಟೊಂದು ಚೆಂದದ ಪದ್ಯಗಳು, ಎಷ್ಟೊಂದು ಧೀಮಂತ ಬದುಕುಗಳು ಅನಿವಾರ್ಯವಾಗಿ ಭಾಷೆಯ ಕಾರಣದಿಂದಲೋ ಅಥವಾ ನಾವೇ ಕೈಯ್ಯಾರ ತೊಟ್ಟುಕೊಂಡ ಕಣ್ಣುಪಟ್ಟಿಯ ಕಾರಣದಿಂದಲೋ ನಮ್ಮನ್ನು ತಲುಪದೆಯೇ ಉಳಿದುಬಿಡುತ್ತವೆ. ಉದಾಹರಣೆಗೆ ಸುಪ್ರಸಿದ್ಧ ಟರ್ಕಿಯ ಕವಿ ನಜೀಮ್ ಹಿಕ್ಮತ್ ನಮ್ಮ ತಲೆಮಾರಿನ ಬಹಳ ಮಂದಿಗೆ ಗೊತ್ತಿಲ್ಲ. ತನ್ನ 61 ವರ್ಷದ ಬದುಕಿನಲ್ಲಿ 18 ವರ್ಷ ಜೈಲಿನಲ್ಲಿ ಕಳೆದ ಈ ಕವಿಯ ಬದುಕು ಮತ್ತು ಕಾವ್ಯ ಎರಡೂ ಅದ್ಭುತ. ಈ ಸಂಕಲನದಲ್ಲಿ ಕೆಲ ಖ್ಯಾತನಾಮರ (ನೆರುಡ, ಮಾಯಕೊವ್‌ಸ್ಕಿ, ಬ್ರೆಕ್ಟ್, ಡಿಲನ್ ತಾಮಸ್, ಹೊ ಚಿ ಮಿನ್) ಪದ್ಯಗಳು ಇವೆಯಾದರೂ ಹೆಚ್ಚು ಕುತೂಹಲ ಹುಟ್ಟಿಸುವುದು ನಾವು ಹೆಸರೇ ಕೇಳದವರ ಮನ ಕಲಕುವ ಕವಿತೆಗಳು. ಕೆಲವು ಚರಿತ್ರೆಯ ಒಂದು ಘಟ್ಟದಲ್ಲಿ ಬರೆದವು (ಸ್ಪಾನಿಶ್ ಸಿವಿಲ್ ವಾರ್, ವಿಶ್ವ ಮಹಾ ಯುದ್ಧ ಇತ್ಯಾದಿ). ಇದರಲ್ಲಿ ಅನೇಕವು ಈ ಸಂದರ್ಭಗಳ ಆಚೆಗೂ, ಇಂದಿಗೂ ನಮಗೆ ತಲುಪುವಂತವು.

ಈ ಪುಸ್ತಕದ ಮುನ್ನುಡಿಯಲ್ಲಿ ಸಂಪಾದಕ ಮತ್ತು ಕವಿ ಅಲೆನ್ ಬೋಲ್ಡ್ ಹೇಳುವ ರಾಜಕೀಯ ಮತ್ತು ಕಾವ್ಯದ ನಡುವಿನ ಸಂಬಂಧದ ಬಗ್ಗೆ ಬರೆದ ಒಂದೆರಡು ಮಾತುಗಳು ಹೇಗಿವೆ:

"... ಕಲೆ ಜೀವನದ ಅಧ್ಯಯನ. ಜೀವನ ನಡೆಯುವುದು ಸಮಾಜದೊಳಗೆ. ಸಮಾಜಗಳನ್ನು ನಿರ್ಮಿಸುವುದು ರಾಜಕೀಯ ಸಂಸ್ಥೆಗಳು. ಹೀಗಾಗೆ ರಾಜಕೀಯ ಆಯ್ಕೆಗಳು ಆಲೋಚಿಸುವ ಪ್ರತಿ ವ್ಯಕ್ತಿಗೂ ಅನಿವಾರ್ಯ. ರಾಜಕೀಯದ ಗೊಡವೆ ಬೇಡ ಅನ್ನುವುದೇ (ಅದು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ) ಒಬ್ಬ ವ್ಯಕ್ತಿಯ ಆಯ್ಕೆಯಾಗಿರಬಹುದು. ಅದೂ ಕೂಡ ಆಯ್ಕೆಯೇ ಎನ್ನುವುದನ್ನು ಮರೆಯುವಂತಿಲ್ಲ. 'ಇದ್ದದ್ದೆಲ್ಲ ಸರಿಯಾಗಿಯೇ ಇದೆ' ಎಂದು ಒಪ್ಪಿಕೊಳ್ಳುವುದು ಒಂದು ಆಯ್ಕೆ. ಇರುವ ವ್ಯವಸ್ಥೆಯ ವಿರುದ್ಧ ದನಿ ಎತ್ತುವುದು ಮತ್ತೊಂದು ಆಯ್ಕೆ. ಈ ಎಲ್ಲ ಆಯ್ಕೆಗಳು ಮತ್ತು ಅವುಗಳ ಪರಿಣಾಮಗಳ ಶೋಧನೆ ಜೀವನಾಧ್ಯಯನ, ಅರ್ಥಾತ್ ಕಲೆ..."


"... ರಾಜಕೀಯ ವಿಷಯಗಳನ್ನು ಕಲೆಯಾಗಿಸುವ ಕಷ್ಟ ಬಾಂಬು ದೂರದಲ್ಲೆಲ್ಲೋ ಸಿಡಿದಾಗ ತಾನೂ ಸಿಡಿದೇಳುವ ಯಾರೋ ಒಬ್ಬಬ್ಬ ಕವಿಯ ಕಷ್ಟ ಅಲ್ಲ. ಕವಿಗೆ ಜನರ ಕಷ್ಟಕಾರ್ಪಣ್ಯ ಆಸೆಆಕಾಂಕ್ಷೆಗಳ ಬಗ್ಗೆ ಸಹಾನುಭೂತಿ ಇದ್ದರೆ ಅಷ್ಟೇ ಸಾಲದು. ಆತ ಕಲೆಗೂ ನ್ಯಾಯ ಒದಗಿಸಬೇಕು. ರಾಜಕೀಯ ವಿಷಯ ಎತ್ತಿಕೊಂಡ ಒಂದೇ ಕಾರಣಕ್ಕೆ ಕಲೆ ತಂತಾನೆ ತಲೆ ಬಾಗಿ ಕರತಲಾಮಲಕ ಆಗುವುದಿಲ್ಲ..."

ಈ ಪುಸ್ತಕದ ಕೆಲವು ಪದ್ಯಗಳನ್ನು ಇಲ್ಲಿ ಅನುವಾದ ಮಾಡಿದ್ದೇನೆ. ಇವು ಕೇವಲ ಉದಾಹರಣೆಗಳಷ್ಟೇ. ಓದದೆ ಇರುವವರು ಓದಲು ಯೋಗ್ಯವಾದ ಪುಸ್ತಕ. (ಇಲ್ಲಿ ಫೈಜ್ ಮತ್ತು ಇಕ್ಬಾಲ್ ಬಿಟ್ಟು ಇನ್ಯಾವುದೇ ಉಪಖಂಡದ ಕವಿಗಳ ಪ್ರಸ್ತಾಪ ಇಲ್ಲದಿರುವುದು ಮಾತ್ರವೇ ನನ್ನ ಕಂಪ್ಲೇಂಟು.)

• ಬಾಗೇಶ್ರೀ

(ಬಾಗೇಶ್ರೀಯವರ ಬ್ಲಾಗ್‌ನಿಂದ)

ಸೂಚನೆ: 'ಪೆಂಗ್ವಿನ್ ಬುಕ್ ಆಫ್ ಸೋಶಿಯಲಿಸ್ಟ್ ವರ್ಸ್' ಪುಸ್ತಕದ ಕೆಲವು ಪದ್ಯಗಳನ್ನು ತುಂಬ ಹಿಂದೆ ಸುಗತ ಶ್ರೀನಿವಾಸರಾಜು (ಈಗ ಔಟ್ ಲುಕ್ ದಕ್ಷಿಣ ಭಾರತದ ಸಂಪಾದಕ) ಹತ್ತಿರ ಇಸಕೊಂಡು ಓದಿದ್ದೆ. ಇತ್ತೀಚೆಗೆ ಎಂ.ಎಸ್. ಪ್ರಭಾಕರ (ಪತ್ರಕರ್ತ, ಲೇಖಕ ಮತ್ತು ನಾನು ಕಂಡ ಅತ್ಯಂತ ಪುಸ್ತಕ ಪ್ರೀತಿಯ ವ್ಯಕ್ತಿ) ತಮ್ಮ ಪ್ರತಿಯನ್ನು ನನಗೆ ದಾನ ಮಾಡಿದ್ದರಿಂದ ಮತ್ತೆ ಓದುವ ಅವಕಾಶ ಬಂತು. ಇಬ್ಬರಿಗೂ ನಾನು ಋಣಿ.



ಹೊ ಚಿ ಮಿನ್ (ವಿಯೆಟ್ನಾಂ)

ನಿರ್ಬಂಧ

ಸ್ವಾತಂತ್ರ್ಯ ಇಲ್ಲದ ಬದುಕು ನಿಜವಾಗಿಯೂ ಕಷ್ಟ ಕಣ್ರೀ
ಒಂದಾ ಮಾಡುವುದಕ್ಕೂ ಇಲ್ಲಿ ರೂಲ್ಸುಗಳ ಕಾಟಾನ್ರೀ
ಬಾಗಿಲು ತೆರೆದಾಗ ಬರುವುದೇ ಇಲ್ಲಲ್ರಿ, ಉಚ್ಚೆ
ಬೇಗ ಜಡಿದ ಮೇಲೆ ನುಗ್ಗಿ ಬರತ್ತಲ್ರೀ ಹಿಡಿದು ರಚ್ಚೆ!



ಲೆಜ್ ಒಜೆರೊವ್ (ರಷಿಯಾ)

ಹುಟ್ಟಿನ ಕತೆ

ಕಡಲತಡಿಯ ಮೇಲೆ ಒಂದು ಹುಟ್ಟು ಸುಮ್ಮನೆ ಬಿದ್ದಿದೆ.
ಚಲನೆ, ಅಗಾಧತೆಗಳ ಬಗ್ಗೆ ಈ ಹುಟ್ಟು ಹೇಳುವ ಕತೆ
ಅದನ್ನಿಲ್ಲಿಗೆ ತಂದು ಎಸೆದ ಕೊನೆ ಮೊದಲಿಲ್ಲದ
ಹೊಳೆವ ಸಮುದ್ರ ಹೇಳುವ ಪ್ರವರಕ್ಕಿಂತ ಹೆಚ್ಚು ಸ್ವಚ್ಛ.



ನಜೀಮ್ ಹಿಕ್ಮತ್ (ಟರ್ಕಿ)

ಅಸಲು ಸವಾಲು

ಹರಡುತ್ತಿರುವ ಬೆಳಕಿನ ನಟ್ಟನಡುಬಿಂದುವಿನಲ್ಲಿ ನಾನು.
ಲೋಕ ಚೆಂದದ ರಾಶಿ, ಬೆರಳುಗಳಿಗೆ ಭೀಕರ ಹಸಿವೆ.

ಮರಗಳ ಕಂಡಷ್ಟೂ ಇನ್ನೂ ಕಾಣುವ ಹಪಹಪಿಕೆ ಕಣ್ಣಿಗೆ.
ಅದೆಷ್ಟು ಪಚ್ಚೆಹಸಿರು, ಅದೆಷ್ಟು ಭರವಸೆಗಳ ತೋರಣ.

ಹಿಪ್ಪುನೇರಳೆ ಸಾಲಿನುದ್ದಕ್ಕೂ ಕಿರಣಗಳ ಹಾದಿ.
ಜೈಲಿನಾಸ್ಪತ್ರೆಯ ಕಿಟಕಿಯ ಮುಂದೆ ನಿಂತಿದ್ದೇನೆ.

ಮೂಗಿಗೆ ಔಷಧಿಗಳ ವಾಸನೆ ಬಡಿಯುತ್ತಿಲ್ಲ.
ಇಲ್ಲೇ ಎಲ್ಲೋ ಸಂಪಿಗೆ ಅರಳಿರಬೇಕು.

ವಿಷಯವಿಷ್ಟೇ:

ಸಿಕ್ಕಿಬಿದ್ದು ಜೈಲು ಸೇರುವುದೆಲ್ಲ ಇದ್ದದ್ದೇ ಮಾಮೂಲು.
ಶರಣಾಗದೆ ಉಳಿಯುವುದು ಹೇಗೆನ್ನುವುದು ಅಸಲು ಸವಾಲು.

ಹತ್ತು ವರ್ಷ

ನಾನು ಈ ಕತ್ತಲ ಕೊಂಪೆಗೆ ಬಂದು ಬಿದ್ದ ಮೇಲೆ
ಭೂಮಿ ಸೂರ್ಯನಿಗೆ ಹತ್ತು ಪ್ರದಕ್ಷಿಣೆ ಸುತ್ತಿಯಾಗಿದೆ.
ಭೂಮಿಗೆ ಕೇಳಿದರೆ
ಹತ್ತು ವರ್ಷ ಎಲ್ಲ ಅದ್ಯಾವ ಲೆಕ್ಕ ಬಿಡಿ ಅಂದೀತು.
ನನಗೋ ಬದುಕಿನ ಹತ್ತು ವರ್ಷ ಕಿತ್ತು ಎಸೆದ ಲೆಕ್ಕ.

ನನ್ನನ್ನು ಈ ಕತ್ತಲ ಕೊಂಪೆಗೆ ತಂದು ಎಸೆದ ದಿನ
ಕೈಯ್ಯಲ್ಲಿ ಒಂದು ಮೊಂಡು ಪೆನ್ಸಿಲಿತ್ತು.
ಒಂದೇ ವಾರದಲ್ಲಿ ಸವೆಸವೆದು ಹೋಯಿತು.
ಪೆನ್ಸಿಲನ್ನು ಕೇಳಿದರೆ
ಅಯ್ಯೋ ನನ್ನ ಆಯಸ್ಸೇ ತೀರಿತು ಅಂತ ಅತ್ತೀತು.
ನನಗೆ ಬರೀ ಜುಜುಬಿ ಒಂದು ವಾರದ ಲೆಕ್ಕ.

ನಾನು ಈ ಕತ್ತಲ ಕೊಂಪೆಗೆ ಬಂದು ಬಿದ್ದಾಗ
ಕೊಲೆಯ ಆರೋಪ ಹೊತ್ತು ಇಲ್ಲೇ ಇದ್ದ ಓಮರ್
ಏಳೂವರೆ ವರ್ಷ ಕಳೆದುಹೊರಟುಬಿಟ್ಟ.
ಒಂದಷ್ಟು ದಿನ ಹೊರಗೆ ಮಜಾ ಮಾಡಿ
ಮತ್ತೆ ಕಳ್ಳಸಾಗಣೆ ಮಾಡಿ ಸಿಕ್ಕಿ ಬಿದ್ದು
ಒಂದಾರು ತಿಂಗಳು ಮರಳಿ ಬಂದಿದ್ದು ಹೊರಟ.
ನೆನ್ನೆ ಬಂದ ಸುದ್ದಿ: ಓಮರನಿಗೆ ಲಗ್ನವಾಗಿದೆಯಂತೆ.
ಬರುವ ಬೇಸಿಗೆಗೆ ಒಂದು ಮಗುವೂ ಆಗುವುದಂತೆ.

ನಾನು ಈ ಕತ್ತಲ ಕೊಂಪೆಗೆ ಬಂದು ಬಿದ್ದ ದಿನ
ಗರ್ಭ ಧರಿಸಿದ ಅಮ್ಮಂದಿರ ಮಕ್ಕಳಿಗೆಲ್ಲ
ಈಗ ಹತ್ತರ ಹುಟ್ಟು ಹಬ್ಬದ ಸಂಭ್ರಮ.
ಅಂದು ಹುಟ್ಟಿದ ನಡುಗುವ ಕಡ್ಡಿ ಕಾಲಿನ
ಕುದುರೆ ಮರಿಗಳು ಈಗ
ಅಂದು ಕುಣಿಸಿ ವಯ್ಯಾರ ನಡೆವ ಕುದುರೆಗಳು.
ಆಲಿವ್ ಮರದ ಚಿಗುರುಗಳು ಮಾತ್ರ
ಇಂದಿಗೂ ಎಳೆಎಳೆ ಹಸಿರು.

ನನ್ನನ್ನು ಈ ಕತ್ತಲ ಕೊಂಪೆಗೆ ಎಸೆದ ನಂತರ
ದೂರದ ನನ್ನೂರಲ್ಲಿ ಹೊಸಹೊಸ
ಸ್ಮಾರಕಗಳೆದ್ದಿವೆಯಂತೆ.
ನನ್ನ ಇಡೀ ಸಂಸಾರ ಆ ಪುಟ್ಟ ಮನೆ ಬಿಟ್ಟು ಗುಳೆ ಹೋಗಿ
ಈಗ ನಾನು ಕಾಣದ ಬೀದಿಯಲ್ಲಿ,
ಕಾಣದ ಮನೆಯಲ್ಲಿ ಇದೆಯಂತೆ.

ನನ್ನನ್ನು ಈ ಕತ್ತಲ ಕೊಂಪೆಗೆ ಎಸೆದ ದಿನ
ಬ್ರೆಡ್ಡು ಹತ್ತಿಯಷ್ಟು ಬಿಳಿ ಇತ್ತು.
ನಂತರ ಬ್ರೆಡ್ಡಿಗೂ ರೇಷನ್ನು ಶುರುವಾಯಿತು.
ಇಲ್ಲಿ ಈ ಕೊಂಪೆಯಲ್ಲಿ
ಬ್ರೆಡ್ಡಿನ ಹಳಸು ತುಂಡಿಗೆ ನಡೆದಿವೆ ಕೊಲೆಗಳು.
ಈಗ ಪರಿಸ್ಥಿತಿ ಸ್ವಲ್ಪ ಪರವಾಗಿಲ್ಲ,
ಆದರೂ ಇಲ್ಲಿನ ಬ್ರೆಡ್ಡಿಗೆ ರುಚಿಯೇ ಇಲ್ಲ.

ನನ್ನನ್ನು ಈ ಕತ್ತಲ ಕೊಂಪೆಗೆ ಎಸೆದ ದಿನ
ಎರಡನೇ ಮಹಾಯುದ್ಧ ಶುರುವಾಗಿರಲಿಲ್ಲ.
ಡಾಶಾವ್ ಪಟ್ಟಣದಲ್ಲಿ ಯಹೂದಿಗಳ ಬೇಯಿಸುವ
ಒಲೆಗೆ ಬೆಂಕಿ ಒಟ್ಟಿ ಇನ್ನೂ ಸಜ್ಜು ಮಾಡಿರಲಿಲ್ಲ.
ಹಿರೋಶಿಮಾದಲ್ಲಿ ಅಣುಬಾಂಬು ಸ್ಫೋಟಿಸಿರಲಿಲ್ಲ.
ನೋಡಿ, ಹೀಗೆ ಕಾಲ ಹರಿದುಹೋಗಿದೆ?
ಕೊಲೆಯಾದ ಹಸುಳೆಯ ರಕ್ತದ ಹಾಗೆ.
ಈಗ ಅದೆಲ್ಲ ಮುಗಿದಿದೆ.
ಅಮೆರಿಕಾದ ಡಾಲರು ಆಗಲೇ
ಮೂರನೇ ಯುದ್ಧದ
ಮಾತು ಶುರು ಮಾಡಿದೆ.

ಅದೇನೇ ಇರಲಿ
ನನ್ನನ್ನು ಈ ಕತ್ತಲ ಕೊಂಪೆಗೆ ಎಸೆದ ದಿನಕ್ಕಿಂತ
ಈಗ ಎಷ್ಟೋ ಬೆಳಕಾಗಿದೆ.
ಈಗ ನನ್ನ ಜನ ಕೈಗಂಟು ಊರಿ
ಅರ್ಧ ಎದ್ದಿದ್ದಾರೆ.
ಭೂಮಿ ಸೂರ್ಯನಿಗೆ ಹತ್ತು ಪ್ರದಕ್ಷಿಣೆ ಸುತ್ತಿಯಾ

ಅದೇ ಉಮೇದಿನಲ್ಲಿ ಇಂದೂ ಹೇಳುತ್ತೇನೆ
ನನ್ನ ಜನರಿಗೆ ನಾನು ಅಂದು ಹೇಳಿದ ಮಾತು
ಭೂಮಿಯ ಮೇಲಿನ ಇರುವೆಗಳಂತೆ,
ಸಾಗರದ ಮೀನುಗಳಂತೆ,
ಆಕಾಶದ ಹಕ್ಕಿಗಳಂತೆ
ಅಕ್ಷೋಹಿಣಿ ಸೈನ್ಯ ನೀವು.
ರಣಹೇಡಿಗಳೋ, ವೀರರೋ
ಜಾಣರೋ, ದಡ್ಡರೋ,
ಕಟ್ಟುವವರು, ಕೆಡವುವವರು ಎಲ್ಲ ನೀವೇ.
ಅದಕ್ಕೇ ನನ್ನ ಹಾಡಿನಲ್ಲೆಲ್ಲ ನಿಮ್ಮದೇ ಮಾತು.

ಇನ್ನು
ಹತ್ತು ವರ್ಷ ನಾನು ಇಲ್ಲಿ ಕಳೆದ ಬಗೆ?
ಇತ್ಯಾದಿ ವಿಷಯವೆಲ್ಲ
ಸುಮ್ಮನೆ ಹೀಗೇ ಹರಟೆ ಮಾತು.

ಮತ್ತೆ ಸಾವನ್ನು ನೆನೆದು

ನನ್ನ ಸಂಗಾತಿ,
ನನ್ನ ಜೀವದ ಜೀವ,
ನನ್ನ ಪಿರಾಯೇ,
ನಾನಿಂದು ಸಾವಿನ ಬಗ್ಗೆ ಯೋಚಿಸುತ್ತಿದ್ದೇನೆ.
ನನ್ನ ಧಮನಿಗಳಲ್ಲೋಡುವ ರಕ್ತದ ಗತಿ
ನಿಧಾನವಾಗುತ್ತಿದೆ.
ಒಂದು ದಿನ,
ಹಿಮ ಬೀಳುತ್ತಿರುವಾಗಲೋ,
ಕಗ್ಗತ್ತಲು ಕವಿದಿರುವಾಗಲೋ;
ನಟ್ಟನಡು ಮಧ್ಯಾಹ್ನದ ಸುಡು ಬಿಸಿಲಲ್ಲೋ?
ನಮ್ಮಿಬ್ಬರಲ್ಲಿ ಯಾರ ಜೀವ ಮೊದಲು
ಹಾರಿ ಹೋದೀತು?
ಎಲ್ಲಿ? ಎಂದು? ಹೇಗೆ?
ಸಾವಿಗೆ ಒಂದು ಗಳಿಗೆ ಮುಂಚೆ
ಕೇಳಿದ ಕೊನೆಯ ಶಬ್ದ,
ನೋಡಿದ ಕೊನೆಯ ಬಣ್ಣ,
ಅದಾವುದಿರಬಹುದು?
ಇಲ್ಲೇ ಉಳಿದು ಹೋದವರ
ಮೊದಲ ಹೆಜ್ಜೆ ಎಲ್ಲಿಗಿದ್ದೀತು?
ಮೊದಲ ಮಾತು ಯಾವುದಿದ್ದೀತು?
ನಾಲಿಗೆ ಮೇಲಿನ ರುಚಿ ಹೇಗಿದ್ದೀತು?
ನಾವು ದೂರ ದೂರ ಸಾಯಬಹುದೇ?
ಸಾವಿನ ಸುದ್ದಿ
ಗಂಟಲೊಡೆದು ಚೀರಿತ್ತಲೋ,
ಮೆಲ್ಲ ಪಿಸು ಮಾತಿನಲ್ಲಿಯೋ ತಲುಪಿ
ನಮ್ಮಲ್ಲೊಬ್ಬರನ್ನು ಒಬ್ಬಂಟಿ ಬಿಟ್ಟು
ತಿರುಗಿ ಹೋಗಿಬಿಡಬಹುದು.
ಉಳಿದವರು ಗುಂಪಿನಲ್ಲಿ ಏಕಾಕಿ.
ಜೀವನವೇ ಅಷ್ಟು ಬಿಡು.
ಎಷ್ಟೆಲ್ಲಾ ಸಾಧ್ಯತೆಗಳು?
ಇಪ್ಪತ್ತನೆ ಶತಮಾನದ
ಯಾವ ವರ್ಷ, ಯಾವ ತಿಂಗಳು,
ಯಾವ ದಿನ, ಯಾವ ಗಂಟೆ?
ನನ್ನ ಸಂಗಾತಿ,
ನನ್ನ ಜೀವದ ಜೀವ,
ನನ್ನ ಪಿರಾಯೇ,
ನಾನಿಂದು ಸಾವಿನ ಬಗ್ಗೆ,
ಕಳೆದ ಜೀವನದ ಬಗ್ಗೆ
ಯೋಚಿಸುತ್ತಿದ್ದೇನೆ.
ದುಃಖ, ನೆಮ್ಮದಿ, ಹೆಮ್ಮೆ
ಎಲ್ಲ ಅನ್ನಿಸುತ್ತಿದೆ.
ನಮ್ಮಿಬ್ಬರಲ್ಲಿ ಯಾರೇ ಮೊದಲು
ಎಲ್ಲಿ, ಹೇಗೆ, ಎಂದು ಸತ್ತರೂ
ಈ ಮಾತಂತೂ ಗಟ್ಟಿ:
ಒಬ್ಬರನ್ನೊಬ್ಬರು ಪ್ರೀತಿಸಿದ್ದೇವೆ,
ಜೀವನದ ಅತಿದೊಡ್ಡ ಮೌಲ್ಯಕ್ಕಾಗಿ
ಜೊತೆಗೂಡಿ ಹೋರಾಡಿದ್ದೇವೆ,
ಬದುಕಿದ್ದೇವೆ.



ಜೋ ಕೊರೀ (ಸ್ಕಾಟ್‌ಲ್ಯಾಂಡ್)

ವಿರಳ!

...ಕೆಸರಾಗದ, ಓದಿ ನಾಲಿಗೆ ಹರಿತ ಆದ ಮಂದಿ
...ಷ್ಟುಂತ ದುಡಿವ ಸೋದರರ ಜೊತೆ
...ಗಲಿಗೆ ಹೆಗಲು ಕೊಟ್ಟು, ಆದ ಅನ್ಯಾಯಗಳ
...ದ್ದುತ್ತಾ ನಡೆಯುವುದು ಅದೆಷ್ಟು ವಿರಳ!

...ಂದಷ್ಟು ದೂರ ಜೊತೆಗೆ ನಡೆದವರೂ ಉಂಟು
...ದರೆ ಧೈರ್ಯ ಮಾತ್ರ ಸ್ವಲ್ಪ ಖೋತಾ.
...ಲುಬೆ ಹೊತ್ತು, ಮುಳ್ಳಿನ ಕಿರೀಟ ಧರಿಸಿದವರ
...ಂಡೊಡನೆ ಹಿಮ್ಮೆಟ್ಟಿ ಓಡುವವರೇ ಬಹಳ!



...ಸ್ ಮ್ಯಾಗ್ನಸ್ ಎನ್ಸೆನ್ಸ್ ಬರ್ಗರ್ (ಜರ್ಮನಿ)

ಮಧ್ಯಮ ವರ್ಗದ ಹಾಡು

...ದೂರವುದಕ್ಕೆ ಕಾರಣ ಇಲ್ಲ
...ಲಸ ಇಲ್ಲ ಅಂತೇನಿಲ್ಲ,
...ಹೊಟ್ಟೆ ಏನೂ ಹಸಿದಿಲ್ಲ
...ಗಡದ್ದಾಗಿ ತಿಂದಾಗಿದೆ.

...ಹುಲ್ಲು ಬೆಳೀತಾ ಇದೆ.
...ರಾಷ್ಟ್ರೀಯ ಉತ್ಪನ್ನ,
...ಉಗುರು, ಭವ್ಯ ಪರಂಪರೆ,
...ಎಲ್ಲವೂ ಬೆಳೀತಿದೆ.

...ರೋಡಿನಲ್ಲಿ ಜಾಸ್ತಿ ಜನ ಇಲ್ಲ,
...ವ್ಯಾಪಾರ ವಹಿವಾಟು ಕುದುರಿದೆ.
...ಸೈರನ್ನುಗಳು ಹೊಡೆದುಕೊಳ್ಳುತ್ತಿಲ್ಲ
...ಎಲ್ಲವೂ ಇದ್ದಂತೆಯೇ ಇದೆ.

...ಸತ್ತವರು ವಿಲ್ಲು ಬರೆದಿಟ್ಟಿದ್ದಾರೆ.
...ಮಳೆ ಜೋರಿಲ್ಲ, ಬರೀ ಜಿನುಗುತ್ತಿದೆ.
...ಯುದ್ಧ ಇನ್ನೂ ಸಾರಿಲ್ಲ,
...ಅದಕ್ಕೆ ಏನು ಅವಸರವೂ ಇಲ್ಲ.

...ಹುಲ್ಲು ತಿನ್ನುತ್ತೇವೆ.
...ರಾಷ್ಟ್ರೀಯ ಉತ್ಪನ್ನ,
...ಉಗುರು, ಭವ್ಯ ಪರಂಪರೆ,
...ಎಲ್ಲವನ್ನೂ ಮೆಲ್ಲುತ್ತೇವೆ.

...ಮುಚ್ಚಿಡುವಂಥದ್ದೇನಿಲ್ಲ,
...ಹಂಬಲಿಸುವಂಥದ್ದೇನಿಲ್ಲ,
...ಹೇಳುವುದಕ್ಕೆ ಏನಿಲ್ಲ,
...ಎಲ್ಲವೂ ಇದೆ.

...ಗಡಿಯಾರಕ್ಕೆ ಕೀಲಿ ಕೊಟ್ಟಾಗಿದೆ.
...ಬಿಲ್ಲು ಪಾವತಿ ಆಗಿದೆ.
...ಬಟ್ಟೆ ಒಗೆದು ಒಣಗಿಸಿಯಾಗಿದೆ.
...ಕೊನೆಯ ಬಸ್ಸು ಹೊರಟಿದೆ.
...ಖಾಲಿ ಇದೆ.
...ದೂರವುದಕ್ಕೆ ಕಾರಣ ಇಲ್ಲ
...ಕಾಯುವುದಕ್ಕೆ ಏನಿದೆ?



ನೆಲ್ಲಿ ಸಾಕ್ಸ್ (ಜರ್ಮನಿ-ಸ್ವೀಡನ್)

ಗೊತ್ತಿದ್ದರೆ?

ನಿನ್ನ ಕೊನೆಯ ನೋಟ ನೆಟ್ಟಿದ್ದು ಎಲ್ಲಿ?

ಅದೆಷ್ಟೋ ರಕ್ತ ಕುಡಿಕುಡಿದು ಕುರುಡಾಗಿ
ನಿಂತ ಕಲ್ಲಿನ ಮೇಲೆ
ಹರಿದಾಡಿತೆ ನಿನ್ನ ಮಂಜಾದ ಕಣ್ಣು?


ಕೊಲೆ, ವಿಭಜನೆಗಳ ಕಂಡು ಕರಿಗಟ್ಟಿದ
ಹೆಜ್ಜೆಯಳತೆ ಭೂಮಿಯ ಮೇಲೆ
ನಿಂತಿತೇ ನಿನ್ನ ಅಂತಿಮ ದೃಷ್ಟಿ?

ನಿನ್ನನಿಲ್ಲಿಗೆ ಕರೆ ತಂದು ಎಲ್ಲ ಹಾದಿಗಳ
ಮುಚ್ಚಿದ ಆ ಕೊನೆ ಹಾದಿಯ ಕಡೆಗೆ
ಕೊನೆ ಬಾರಿ ಹಾಯಿತೆ ನಿನ್ನ ಕಣ್ಣು?

ನಿಂತ ನೀರು, ಹೊಳೆವ ಲೋಹದ ಚೂರು?
ವೈರಿಯ ಬೆಲ್ಟಿನ ಲೋಹವಾದರೂ ಸರಿಯೇ?
ಕಂಡಿತೆ ಒಂದಾದರೂ ಸಿಗುವ ಸ್ವರ್ಗದ ಕುರುಹು?

ಅಥವಾ?
ಪ್ರೀತಿಸದೆ ಯಾರನ್ನೂ ಬೀಳ್ಕೊಡದ ಈ ಭೂಮಿ
ಇತ್ತಿತೆ ನಿನಗೆ ಹಾರುವ ಹಕ್ಕಿ ಸಾಲಿನ ಕಾಣ್ಕೆ?
ಸುಡು ಯಾತನೆಯ ದೇಹದ ಗೂಡ ಒಳಗೆ
ತೋರಿಸಿತೆ ನಿನಗೆ ಮಿಣುಕುವ ಆತ್ಮದ ತಾವ?

... ನನಗೆ ಗೊತ್ತಿದ್ದರೆ!




ಹ್ಯೂ ಮ್ಯಾಕ್ ಡಿಯರ್ಮಿಡ್
(ಸ್ಕಾಟ್‌ಲ್ಯಾಂಡ್)

ಯುರೋಪಿಯನ್ನರಿಗೆ ಕಿವಿಮಾತು

ಭವ್ಯ ನಾಗರಿಕತೆಯನ್ನ ಉಳಿಸೋದಕ್ಕೆ ಈ ಯುದ್ಧ
ಅಂದ್ರಾ?
ಅಲ್ಲ, ನಿಮಗೂ ಅದಕ್ಕೂ ಯಾವ ಬಾದರಾಯಣ
ಸಂಬಂಧಾರೀ?
ಉಳಿಸಕ್ಕೆ ಹೊರಟಿರೋದನ್ನ ಮೊದಲು ಸ್ವಲ್ಪ
ಗಳಿಸ್ಕೊಳ್ಳೋದು
ಗೊತ್ತೇ ಇಲ್ಲದ ವಿಷಯದ ಬಗ್ಗೆ ಹೊಡ್ಕೊಂಡು
ಸಾಯೋಕಿಂತಾ ವಾಸಿ ರೀ.

ವೇದಾವತಿ ತೀರದ ಜನ ಬದುಕಿನ ಚಿತ್ರಲೋಕ

ಚೆಳ್ಳಕೆರೆ ಸಮೀಪದ ಮೋದೂರು ಗ್ರಾಮದ ದಲಿತ ಯುವಕ ದುರುಗಪ್ಪ (ಮೋದೂರು ತೇಜ) ಅವರ 'ವೇದಾವತಿ ತೀರದಲ್ಲಿ' ಕಾದಂಬರಿಯ ಘಟನೆಯೊಂದು ಹೀಗಿದೆ: ಹಳ್ಳಿಯೊಂದರ ಶಿಕ್ಷಿತ ದಲಿತ ಯುವಕ ಗೋವಿಂದ ತನಗಿಂತ ಮೇಲುಜಾತಿಯ ಗೆಳೆಯನ ಮದುವೆಯ ಊಟದ ಪಂಕ್ತಿಯಲ್ಲಿ ಕೂತಿರುತ್ತಾನೆ. ಆಗ ಮೇಲ್ಜಾತಿಯ ಯಜಮಾನ ಬಂದು ಒಂದೇ ಪಂಕ್ತಿಯಲ್ಲಿ ದಲಿತರಿಗೆ ಊಟ ಹಾಕಿ ಊರ ಮಾನ ತೆಗೆಯುತ್ತಿದ್ದೀರಿ ಎಂದು ಕಿಡಿಕಾರುತ್ತಾನೆ. ಇದಕ್ಕೆ ಗೆಳೆಯರು ಸೊಪ್ಪುಹಾಕದೆ ಗೋವಿಂದನನ್ನು ಸಂತೈಸಿ ಊಟ ಮಾಡುವಂತೆ ಒತ್ತಾಯಿಸುತ್ತಾರೆ. ಗೋವಿಂದ ಅವಮಾನದಿಂದ ಬೇಯುತ್ತಾನೆ. ಊಟ ಹೊಟ್ಟೆಯೊಳಗೆ ಇಳಿಯುವುದಿಲ್ಲ. ಇದು ಬದಲುಗೊಂಡ ಗ್ರಾಮೀಣ ಬದುಕಿನಲ್ಲಿ ಜಾತಿ ಶ್ರೇಣೀಕರಣದ ಹೊಸ ಮುಖವೊಂದನ್ನು ಅನಾವರಣ ಮಾಡುತ್ತದೆ. ಇಂದಿನ ದಲಿತ ಯುವಕರ ಸಾಹಿತ್ಯ ಅಭಿವ್ಯಕ್ತಿ ಯಾವ ತೆರನಾಗಿರುತ್ತದೆ ಎನ್ನುವುದಕ್ಕೆ ಈ ಘಟನೆ ಉತ್ತರದಂತೆ ಬಂದಿದೆ.



ಹೊಸ ತಲೆಮಾರಿನ ಬರಹಗಾರ ಮೋದೂರು ತೇಜ ಅವರು 'ಮರದೊಳಗಳ ಕಿಚ್ಚು' ಎನ್ನುವ ಕಥಾಸಂಕಲನ, 'ಬುದ್ಧನ ಮೇಲೂ ಯುದ್ಧ', 'ಭೂಮಿ ತೂಕದ ಪ್ರೀತಿ' ಎಂಬ ಕವನ ಸಂಕಲನಗಳ ಮೂಲಕ ಸಾಹಿತ್ಯಾಸಕ್ತರ ಗಮನ ಸೆಳೆದಿದ್ದಾರೆ. ಅವರ ಮೊದಲ ಕಾದಂಬರಿ 'ವೇದಾವತಿ ತೀರದಲ್ಲಿ'. ಕಾದಂಬರಿ ಕ್ಷೇತ್ರಕ್ಕೆ ಹೆಚ್ಚು ತೆರೆದುಕೊಳ್ಳದ ಯುವ ಲೇಖಕರ ಮಧ್ಯೆ ತೇಜ ಅವರು ಭಿನ್ನರಾಗಿ ಕಾಣುತ್ತಾರೆ. ಈ ಕಾದಂಬರಿಯಲ್ಲಿ ಚಳ್ಳಕೆರೆ ಭಾಗದ

ಪುಸ್ತಕ ವಿಮರ್ಶೆ

• ಅರುಣ್ ಜೋಳದಕೂಡ್ಲಿಗಿ

ವೇದಾವತಿ ನದಿ ತೀರದ ಗ್ರಾಮೀಣ ಬದುಕಿನ ಚಿತ್ರಣವನ್ನು ಕಟ್ಟಿಕೊಡಲು ಯತ್ನಿಸಿದ್ದಾರೆ. ಇದು 321 ಪುಟದ 25 ಉಪ ಘಟಕಗಳನ್ನೊಳಗೊಂಡ ದೀರ್ಘ ಕಾದಂಬರಿ.

ಈ ಕಾದಂಬರಿ ಹಲವು ಕುಟುಂಬಗಳ ಬದುಕಿನ ಚಲನವಲನಗಳನ್ನು ದಾಖಲಿಸುತ್ತದೆ. ಯುಗಾದಿಯ ಬೇಟೆಯೊಂದಿಗೆ ಆರಂಭವಾಗಿ, ಮತ್ತೊಂದು ಯುಗಾದಿ ಬೇಟೆಯೊಂದಿಗೆ ಮುಕ್ತಾಯವಾಗುತ್ತದೆ. ಈ ಒಂದು ವರ್ಷದ ಅವಧಿಯಲ್ಲಿನ ಗ್ರಾಮೀಣ ಬದುಕಿನ ನಾಲ್ಕು ಕುಟುಂಬಗಳ ನಡುವೆ ನಡೆವ ಕೌಟುಂಬಿಕ ಏರುಪೇರುಗಳನ್ನು ಇಲ್ಲಿ ದಾಖಲಿಸಲಾಗಿದೆ. ಮುಖ್ಯವಾಗಿ ವೇದಾವತಿ ನದಿ ತೀರದ ಹಳ್ಳಿಗಳ ಹಬ್ಬ ಆಚರಣೆ ಜಗಳ ವೈಷಮ್ಯ ಮುಂತಾದವುಗಳ ಮೂಲಕ ಇಲ್ಲಿನ ಜನಜೀವನದ ದಟ್ಟ ವಿವರಗಳನ್ನು ಕಟ್ಟಿಕೊಡುತ್ತಾರೆ. ಹಾಗಾಗಿ ಇಲ್ಲಿ ಗ್ರಾಮೀಣ ಬದುಕಿನ ಸದ್ಯದ ಪಲ್ಲಟಗಳನ್ನು ಗ್ರಹಿಸಬಹುದು. ಇಡೀ ಕಾದಂಬರಿ ವಿವರಣೆಯಲ್ಲಿ ವಾಚ್ಯವಾದರೂ ಮಾತುಕತೆಯಲ್ಲಿ ಬರುವ ಗಾದೆಗಳ ಇಲ್ಲಿನ ಒಳ ಧ್ವನಿಯಂತೆ ಬಳಕೆಯಾಗಿದೆ.

ಇಂದು ಗ್ರಾಮೀಣ ಪ್ರದೇಶದಲ್ಲಿ ಅರೆವಿದ್ಯಾವಂತರ ಗುಂಪು ಹುಟ್ಟಿದೆ. ಅಂದರೆ ಇತ್ತ ನೌಕರಿಗೆ ಹೋಗುವಷ್ಟು ಓದೇನೂ ಇಲ್ಲದ, ಇತ್ತ ಕೃಷಿ ಮಾಡುವ ಕೌಶಲ್ಯ, ಮನಸ್ಸೂ ಇಲ್ಲದ ಅಂಡಲೆಯುವ ಒಂದು ಯುವ ವರ್ಗ ಕರ್ನಾಟಕದಲ್ಲಿ ಹೆಚ್ಚಾಗಿದೆ. ಈ ವರ್ಗದ ಆಯ್ಕೆ ಏನಾಗಿದೆ? ಈ ವರ್ಗ ಆಯ್ದುಕೊಳ್ಳುವ ಹೊಸ ಉದ್ಯೋಗ ಯಾವ ಬಗೆಯದು. ಈ ವರ್ಗ ಬದುಕನ್ನು ಕಟ್ಟಿಕೊಳ್ಳಲು ತಾನು ಕಲಿತ ವಿದ್ಯೆಯನ್ನು ಹೇಗೆ ಬಳಸಿಕೊಳ್ಳುತ್ತದೆ ಎನ್ನುವುದನ್ನು ಅಭ್ಯಸಿಸುವ ಅಗತ್ಯವಿದೆ.


ತೇಜ ಅವರ ಕಾದಂಬರಿಯಲ್ಲಿ ಇಪ್ಪತ್ತರಿಂದ ಮೂವತ್ತೈದು ವರ್ಷದ ಒಳಗಿನ ಯುವ ಸಮುದಾಯದ ತಳಮಳಗಳ ಪ್ರಾತಿನಿಧಿಕವಾಗಿ ಇಲ್ಲಿನ ಬಸವರಾಜು, ಮೇಘರಾಜು, ರಘುರಾಮ, ಆನಂದ, ಗೋವಿಂದ, ಸಾರಿಕಾ, ವೇದಾವತಿ ಮುಂತಾದವರ ಪಾತ್ರಗಳು ಬರುತ್ತವೆ. ಈ ವರ್ಗದ ತಳಮಳಗಳನ್ನು ಹುಡುಕಾಟ ಮಾಡುವ ಕಾರಣಕ್ಕೆ ಈ ಕಾದಂಬರಿ ಮುಖ್ಯವಾಗುತ್ತದೆ.

ಪ್ರಾದೇಶಿಕ ವಿವರಗಳ ಸಾವಯವ ಸಂಬಂಧದೊಂದಿಗೆ ನಮ್ಮ ಕಾಲದ ಗ್ರಾಮೀಣ ಬದುಕನ್ನು ಕಟ್ಟಿಕೊಡುವಲ್ಲಿ ಮೋದೂರು ತೇಜ ಪಟ್ಟಿರುವ ಶ್ರಮ ಮೆಚ್ಚುವಂತದ್ದು. ಆದರೆ ಈ ಕಾದಂಬರಿಗೆ ಗಂಭೀರ ಮಿತಿಗಳಿವೆ. ಸಮೃದ್ಧ ಜೀವನಾನುಭವವನ್ನು ಒಂದು ತಾತ್ವಿಕ ಎಳೆಯಲ್ಲಿ ಪೋಣಿಸುವಲ್ಲಿ ಕಾದಂಬರಿ ಸೋತಿದೆ. ಇಲ್ಲಿನ ಬಹುತೇಕ ಪಾತ್ರಗಳು ಆದರ್ಶ ವ್ಯಕ್ತಿಚಿತ್ರಣದಂತೆ ಕಾಣುತ್ತವೆ. ತೇಜ (ದುರುಗಪ್ಪ) ಸ್ವತಃ ದಲಿತನಾಗಿ ತನ್ನದೇ ಹಳ್ಳಿಗಳಲ್ಲಿ ಅನುಭವಿಸಿದ ಅಸ್ಪೃಶ್ಯತೆಯ ನೋವುಗಳನ್ನು ಕಾದಂಬರಿಯಲ್ಲಿ ದಾಖಲಿಸಲು ಸಾಧ್ಯವಾಗಿಲ್ಲ. ಇಲ್ಲಿ ಲೇಖಕರು ದಲಿತ ಐಡೆಂಟಿಟಿಯಲ್ಲಿ ಗುರುತಿಸಿಕೊಳ್ಳದ ಇಕ್ಕಟ್ಟನ್ನು ಅನುಭವಿಸಿದಂತೆ ಕಾಣುತ್ತದೆ.

ದಲಿತ ಯುವಕನೊಬ್ಬ ಗ್ರಾಮೀಣ ಬದುಕನ್ನು ನೋಡುವ ವಿಶಿಷ್ಟ ನೋಟಕ್ರಮವೂ ಇಲ್ಲಿ ಕಾಣುವುದಿಲ್ಲ. ಹಾಗೆಯೆ ಗ್ರಾಮೀಣ ಭಾಗದ ಸಾಮಾಜಿಕ ನಾಟಕಗಳ ಪ್ರಭಾವ ಕಾದಂಬರಿಯ ಸಂಭಾಷಣೆಗಳಲ್ಲಿ ಎದ್ದು ಕಾಣುತ್ತದೆ. ಈ ಬಗೆಯ ನಾಟಕೀಯತೆಯನ್ನು ಮೀರುವ ಅಗತ್ಯವಿತ್ತು. ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಕಾದಂಬರಿಕಾರ ಸೋತಿದ್ದಾರೆ. ಎಲ್ಲವೂ ಕಳೆದುಹೋಗುತ್ತಿವೆ ಅವುಗಳನ್ನು ಸಂಗ್ರಹಿಸಿಡಬೇಕು, ಹಳೆಯದೆಲ್ಲಿ ಸಮೃದ್ಧವಾದುದು, ಸಾಮರಸ್ಯದ್ದು ಎನ್ನುವ ಹಳಹಳಿಕೆ ಕಾದಂಬರಿಯ ನಿರೂಪಣೆಯಲ್ಲಿದೆ. ಇದು ಕೂಡ ಕಾದಂಬರಿಯ ಮಿತಿಯಾಗಿದೆ. ಇಂತಹ ಹಲವು ಮಿತಿಗಳು ಈ ಕಾದಂಬರಿಗಿವೆ.

ಮೋದೂರು ತೇಜ ಅವರ ಮೊದಲ ಕಾದಂಬರಿ ಇದಾಗಿದ್ದರಿಂದ ಇಂತಹ ಮಿತಿಗಳು ಉಳಿದಿರಬಹುದು. ತೇಜ ಅವರ ಕಥೆಗಳಲ್ಲಿ ಕಾಣುವ ಬಿಗಿಬಂಧ, ಕಥನ ಕ್ರಮ, ನಿರೂಪಣೆಯ ತಂತ್ರ ಇಲ್ಲಿಯೂ ಸಾಧ್ಯವಾಗಿದ್ದರೆ, ಇದೊಂದು ಮಹತ್ವದ ಕಾದಂಬರಿಯಾಗುತ್ತಿತ್ತು. ತೇಜ ಅವರು ತಮ್ಮ ಮುಂದಿನ ಬರಹದಲ್ಲಿ ಇಂತಹ ಮಿತಿಗಳನ್ನು ಮೀರಿದರೆ ಅವರಿಂದ ಮಹತ್ವದ ಕಾದಂಬರಿಯನ್ನು ನಿರೀಕ್ಷಿಸಬಹುದು. ಕಾದಂಬರಿಯಂತಹ ದೊಡ್ಡ ಕ್ಯಾನ್ವಾಸಿನಲ್ಲಿ ತನ್ನ ಸೃಜನಶೀಲ ಹುಡುಕಾಟ ಮಾಡಿದ ತೇಜ ಅವರನ್ನು ಈ ಕಾರಣಕ್ಕೆ ಅಭಿನಂದಿಸಬೇಕು.

ವೇದಾವತಿ ತೀರದಲ್ಲಿ
(ಕಾದಂಬರಿ)
ಮೋದೂರು ತೇಜ
ಪುಟ: 340, ರೂ.200, 2010
ಅಕ್ಷಯ ಪ್ರಕಾಶನ, ಚಿತ್ರದುರ್ಗ



1955 ರಲ್ಲಿ ನಡೆದ ಮೈಸೂರು ಆಕಾಶವಾಣಿ ಸಮಾರಂಭದ ಈ ಅಪರೂಪದ ದೃಶ್ಯವನ್ನು ಕ್ಲಿಕ್ಕಿಸಿದವರು ಟಿ.ಎಸ್. ನಾಗರಾಜನ್


1. ಮಾಸ್ತಿ
2. ಡಿವಿಜಿ
3. ಕುವೆಂಪು
4. ಎಂ.ವಿ. ಸೀತಾರಾಮಯ್ಯ
5. ಶಿವರಾಮ ಕಾರಂತ
6. ಅನಕೃ
7. ಜಿ.ಪಿ. ರಾಜರತ್ನಂ

ವಿಜ್ಞಾನಿಗಳನ್ನು ಟೀಕಿಸಿದ ಪಟೇಲ್

ಆಗ ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲರು ಒಂದು ದಿನ ಲಂಕೇಶರನ್ನು ನೋಡಲು ಸೇಂಟ್ ಜಾನ್ಸ್ ಆಸ್ಪತ್ರೆಗೆ ಬರಲಿದ್ದಾರೆ ಎಂದು ಅವರ ಕಾರ್ಯದರ್ಶಿ ಫೋನ್ ಮಾಡಿ ಹೇಳಿದರು. ಅದನ್ನು ಕೇಳಿ ಲಂಕೇಶರಿಗೆ ತುಂಬಾ ಬೇಸರವಾಯಿತು. "ಮುಖ್ಯಮಂತ್ರಿ ಆಸ್ಪತ್ರೆಗೆ ಬಂದರೆ ಅವರೊಂದಿಗೆ ಹತ್ತಾರು ಜನ ಬರುತ್ತಾರೆ. ಪೊಲೀಸರೂ ಇರುತ್ತಾರೆ. ಅವರೆಲ್ಲರಿಂದಾಗಿ ಆಸ್ಪತ್ರೆಯಲ್ಲಿರುವ ಇತರೆ ರೋಗಿಗಳಿಗೆ ಮತ್ತು ಅವರನ್ನು ನೋಡಲು ಬಂದಿರುವ ಜನರಿಗೆ ಅನಾನುಕೂಲವಾಗುತ್ತೆ" ಎಂಬುದು ಲಂಕೇಶರ ಕಾಳಜಿಯಾಗಿತ್ತು. ಆ ಕಾರಣಕ್ಕೇ ಅವರು ಪಟೇಲರ ಆಫೀಸಿಗೆ ಫೋನ್ ಮಾಡಿಸಿ "ತಾವು ಆಸ್ಪತ್ರೆಗೆ ಬರುವ ಅಗತ್ಯ ಇಲ್ಲ ಅಂತ ಲಂಕೇಶರು ಹೇಳುತ್ತಿದ್ದಾರೆ" ಎಂದು ಹೇಳಿಸಿದರು. ಆದರೆ ಅಷ್ಟು ಹೊತ್ತಿಗಾಗಲೇ ಪಟೇಲರು ತಮ್ಮ ಆಫೀಸಿನಿಂದ ಆಸ್ಪತ್ರೆಗೆ ಹೊರಟಿದ್ದರು.

ವಿ. ಸೋಮಣ್ಣನೊಂದಿಗೆ ಪಟೇಲರು ಬಂದರು. ಲಂಕೇಶ್ ಮತ್ತು ಪಟೇಲರು ಹಳೇ ಸ್ನೇಹಿತರು, ಹಿಂದೊಮ್ಮೆ ಶಿವಮೊಗ್ಗೆಯಲ್ಲಿ ಜೊತೆಯಾಗಿ ಓಡಾಡಿದ್ದವರು. ಪಟೇಲರು ಅದೂ ಇದೂ ಮಾತಾಡುತ್ತಾ "ಅಲ್ರೀ, ಈ ವಿಜ್ಞಾನಿಗಳು, ಸಂಶೋಧಕರು ಅದೆಂತಹದ್ದನ್ನೋ ಕಂಡುಹಿಡಿದಿದ್ದಾರೆ. ಆದರೆ ಡ್ರಿಂಕ್ಸ್ ತೆಗೆದುಕೊಳ್ಳುವುದರಿಂದ ಆಗುವ ಅಪಾಯವನ್ನು ತಡೆಯುವಂತಹ ಒಂದು ಔಷಧಿಯನ್ನೂ ಅವರು ಇಲ್ಲಿಯತನಕ ಕಂಡುಹಿಡಿದಿಲ್ಲ ನೋಡಿ" ಎಂದು ವಿಜ್ಞಾನಿಗಳನ್ನು ದೂರಿದರು. ಅದಕ್ಕೆ ಲಂಕೇಶರು ಕೂಡ ತಮ್ಮ ಸಮ್ಮತಿ ಸೂಚಿಸುತ್ತಾ "ಹೌದಲ್ವಾ. ಅಂತಹದ್ದೊಂದು ಪರಿಹಾರ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದರು!

ಇನ್ನೊಮ್ಮೆ ಎಂ.ಪಿ.ಪ್ರಕಾಶ್ ಅವರು ಬಂದರು. ಅದಕ್ಕೆ ಕೆಲವು ವಾರಗಳ ಮುನ್ನ ಲಂಕೇಶರು ಎಸ್.ಎಲ್. ಭೈರಪ್ಪನವರ 'ಸಾರ್ಥ' ಕಾದಂಬರಿಯ ವಿಮರ್ಶೆಯನ್ನು ಬರೆದು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆ ವಿಮರ್ಶೆಯಲ್ಲಿ "ತನ್ನ ಊರಿನಿಂದ ಕಾಶಿಗೆ ಹೊರಟ ಒಬ್ಬ 'ಸಾರ್ಥ'ವನ್ನು ಅರಿಯುವ ಉದ್ದೇಶದಿಂದ ಅಲೆದು ಬೌದ್ಧ, ಮುಸ್ಲಿಮರ ಕೆಡುಕನ್ನು ಕಂಡು ವೈದಿಕ ಧರ್ಮದ ಶ್ರೇಷ್ಠತೆಯ ಬಗ್ಗೆ ತಡೆರಹಿತ ಬೊಗಳೆ ಬಿಡುವುದನ್ನು ಮಂಡಿಸುವ ಈ 'ಕಾದಂಬರಿ'ಯಲ್ಲಿ ಕೆಲವು ರೋಗಗಳು ಎದ್ದು ಕಾಣುತ್ತವೆ.... ಪಂಚೇಂದ್ರಿಯಗಳು ನಿರ್ಜೀವವಾದಾಗ ಈ ವೈದಿಕ ಕೃತಿಗಳಲ್ಲಿ ತಿನ್ನಲು ನಾಲಗೆ ಮತ್ತು ಸಂಭೋಗಿಸಲು ಲೈಂಗಿಕಾಂಗಗಳು ಮಾತ್ರ ಮಿಸುಗಾಡುವುದು ಕಾಣುತ್ತದೆ... ಇದನ್ನು ಓದಿದವರಿಗೆ **obscene**, ಅಶ್ಲೀಲ ಏನೆಂಬುದರ ಇನ್ನೊಂದು ಅರ್ಥ ಹೊಳೆಯುತ್ತದೆ.... ಇದು **garbage**... ಆರೆಸ್ಸೆಸ್‌ಗಳ ನೀಚತನವನ್ನು ತೋರುವ ಕೃತಿ ಇದು, ಕಾದಂಬರಿಯಂತೂ ಅಲ್ಲ, ಭೈರಪ್ಪನವರ ಬರಡುತನವನ್ನು ಮಾತ್ರ ನಿಚ್ಚಳವಾಗಿ ತೋರುವ ಪುಸ್ತಕ ಇದು" ಎಂದೆಲ್ಲ ಟೀಕಿಸಿದ್ದರು. ಪ್ರಕಾಶ್ ಅವರು ನಾಟಕ, ಸಾಹಿತ್ಯ ಇತ್ಯಾದಿಗಳಲ್ಲಿ ಅಪಾರ ಆಸಕ್ತಿ ಹೊಂದಿದವರಾಗಿದ್ದರು. ಸಹಜವಾಗಿಯೇ ಅವರು ಆ ವಿಮರ್ಶೆಯನ್ನು ಓದಿದ್ದರು.




ಅವತ್ತು ಪ್ರಕಾಶರು "ಸಾರ್, ನೀವು 'ಸಾರ್ಥ' ಕಾದಂಬರಿ ಕುರಿತು ಬರೆದ ವಿಮರ್ಶೆ ತುಂಬಾ ಚೆನ್ನಾಗಿತ್ತು, ಆದರೂ ಆ ಕಾದಂಬರಿ ನೀವು ಹೇಳಿದಷ್ಟು ಕೆಟ್ಟದಾಗಿಲ್ಲ ಅನ್ನಿಸುತ್ತೆ" ಎಂದರು. ಅದನ್ನು ಕೇಳಿ ಲಂಕೇಶರಿಗೆ ಕೋಪ ಉಕ್ಕಿ ಬಂತು. "ಅಲ್ರೀ, ನನ್ನ ವಿಮರ್ಶೆ ಚೆನ್ನಾಗಿತ್ತು ಅಂತೀರಿ, ಆ ಕಾದಂಬರಿಯೂ ಚೆನ್ನಾಗಿದೆ ಅಂತೀರಿ. ಏನ್ರಿ ನಿಮ್ಮ ಮಾತಿನ ಅರ್ಥ? ಅದೊಂದು ಕಾದಂಬರಿ ಅಲ್ಲವೇ ಅಲ್ಲ, ಅದು ಅಸಹ್ಯ ಹುಟ್ಟಿಸುವ ಪುಸ್ತಕ..." ಎಂದು ಲಂಕೇಶರು ರೇಗಿದರು. ಪ್ರಕಾಶರಿಗೆ ಏನು ಹೇಳಬೇಕೆಂದು ಗೊತ್ತಾಗದೆ ವಿಷಯವನ್ನು ಬದಲಾಯಿಸಿದರು.

ಲಂಕೇಶರನ್ನು ನೋಡಲು ಬರುತ್ತಿದ್ದ ಜನ ಹಣ್ಣು ಬಿಸ್ಕತ್ ಇತ್ಯಾದಿಗಳನ್ನು ತರುತ್ತಿದ್ದರು. ಅಷ್ಟೊಂದು ಹಣ್ಣು ಬಿಸ್ಕತ್‌ಗಳನ್ನು ತಿನ್ನುವವರು ಯಾರು? ಆಗ ಲಂಕೇಶ್ ಮತ್ತು ಬೇಬಿಗೆ ಹೊಳೆದದ್ದೇ ಕೋತಿಗಳು. ವಿಶಾಲವಾಗಿದ್ದ ಸೇಂಟ್ ಜಾನ್ಸ್ ಆಸ್ಪತ್ರೆಯ ಆವರಣಕ್ಕೆ ಪ್ರತಿದಿನ ಕೋತಿಗಳ ದಂಡು ಬರುತ್ತಿದ್ದವು. ಲಂಕೇಶರಿದ್ದ ಸ್ಪೆಷಲ್ ರೂಮಿಗೆ ದೊಡ್ಡ ಬಾಲ್ಕನಿಯೂ ಇತ್ತು. ಪ್ರಾಣಿಪ್ರಿಯರಾಗಿದ್ದ ಅಪ್ಪ ಮತ್ತು ಮಗಳು ಪ್ರತಿ ಸಂಜೆ ಬಾಲ್ಕನಿಯಲ್ಲಿ ನಿಂತು ಕೋತಿಗಳಿಗೆ ಹಣ್ಣು ಮತ್ತು ಬಿಸ್ಕತ್‌ಗಳನ್ನು ತಿನ್ನಿಸಲು ಶುರುಮಾಡಿದರು. ಆದರೆ ಇದರ ಬಗ್ಗೆ ನಮಗ್ಯಾರಿಗೂ ಗೊತ್ತಿರಲಿಲ್ಲ.

ಒಂದು ದಿನ ಬೇಬಿ ಬದಲಿಗೆ ಗೌರಿ ತನ್ನ ಅಪ್ಪನೊಂದಿಗೆ ಆಸ್ಪತ್ರೆಯಲ್ಲಿದ್ದಳು. ರೂಮಿನಲ್ಲಿ ಕೂತು ಕೂತು ಅವಳಿಗೂ ಬೋರ್ ಆಗಿದ್ದರಿಂದ ಹೊರಗಿನ ಕ್ಯಾಂಟೀನಿನಲ್ಲಿ ಕಾಫಿ ಕುಡಿಯಲು ಹೋದಳು. ಹೋಗುವ ಮುನ್ನ ಅಪ್ಪನಿಗೆ ಬೇಕಿರುವುದೆಲ್ಲ ಇದೆಯಾ ಎಂದು ನೋಡಿಯೇ ಹೋಗಿದ್ದಳು. ಆದರೆ ಆಕೆ ಕಾಫಿ ಕುಡಿದು ವಾಪಸ್ ಬಂದು ನೋಡುತ್ತಾಳೆ... ಲಂಕೇಶರ ರೂಮು ಚೆಲ್ಲಾಪಿಲ್ಲಿಯಾಗಿದೆ, ಎಲ್ಲೆಡೆ ಹಣ್ಣುಗಳು ಬಿದ್ದಿವೆ, ಬಿಸ್ಕತ್ ಪ್ಯಾಕುಗಳೆಲ್ಲ ಹರಿದು ಬಿದ್ದಿವೆ... ಇದೆಲ್ಲದರ ಮಧ್ಯೆ ಲಂಕೇಶರು ಏದುಸಿರು ಬಿಡುತ್ತಾ ಮಂಚದ ಮೇಲೆ ಮಲಗಿದ್ದಾರೆ.

ಗೌರಿಗೆ ಶಾಕ್ ಆಯಿತು. "ಏನಾಯಿತು?" ಎಂದು ಕೇಳಿದಳು. ಆಗ ಲಂಕೇಶರು "ಬಾಲ್ಕನಿಯ ಬಾಗಿಲು ತೆರೆದಿತ್ತು, ಕೋತಿಗಳು ಬಂದು ಹಣ್ಣು, ಬಿಸ್ಕತ್‌ಗಳ ಮೇಲೆ ಬಿದ್ದವು. ನನ್ನಿಂದ ಅವುಗಳನ್ನು ಓಡಿಸಲಾಗಲಿಲ್ಲ..." ಎಂದರು. ತಾನೇ ಎಲ್ಲೋ ಬಾಲ್ಕನಿ ಬಾಗಿಲನ್ನು ಹಾಕುವುದನ್ನು ಮರೆತಿರಬೇಕು, ಆದ್ದರಿಂದಲೇ ಕೋತಿಗಳು ರೂಮಿಗೆ ನುಗ್ಗಿ ಅಪ್ಪನಿಗೆ ಕಷ್ಟ ಕೊಟ್ಟಿವೆ ಎಂದು ಗೌರಿ ತುಂಬಾ ಬೇಸರ ಮಾಡಿಕೊಂಡಳು. ಆಕೆಯ ಸಪ್ಪೆ ಮೋರೆಯನ್ನು ನೋಡಿ ಲಂಕೇಶರಿಗೂ ಬೇಜಾರಾಯಿತು. ಕೆಲ ಸಮಯದ ನಂತರ "ಪ್ರತಿ ದಿನ ನಾನು ಮತ್ತು ಬೇಬಿ ಕೋತಿಗಳಿಗೆ ಹಣ್ಣು ಮತ್ತು ಬಿಸ್ಕತ್ ಕೊಡುತ್ತೇವೆ. ಇವತ್ತು ಅದನ್ನೇ ನಿರೀಕ್ಷಿಸಿ ಅವು ಬಂದಿದ್ದವು. ನಾನು ಅವುಗಳಿಗೆ ತಿನ್ನಿಸಲು ಹೊರಗೆ ಹೋಗಲಿಲ್ಲ, ಆಗ ಅವು ರೂಮಿನೊಳಗೆ ನುಗ್ಗಿದವು..." ಎಂದು ವಿವರಿಸಿದರಂತೆ. ಆಗ ಗೌರಿಗೆ ಕೋಪ ಬಂದು ತನ್ನ ಅಪ್ಪ ಮತ್ತು ಬೇಬಿಯ ಬುದ್ಧಿಯನ್ನು ಟೀಕಿಸಿದಳು. "ಕೋತಿಗಳನ್ನು ನಾಯಿಗಳು ಎಂದುಕೊಂಡಿರಾ? ಅವುಗಳನ್ನು ನಿಯಂತ್ರಿಸುವುದಕ್ಕೆ ಆಗುತ್ತದಾ? ಅಕಸ್ಮಾತ್ ನಿನಗೇನಾದರೂ ಹೆಚ್ಚು ಕಡಿಮೆ ಆಗಿದ್ದರೆ...?" ಎಂದು ರೇಗಿದಳಂತೆ.



ಲಂಕೇಶ್ ಮತ್ತು ಪಟೇಲರು ಹಳೇ ಸ್ನೇಹಿತರು, ಹಿಂದೊಮ್ಮೆ ಶಿವಮೊಗ್ಗೆಯಲ್ಲಿ ಜೊತೆಯಾಗಿ ಓಡಾಡಿದ್ದವರು. ಪಟೇಲರು ಅದೂ ಇದೂ ಮಾತಾಡುತ್ತಾ "ಅಲ್ರೀ, ಈ ವಿಜ್ಞಾನಿಗಳು, ಸಂಶೋಧಕರು ಅದೆಂತಹದ್ದನ್ನೋ ಕಂಡುಹಿಡಿದಿದ್ದಾರೆ. ಆದರೆ ಡ್ರಿಂಕ್ಸ್ ತೆಗೆದುಕೊಳ್ಳುವುದರಿಂದ ಆಗುವ ಅಪಾಯವನ್ನು ತಡೆಯುವಂತಹ ಒಂದು ಔಷಧಿಯನ್ನೂ ಅವರು ಇಲ್ಲಿಯತನಕ ಕಂಡುಹಿಡಿದಿಲ್ಲ ನೋಡಿ" ಎಂದು ವಿಜ್ಞಾನಿಗಳನ್ನು ದೂರಿದರು. ಅದಕ್ಕೆ ಲಂಕೇಶರು ಕೂಡ ತಮ್ಮ ಸಮ್ಮತಿ ಸೂಚಿಸುತ್ತಾ "ಹೌದಲ್ವಾ. ಅಂತಹದ್ದೊಂದು ಪರಿಹಾರಿ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದರು!

ಲಂಕೇಶರ ಆರೋಗ್ಯ ನಿಧಾನವಾಗಿ ಸುಧಾರಿಸಿತು. ಹಲವಾರು ವಾರಗಳ ನಂತರ ವೈದ್ಯರು ಲಂಕೇಶರನ್ನು ಮನೆಗೆ ಕಳುಹಿಸಿದರು. ಆದರೆ ವೈದ್ಯರು ನೀಡಿದ್ದ ಔಷಧಿಯನ್ನು ಸರಿಯಾಗಿ ತೆಗೆದುಕೊಳ್ಳಬೇಕು ಮತ್ತು ಡ್ರಿಂಕ್ಸ್ ತೆಗೆದುಕೊಳ್ಳಬಾರದು ಎಂದು ಅವರು ಕಟ್ಟಪ್ಪಣೆ ಮಾಡಿದ್ದರು. ಲಂಕೇಶರು ಹಾಗೆಯೇ ನಡೆದುಕೊಂಡರು. ಇದಕ್ಕೂ ಮುನ್ನ ಸಿಗರೇಟ್ ಸೇದುವುದನ್ನು ಬಿಟ್ಟಿದ್ದವರು ಈಗ ಡ್ರಿಂಕ್ಸ್ ತೆಗೆದುಕೊಳ್ಳುವುದನ್ನೂ ಬಿಟ್ಟರು.

ಮನೆಗೆ ಹಿಂದಿರುಗಿದ ನಂತರ ಲಂಕೇಶರ ದಿನಚರಿ ಎಂದಿನಂತೆ ಮುಂದುವರಿಯಿತು. ಬೆಳಗ್ಗೆಯೇ ಎದ್ದು ವಾಕಿಂಗ್ ಹೋಗುತ್ತಿದ್ದರು. ಸ್ಟ್ರೋಕ್ ಆದ ನಂತರ ಪ್ರಾರಂಭವಾಗಿದ್ದ ಆಯಿಲ್ ಮಸಾಜ್ ಕೂಡ ಮುಂದುವರಿಯಿತು. ಅವರು ಮಸಾಜ್ ಮಾಡಿಸಿಕೊಳ್ಳುತ್ತಿದ್ದಾಗ ಅವರ ಪ್ರೀತಿಯ ಡಾಬರ್‌ಮ್ಯಾನ್ ನಾಯಿ ಚೆನ್ನಿ ಅವರ ಮಸಾಜ್ ಮಂಚದ ಎದುರಿಗಿದ್ದ ದಿವಾನ್ ಮೇಲೆ ಕೂತಿರುತ್ತಿತ್ತು.

ಮಸಾಜ್ ಮಾಡಿಸಿಕೊಳ್ಳುತ್ತಿದ್ದಾಗ ಲಂಕೇಶರು ಜಾನಪದ ಗೀತೆಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಅವರು ಜಾನಪದ ಗೀತೆ ಕೇಳಿಸಿಕೊಳ್ಳುವ ರೀತಿ ಹೇಗಿತ್ತೆಂದರೆ ಅದು ಅಕ್ಕಪಕ್ಕದ ಮನೆಯವರಿಗೂ ಕೇಳಿಸುತ್ತಿತ್ತು, ಅಷ್ಟು ಜೋರಾಗಿ ಲಂಕೇಶರು ಕ್ಯಾಸೆಟ್ ಪ್ಲೇಯರ್‌ಅನ್ನು ಹಾಕಿರುತ್ತಿದ್ದರು.


ಲಂಕೇಶರಿಗೆ ರತ್ನಮಾಲಾ ಪ್ರಕಾಶ್ ಮತ್ತು ಬಿ.ಆರ್. ಛಾಯಾ ಅವರ ಧ್ವನಿ ತುಂಬಾ ಇಷ್ಟವಾಗಿತ್ತು. ರತ್ನಮಾಲಾ ಹಾಡನ್ನು ಅನುಭವಿಸಿ ಹಾಡುತ್ತಿದ್ದರು. ಅವರ ಹಾಡಿನಲ್ಲಿ ಶಾಸ್ತ್ರೀಯ ಸಂಗೀತದ ಮೆರಗು ಇರುತ್ತಿತ್ತು. ಛಾಯಾ ಅವರ ಧ್ವನಿ ಮಕ್ಕಳ ಧ್ವನಿಯಂತಿತ್ತು. ಅವರೂ ತುಂಬಾ ಚೆನ್ನಾಗಿ ಹಾಡುತ್ತಿದ್ದರು. ಕಸ್ತೂರಿ ಶಂಕರ್ ಅವರು ಕಂಬಾರರ 'ಹಾರಿ ಬಂದಾನೆ ಅವ್ವ ಏರಿ ಬಂದಾನೆ' ಎಂಬ ಹಾಡನ್ನು ತುಂಬಾ ಚೆನ್ನಾಗಿ ಹಾಡಿದ್ದರು. ಇನ್ನು ಶಿವಮೊಗ್ಗ ಸುಬ್ಬಣ್ಣನವರ 'ಕಾಡು ಕುದುರೆ ಓಡಿ ಬಂದಿತ್ತಾ' ಬಗ್ಗೆ ಹೇಳುವುದೇ ಬೇಡ. ಅದನ್ನು ಅವರು ಅಷ್ಟು ಚಂದವಾಗಿ ಹಾಡಿದ್ದಾರೆ. ಇವರೆಲ್ಲರ ಹಾಡುಗಳನ್ನು ಕೇಳುತ್ತಿದ್ದ ಲಂಕೇಶರಿಗೆ ಸಿ. ಅಶ್ವಥ್ ಅವರ ಧ್ವನಿ ಮಾತ್ರ ಕಂಡರಾಗುತ್ತಿರಲಿಲ್ಲ.

ಅಂದಹಾಗೆ, ರತ್ನಮಾಲಾ, ಬಿ.ಆರ್. ಛಾಯಾ ಮತ್ತು ಕಸ್ತೂರಿ ಶಂಕರ್ ಎಲ್ಲರೂ ನನ್ನ ಅಂಗಡಿಯಲ್ಲೇ ಸೀರೆಗಳನ್ನು ಖರೀದಿಸುತ್ತಿದ್ದರು. ಅವರಲ್ಲಿ ರತ್ನಮಾಲಾ ತುಂಬಾ ನೀಟಾಗಿ ಡ್ರೆಸ್ ಮಾಡುತ್ತಿದ್ದರು. ಅವರ ಉಡುಗೆಯಲ್ಲಿ ಕ್ಲಾಸ್ ಇರುತ್ತಿತ್ತು.

****

ಡಯಾಬಿಟೀಸ್‌ನಿಂದಾಗಿ ಲಂಕೇಶರು ಒಂದು ಕಣ್ಣನ್ನು ಕಳೆದುಕೊಂಡಿದ್ದರು. ಲಿವರ್ ಸಮಸ್ಯೆಯಿಂದಾಗಿ ಅವರು ದೈಹಿಕವಾಗಿ ಕುಸಿದಿದ್ದರು. ಆದರೆ ಮಾನಸಿಕವಾಗಿ ಮತ್ತು ನೈತಿಕವಾಗಿ ಅವರಿನ್ನೂ ತುಂಬಾ ಸ್ಟ್ರಾಂಗ್ ಆಗಿದ್ದರು. ಅವರ ಬುದ್ಧಿ ಮತ್ತು ಬರಹ ಇನ್ನೂ ಹರಿತವಾಗಿದ್ದವು. ಭ್ರಷ್ಟ ರಾಜಕಾರಣಿಗಳನ್ನು ಖಂಡಿಸುತ್ತಿದ್ದರು, ದಾರಿ ತಪ್ಪಿದ ಸಾಹಿತಿಗಳನ್ನೂ ಮುಲಾಜಿಲ್ಲದೆ ಟೀಕಿಸುತ್ತಿದ್ದರು....

(ಮುಂದುವರೆಯುವುದು)



• ಇಂದಿರಾ ಲಂಕೇಶ್

ುಂದಿನ ವರಸಕ್ಕೆ ಅಂಬೇಡ್ಕರ್ ಜಯಂತಿ ದಿನ ಬಾಡ ತಿನ್ನನ

ಿದ್ದಕ್ಕಿದ್ದಂತೆ ಎಗರಿ ಬಂದ ಮಳೆ ಗಾಳಿ ಜೊತೆ ಂದು ಎದ್ರಾಬಿರ್ರಿ ಚಚ್ಚಿದ್ದೂ ಅಲ್ಲದೆ ಮರಗಳ ಗಳನ್ನು ನುಲಿದು ಬಿಸಾಡಿಹೋಗಿತ್ತು. ಊರಿಗೆ ದ ಮಳೆ ಹೊಲದ ಹತ್ತಿರ ಸುಳಿದಿರಲಿಲ್ಲ. ಇದನ್ನ ಿದ ಕಾಳಮಾವ,

ದ್ಯಾವ ಸೀಮೆ ಮಳೆನ್ನ ಇಂಗೂ ಹುಯ್ಯದೆ" ಎಂದ. ನ್ನ ತೆಂಗಿನಮರದ ಚತ್ರಿನೆ ಮುರುದಾಕ್ಯದಪ್ಪ" ಎಂದ

ಾವಿನಕಾಯಿ ಒಂದೂ ಇಲ್ಲ ಕಣೊ, ಅಂಗೆ ೋಗ್ಯವೆ" ಎಂದಳು ಜುಮ್ಮಿ.

ಾಲ ಕೆಟ್ಟಂಗೂ ಮಳೆನೂ ಕೆಟ್ಟೋಗ್ಯದೆ ಕಣ್ರೊ. ೆ ಕುಡಿಯಕ್ಕೆ ನೀರಿಲ್ಲ ಅಂತ ಬೋರಿಂಗ್ ಕ್ವರಿಯಕ್ಕೆ ಲಾರಿ ಕಳಿಸಿತ್ತು. ಈಗ ಮಳೆ ಅವುತಾರಕ್ಕೆ ಲಾರಿ ಹಿಂದುಕೋದವಂತೆ" ಉಗ್ರಿ.

ಮ್ಮದಿಗೆ ಬೆಂಕಿಬಿದ್ದಾಗಲ್ಲ "ಕಂಡ್ಯ ಭಾವಿ ದು. ಮದ್ಲೆ ತೋಡಿಕಂಡಿರಬೇಕು" ಎಂದ

ಅ ಬಿಜೆಪಿವುಕೆ ಯಾವ ಆಡಳಿತದ ಅನುಭವ ೊ ಮಾವ? ಆದ್ರು ಕುಡಿಯೋ ನೀರು ಕೊಡಿ ಬೋರ್‌ವೆಲ್ ಲಾರಿ ಕಳಿಸಿದ್ರಲ್ಲ ಹೇಳು."

ಏನು ಪ್ರಯೋಜನಾಯ್ತಲ್ಲ, ಈ ಮುಂಡೆ ೊ ಕ್ವರದಿರೊ ಮೂರು ಪಾಯಿಂಟಲ್ಲಿ ಯರಡು ದವಂತೆ. ಅಲ್ಲಿಗೆ ಪಾಯಿಂಟ್ ಮಾಡೋರು, ಿಂಗ್ ಬಾವಿ ಕೊರಿಯೋರು ಯಲ್ಲಾ ಕಳ್ರು."

ಅವುರಿಗೆ ಬೋರಿಂಗ್ ಪಾಯಿಂಟ್ ಬಿಲ್ ್ರು ಸಾಕು ಕಣೊ ಮಾವ."

ಸದಾನಂದ ಗೌಡ ಎಡೂರಪ್ಪನಿಗಿಂತ ಗಿಲ್ಲ ಕಂಡ್ಯ" ಎಂದ ಕಾಳಮಾವ.

ಪರವಾಗಿಲ್ಲ ಅಂದ್ರೆ ಹಿಂಗೇಳಬವುದು? ಎಡೂರಪ್ಪ ೈರಿಗಳಿಗೆ ನೀರು ಕೊಡ್ತಿರಲಿಲ್ಲ, ಸದಾನಂದ ಗೌಡ ್ಲರಿಗೂ ಕೊಡ್ತನೆ ಅಷ್ಟೆಯ."

ಈ ಎಡೂರಪ್ಪನ ಮ್ಯಾಲೆ ತಿರಗ ಪೊಲೀಸ್ ್ತರಿಗಾಕಿದರಂತಲ್ಲ ನಿಜವೇನ್ಲ?" ಎಂದ ಸೀರ.

"ನಿಜ ಕಣೊ. ಅವುನ ಮಾಡಿರದನ್ನಲ್ಲ ತನಿಖೆ ಮಾಡಿರೊರು ಲೋಕಲ್ ಪೊಲೀಸು. ಇನ್ನು ಮುಂದೆ ಎಡೂರಪ್ಪನ್ನ ತೀಡಬೇಕಾದ್ರೆ ಕೇಂದ್ರದ ಸಿಬಿಐನೇ ಸರಿ ಅಂತ ಹೇಳಿ ಕೈತೊಳಕಂಡ್ರಂತೆ. ಎಡೂರಪ್ಪ ಎಷ್ಟು ಹೆದರಿಬುಟ್ಟವುನೆ ಅಂದ್ರೆ ಸಮಾಧಾನ ಹೇಳಕ್ಕೆ ಬಂದೋರಿಗೆ ಅವುನೆ ಸಮಾಧಾನ ಮಾಡಿ ಕಳುಸ್ತಯಿದ್ದನಂತೆ."

"ಅಂಗರಿವುನು ಜನಾರ್ದನ ರೆಡ್ಡಿ ದಾರಿ ಹಿಡಿತನೆ ಅಂತೀಯಾ?"



"ನೋಡಬೇಕಪ್ಪ, ಸುಪ್ರೀಂಕೋರ್ಟ್‌ಗೆ ಹೋಗಿ ಗೆದ್ದು ಬಂದು ನನ್ನ ವಿರೋಧಿಗಳು ಕ್ಷಮೆ ಕೇಳಂಗೆ ಮಾಡ್ತಿನಿ ಅಂತನೆ" ಎಂದ ಉಗ್ರಿ.

"ಅವ್ರನಿಗೆ ಅಂತ ಆತ್ಮವಿಶ್ವಾಸ ಯಾಕೆ ಗೊತ್ತೆನೊ ಉಗ್ರಿ?" ಎಂದುಕೊಂಡು ವಾಟಿಸ್ಸೆ ಬಂದ.

"ಯಾಕಪ್ಪ?"

"ನಮ್ಮ ಶಂಕರ್ ಬಿದರಿ ಸುಪ್ರೀಂಕೋರ್ಟ್‌ಲ್ಲಿ ಗೆದ್ದು ಬಂದವುರೆ. ಅದೇ ತರ ನಾನು ಗೆದ್ದು ಬತ್ತಿನಿ ಅನ್ನೊ ವಿಶ್ವಾಸ ಎಡೂರಪ್ಪನಿಗದೆ."

"ಶಂಕರ ಬಿದ್ರಿ ಯಾವ ಕೇಸು ಗೆದ್ದಾ?"

"ಅವುನ್ನಾ ಸೀನಿಯಾರಿಟಿ ಓವರ್ ಟೇಕ್ ಮಾಡಿ ಪೊಲೀಸ್ ಕಮ್ಮಿಷನರ್ ಮಾಡಿದ್ರು ದೊಡಪ್ಪ, ಅನ್ಯಾಯಾದೋನು ಹೈಕೋರ್ಟಿಗೋಗಿದ್ದ. ಗೆದ್ದ. ಆಗ ಈ ಬಿದರಿ ಸುಪ್ರೀಂಕೋರ್ಟಿಗೋದ. ಆ ಸುಪ್ರೀಂಕೋರ್ಟ್ ಸರ್ಕಾರ ತನ್ನ ನಂಬಿಕಸ್ತರನ್ನೇ ಪೊಲೀಸ್ ಕಮೀಷನರ್ ಮಾಡ್ತದೆ. ಅಂಗಾಗಿ ಶಂಕರ್ ಬಿದ್ರಿ ನೇಮಕ ಸರಿ ಅಂದದೆ."

"ಅದ್ಯಾವ ಸೀಮೆ ಸುಪ್ರೀಮ್ ಕೋರ್ಟು?"

"ನನಿಗೂ ಅದೇ ಡವುಟು ಕಣೊ ಉಗ್ರಿ. ಮುಂದೆ ಬರೊ ಕ್ಯಟ್ಟ ಸರ್ಕಾರಗಳು ತಮ್ಮ ತಮ್ಮ ಜಾತಿ ಜನಗಳು ಅಥವಾ ನಾಯಿನಿಷ್ಠೆ ಅಧಿಕಾರಿಗಳ ತಂದು ಕೂರಿಸಿಗಂಡ್ರೆ ರಾಜ್ಯದ ಕಾನೂನು ಉಳದತೇನೊ?"

"ಅಲ್ಲಾ, ಹೈಕೋರ್ಟ್ ಎತ್ತಿಡದವಾ ಸುಪ್ರೀಂ ಕೋರ್ಟ್ ವಜಾ ಮಾಡ್ತದೆ. ಸುಪ್ರೀಂಕೋರ್ಟ್ ಎತ್ತಿಡದವಾ ಹೈಕೋರ್ಟು ವಜಾ ಮಾಡಿರತದೆ. ಹಿಂಗಾದರ‍್ಯಂಗೇ?"

"ಎಮ್ಮೆಲ್ಲೆಗಳ ಕೇಸು ಅಂಗೆ ಆಯ್ತಲ್ಲಾ" ಎಂದಳು ಜುಮ್ಮಿ.

"ನೋಡ್ರಪ್ಪ ನಮ್ಮ ಕೋರ್ಟ್‌ಗಳ ನಡವಳಿಕೆ ನಮ್ಮ ಜುಮ್ಮಕ್ಕನಿಗೂ ತಿಳಿಯಂಗಾಯ್ತು. ರಿಯಲಿ ಇಟೀಸ್ ಸೇಮ್ ಟು ಜುಡಿಸಿಯರಿ."

"ಕೋರ್ಟು, ಕಚೇರಿ ಬಗ್ಗೆ ತಿಳಕಂಡು ಮಾತಾಡಬೇಕು ಕಂಡ್ಯ. ಅಂಗ್ಯಲ್ಲ ತಪ್ಪು ತೀರ್ಮಾನ ಕೊಡಕ್ಕಾದತೆ" ಎಂದ ಕಾಳಮಾವ.

"ಅಂಬೇಡಕರಗೆ ಸಂವಿಧಾನ ಬರದುಕೊಡು ಅಂದಾಗ್ಲೆ ನಮ್ಮ ದೇಸಕೆ ಕೋರ್ಟು ಕಛೇರಿ ಕಾನೂನುಗಳನೂ ಬರದುಕೊಡು ಅನ್ನಬೇಕಾಗಿತ್ತು. ಈಗ ನಾವು ಫಾಲೊ ಮಾಡ್ತಾಯಿರೊ ಕಾನೂನು ಇಂಗ್ಲಿಷ್‌ನೋರ್ ಲಾ ಬುಕ್ಕಂತೆ."

"ಅಂಬೇಡ್ಕರರು ಅಂದೇಟಿಗೆ ನ್ಯನಪಾಯ್ತು ಕಂಡ್ಯ. ಅವತ್ತು ಶಿವನಂಜಣ್ಣ ಬಂದಿದ್ದ, ಬಾಡ ತರನ ಅಂ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಹೋಗಿದ್ದೆ. ಸರ್ಕಾರವೆ ಅವತ್ತು ಮಾಂಸ ಮಾರದಂಗೆ ಕಟ್ಟು ಮಾಡಿತ್ತಂತೆ. ಅಂಬೇಡಕರ ಬಾಡ ತಿಂತಿರಲಿಲವೇನ್ಲ?" ಎಂದಳು ಜುಮ್ಮಿ.

"ನೋಡಕ್ಕ, ಈ ಬಿಜೆಪಿ ನನ್ನ ಮಗನವ ಹಿಂಗೆ ಬುಟ್ರೆ ಕುವೆಂಪು ಜನ್ಮದಿನವೂ ಬಾಡ ಮಾರದಂಗೆ ಮಾಡ್ತರೆ. ಯಂಗೆ ಬಸವಣ್ಣನ ಕೊಂದೋರೆ ಅವುನ ಫೋಟ ಮನೆಲಿ ಮಡಿಕೊಂಡು ಅಸ್ಪೃಶ್ಯತೆ ಆಚರಣೆ ಮಾಡ್ತರೊ ಅದೇ ತರ ಅಂಬೇಡ್ಕರ್‌ಗೂ ಅವುಮಾನ ಮಾಡ್ತರೆ ಈ ಜನ. ನಾವು ಎಚ್ಚೆತ್ತುಗಂಡು ನಮ್ಮ ಆಚರಣೆ ಮಾಡದೆಯಿದ್ರೆ ಈ ಹಲಾಲ್‌ಟೋಪಿ ಜನ ಭಾರಿ ಅನಾಹುತ ಮಾಡ್ತಾರೆ ಕಣಕ್ಕ" ಎಂದ ವಾಟಿಸ್ಸೆ.


"ಸುಮ್ಮನಿರೆ, ಮುಂದಿನ ವರಸಕ್ಕೆ ಅಂಬೇಡ್ಕರ್ ಜಯಂತಿ ದಿನ ಮರಿಕೂದು ಪಾಲಾಯ್ಕಂಡು ತಿನ್ನನ. ಅದ್ಯಾವನು ಬತ್ತನೊ ಬರ್ಲಿ."

"ಬಂದ್ರು ತಾನೆ ಏನು ಮಾಡ್ತರೊ? ಒಂದು ಸೌಟು ಬಾಡು, ಒಂದು ಮುದ್ದೆ ಹಿಟ್ಟು, ಒಂದಿಡಿ ಅನ್ನ ತಿಂದು ಹೋಯ್ತವೆ. ಯಾಕೆ ಅಂದ್ರೆ ನಮ್ಮ ಜುಮ್ಮಕ್ಕ ಮಾಡೋ ಬಾಡಿನ ಸಾರಿಗೆ ಯಂಥಾ ಸಸ್ಯ ಹಾರಿಗೂ ಜಾತಿಗೆಡೊಸೊ ಶಕ್ತಿ ಅದೆ" ಎಂದು ವಾಟಿಸ್ಸೆ ನಕ್ಕ.

ಪ್ರತಿಮಾ' ನಾಟಕ ▶▶▶

ಡಾ. ಎಂ. ಚಿದಾನಂದಮೂರ್ತಿಯವರು ತಮ್ಮ ಗುರು ತೀ.ನಂ.ಶ್ರೀ. ಕುರಿತು ಒಂದು ್ರೋಲೆ ಕಳಿಸಿದ್ದಾರೆ. ತೀನಂಶ್ರೀ ದೊಡ್ಡ ವಿದ್ವಾಂಸರು. ಕವಿ, ಭಾಷಾಶಾಸ್ತ್ರಜ್ಞ, ಮೀಮಾಂಸಕಾರ, ಮ ಪ್ರಾಧ್ಯಾಪಕ. ಈ ಬಗ್ಗೆ ಎರಡು ಮಾತಿಲ್ಲ. ಆದರೆ ಚಿದಾನಂದಮೂರ್ತಿ ತರಹದವರು ರಿಸರದಲ್ಲಿ ಹೇಗಾಗಿದ್ದಾರೆ ಎಂದರೆ ಅವರ ವರ್ತನೆಗಳಿಗೆ ರಾಜಕಾರಣಿಗಳ ಶೈಲಿ ಬಂದುಬಿಟ್ಟಿದೆ. ಾಣಿಕ ಮನುಷ್ಯನಾದವನು ತಾನು ನಂಬುವ, ಮೆಚ್ಚುವ, ಹಾಡಿ ಹೊಗಳುವ ಮೌಲ್ಯಗಳಿಗೂ ಜನಿಕ ಜೀವನದಲ್ಲಿ ಅವರು ಸಾಧ್ಯಗೊಳಿಸಬೇಕೆಂದು ಉದ್ದೇಶಿಸುವುದಕ್ಕೂ ಅಷ್ಟು ವ್ಯತ್ಯಾಸ ಾರದು ಚಿದಾನಂದಮೂರ್ತಿಗಳು ಮೆಚ್ಚುವ ಶರಣರನ್ನೇ ತೆಗೆದುಕೊಳ್ಳಿ. ಪ್ರಚಂಡ ವಿದ್ವಾಂಸರೂ ಳೂ ದಾರ್ಶನಿಕರೂ ಆಗಿದ್ದ ಅವರು ಎಂದೂ ಮೂರ್ತಿ, ಸ್ಮಾರಕ ಇತ್ಯಾದಿಗಳನ್ನು ಇಷ್ಟಪಡಲಿಲ್ಲ. ಚಿದಾನಂದಮೂರ್ತಿಯವರು ತಮ್ಮ ಗೆಳೆಯರೊಂದಿಗೆ ಬರೆದ ಸುತ್ತೋಲೆಯಲ್ಲಿ ಹೀಗೆ ುತ್ತಾರೆ:

"ತೀನಂಶ್ರೀಯವರ ನೆನಪು ಇಂದಿನ ಮತ್ತು ಮುಂದಿನ ೆಗಳಿಗೆ ಒಂದು ಸ್ಫೂರ್ತಿಯಾಗಲಿ ಎಂಬ ಉದ್ದೇಶದಿಂದ ಳೂರಿನ ಒಂದು ಸೂಕ್ತ ಸಾರ್ವಜನಿಕ ಜಾಗದಲ್ಲಿ ಅವರ ಮಟ್ಟದ (ಬಸ್ಟ್) ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ಜನೆ ಹಾಕಿಕೊಂಡು ಕಾರ್ಯಪ್ರವೃತ್ತರಾಗಿದ್ದೇವೆ. ಆ ಸಿಗೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗುವ ಕ್ಷೆ ಇದೆ. ಅವರ ಅಭಿಮಾನಿಗಳಾದ ತಾವು ಉದಾರವಾದ ಕಾಣಿಕೆಯನ್ನು ನೀಡಿ ಮೇಲ್ಕಂಡ ಪುಣ್ಯ ಕಾರ್ಯದಲ್ಲಿ ಗಳಾಗಬೇಕೆಂದು ಕೋರುತ್ತೇವೆ."



ಇದಕ್ಕೆ ನಾನು ಬರೆದ ಉತ್ತರ ಹೀಗಿದೆ:

ಪ್ರಿಯ ಶ್ರೀ ಚಿದಾನಂದಮೂರ್ತಿಯವರೆ,


ನೀವು ಬೆಂಗಳೂರಿನ ಒಂದು 'ಸೂಕ್ತ ಸಾರ್ವಜನಿಕ ಜಾಗದಲ್ಲಿ' ತೀನಂಶ್ರೀಯವರ ಕಂಚಿನ ಮೆ ನಿಲ್ಲಿಸುವ ಬಗ್ಗೆ ಓದಿದೆ. ಉತ್ತಮ ಕಂಚಿನ ಪ್ರತಿಮೆ ಒಂದು ಲಕ್ಷದಲ್ಲಿ ಆಗುವುದಿಲ್ಲ. ್ರ ತೃತೀಯ ದರ್ಜೆಯ ಕಂಚಿನ ಪ್ರತಿಮೆಯೊಂದನ್ನು ನಿಲ್ಲಿಸಿ ಭಾಷಣ ಬಿಗಿದು ಕೃತಾರ್ಥರಾಗಲಿ ಅನ್ನಿಸುತ್ತದೆ. ಈ ತರಹದ ಕಂಚಿನ, ಕಲ್ಲಿನ, ಕಬ್ಬಿಣದ, ಮರದ ಪ್ರತಿಮೆಯ ಯೋಚನೆ ಬರು ಪೂಜಾರಿ ಮಹಾಶಯರಿಗೆ; ಅಕ್ಷರ, ನಾದ, ವರ್ಣ ಇತ್ಯಾದಿ ಯಾವುದರಲ್ಲೂ ಆಸಕ್ತಿ ಇಲ್ಲದವರಿಗೆ. ್ರ ಸದಾ ಜಪಿಸಿಕೊಳ್ಳುವ ಶರಣರು ಯಾವುದೇ ಸ್ಮಾರಕ, ಪ್ರತಿಮೆ ಇತ್ಯಾದಿಯನ್ನು ಒಪ್ಪಲಿಲ್ಲ. ತೀನಂಶ್ರೀ ಹೆಸರಲ್ಲಿ ಅತ್ಯುತ್ತಮ ಪುಸ್ತಕ ಭಂಡಾರ, ಸಂಶೋಧನಾ ಕೇಂದ್ರ ಆದರೆ ಒಳ್ಳೆಯದೆಂದು ನನ್ನ ಅನ್ನಿಸಿಕೆ. ನಿಮ್ಮಂಥ ವಿದ್ವಾಂಸರಿಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಳೆದ ಹತ್ತಾರು ದಿಂದ ಹೊಸ ಪುಸ್ತಕಗಳು ಸೇರಿಲ್ಲ ಎನ್ನುವುದು ಬೇಸರ ಕೂಡ ಹುಟ್ಟಿಸುವುದಿಲ್ಲ. ಇದು ್ಯ, ಅಚ್ಚರಿಯ ವಿಷಯ.

ಅದೇನೇ ಇರಲಿ. ಈ ನನ್ನ ಅಭಿಪ್ರಾಯದೊಂದಿಗೆ ನಾನು ಸ್ವಲ್ಪ ಹಣ ಕಳಿಸಿದ್ದೇನೆ.

ಂದಿಗೆ,

-ಇತಿ,

ಪಿ. ಲಂಕೇಶ್



ಮರಸೋಳಿ ▶▶▶


'ಮರಸೋಳಿ' ಎನ್ನುವುದು ಕರುಣಾನಿಧಿಯವರ ಪಕ್ಷದ ಶಂಖ. ಈ ಪತ್ರಿಕೆಯ ಸಂಪಾದಕ ಮಾರನ್. ಕೇಂದ್ರದಲ್ಲಿ ದೇವೇಗೌಡರ ಮಂತ್ರಿಯಾಗಿದ್ದ ಮಾರನ್‌ನ ಪೂರ್ಣ ಹೆಸರು ಮುರಸೋಳಿ ಮಾರನ್. ಕರುಣಾನಿಧಿಗೆ ತನ್ನ ಪಕ್ಷ, ಆ ಪಕ್ಷದ ಪತ್ರಿಕೆ ಎಲ್ಲವೂ ಸ್ವಂತದ್ದು. ಈಗ ಮುಖ್ಯಮಂತ್ರಿಯಾಗಿರುವ ಕರುಣಾನಿಧಿ ತಮಿಳುನಾಡಿನ ಹೈಸ್ಕೂಲುಗಳೆಲ್ಲ ಈ 'ಮರಸೋಳಿ'ಯನ್ನು ದುಡ್ಡು ಕೊಟ್ಟು ತರಿಸಿಕೊಳ್ಳಬೇಕೆಂದು ಆಜ್ಞೆ ಹೊರಡಿಸಿದ್ದಾರೆ.

ಸರ್ಕಾರ ಒಂದು ಪತ್ರಿಕೆಯನ್ನು ಮಾಡಿ ತನ್ನ ಇಲಾಖೆಗಳಿಗೆ ಸಪ್ಲೈ ಮಾಡುವುದೇ ತಪ್ಪು; ಯಾಕೆಂದರೆ ಸರ್ಕಾರಿ ಪತ್ರಿಕೆಗಳೆಂದರೆ ಸುಳ್ಳು ಹೇಳುವ ಪತ್ರಿಕೆಗಳು ಎಂದು ಅರ್ಥ. ವಿಷಯ ಹೀಗಿರುವಲ್ಲಿ ತನ್ನ ಪಕ್ಷದ 'ಮರಸೋಳಿ'ಯನ್ನು ಹೈಸ್ಕೂಲು ವಿದ್ಯಾರ್ಥಿಗಳ ಮೇಲೆ ಹೇರುವವರ ತಲೆ ಎಷ್ಟು ಕೆಟ್ಟಿರಬೇಕು?

ಕರುಣಾನಿಧಿ ಒಬ್ಬ ತರುಣನಾಗಿದ್ದರೆ ಅಥವಾ ಯಾವುನೋ ಅಪಾಪೋಲಿಯಾಗಿದ್ದರೆ ಇದನ್ನೆಲ್ಲ ಕ್ಷಮಿಸಬಹುದಿತ್ತು. ಎಪ್ಪತ್ತು ವರ್ಷ ಬದುಕಿದ್ದು ತಮ್ಮ ಬಹುಪಾಲು ವರ್ಷಗಳನ್ನು ಪ್ರಜಾಪ್ರಭುತ್ವದಲ್ಲಿ ಕಳೆದಿರುವ ಈ ಕರುಣಾನಿಧಿ ಹೀಗೆ ಪಕ್ಷದ ಪತ್ರಿಕೆಯನ್ನು ಮಕ್ಕಳ ಮೇಲೆ ಹೇರುವುದು ತೋರಿಸುವುದು ಒಂದೇ ಅಂಶವನ್ನು- ಈ ಕರುಣಾನಿಧಿ ಯಾವ ಸ್ಥಾನಕ್ಕೂ ಅರ್ಹನಲ್ಲದ ದುಷ್ಟ. ಈತನಂಥವರು ತಮಿಳುನಾಡನ್ನು ಆಳುವವರೆಗೆ ಜನರ ಬವಣೆ ಕಮ್ಮಿಯಾಗುವುದಿಲ್ಲ.

ಹಬ್ಬ ಬಂತು ಹಬ್ಬ ▶▶▶

ನೀವು ಈಗ ಬರೆಯುತ್ತಿರುವ ಕತೆ ಅಥವಾ ಕಾದಂಬರಿ ಚೆನ್ನಾಗಿ ರೂಪುಗೊಳ್ಳುತ್ತಿದೆ ಅನ್ನುವುದು ನಿಮಗೆ ಹೇಗೆ ಗೊತ್ತಾಗುತ್ತದೆ? ನನ್ನಲ್ಲಿ ಅದಕ್ಕೆ ಒಂದು ಪರೀಕ್ಷೆ ಇದೆ. ಇವತ್ತು ಸ್ವಲ್ಪ ಬರೆದು ನಾಳೆಯ ಕಂತು ಬರೆಯುವುದಕ್ಕೆ ಯೋಚಿಸುತ್ತಿದ್ದೇನೆ ಅಂತಿಟ್ಟುಕೊಳ್ಳಿ. ರಾತ್ರಿಯೇ ಒಂದು ಬಗೆಯ ನಿರೀಕ್ಷೆ ಇರುತ್ತದೆ. ಬೆಳಿಗ್ಗೆ ಎದ್ದಾಗ ಬರೆಯಲಿರುವುದನ್ನು ನೆನೆದು ಸಂತೋಷವಾಗುತ್ತದೆ. ಬೇರೆ ಯಾವ ಕೆಲಸವೂ ಹಿಡಿಸುವುದಿಲ್ಲ. ಹರಟೆ, ಲೇವಾದೇವಿ, ಭಾಷಣ ಮುಂತಾದ ಯಾವುದರಲ್ಲೂ ಅಷ್ಟು ಆಸಕ್ತಿ ಇರುವುದಿಲ್ಲ.



ಬರೆಯುವುದು ಮಾತಿನಲ್ಲಿ ವಾಸ್ತವವನ್ನು ಸೃಷ್ಟಿಸುವ ಕೆಲಸ. ಮಾತುಗಳಿಗೂ ಅನುಭವಕ್ಕೂ ಎಲ್ಲಿಯ ಸಂಬಂಧ? ಎತ್ತಣ ಮಾಮರ, ಎತ್ತಣ ಕೋಗಿಲೆ? ರಾಮ ಎನ್ನುವುದರಲ್ಲಿ ರಾ ಮತ್ತು ಮ ಸೇರಿಕೊಂಡು ರಾಮನ ಚಿತ್ರ ಬರುತ್ತದೆ. ಒಬ್ಬನಿಗೆ ಇದು ಅವರೂರಿನ ರಾಮ, ಇನ್ನೊಬ್ಬನಿಗೆ ರಾಮಾಯಣದ ರಾಮ. ಅವೆರಡು ಅಕ್ಷರಗಳನ್ನು ಬೇರ್ಪಡಿಸಿದರೆ ಏನೂ ಇಲ್ಲ. ಆದ್ದರಿಂದ ಸಾಹಿತಿಯಾದವನು ಮಾತುಗಳನ್ನು ಬಳಸುವ ಕಲೆ ಕಲಿಯಬೇಕು. ಮಾತಿನ ಪರಂಪರೆಯನ್ನು, ಮಾತಿನ ವಿವಿಧ ಮಿಶ್ರಣಗಳನ್ನು ಅರಿತಿರಬೇಕು. ಆದ್ದರಿಂದ ಏನನ್ನಾದರೂ ಬರೆಯುತ್ತಿದ್ದಾಗ ನಾನು ವಿವಿಧ ಬಗೆಯ ಬರವಣಿಗೆಗಳನ್ನು ಹುಚ್ಚು ಹಿಡಿದಂತೆ ಓದುತ್ತಿರುತ್ತೇನೆ. ಆ ಮಾತು, ನನ್ನ ಮಾತು ಸೇರಿ ಮನಸ್ಸಿನಲ್ಲಿ ನಾನು ಬರೆಯಬೇಕೆಂಬುದು ಒಂದು ದೇಹ ಪಡೆಯುತ್ತದೆ.



-ಬರೆದ ಮೇಲೆ ಅದೆಲ್ಲ ಬೇರೆಯವರದು. ಅಲ್ಲಿಯವರೆಗೆ ಕಾತರ, ಖುಷಿ, ಕುತೂಹಲ. 'ಬೆಳಗು' ಎಂದು ಬೇಂದ್ರೆ ಹೇಳುವುದಕ್ಕೂ ಮಿಕ್ಕವರು ಹೇಳುವುದಕ್ಕೂ ಎಷ್ಟು ವ್ಯತ್ಯಾಸ!

-ಏಪ್ರಿಲ್ 30, 1997

ನಗುವವರ ಗಡಿಪಾರು ಮಾಡಿ!

ಭೇಷ್ ದೀದಿ ಭೇಷ್!

ದೀದಿ ಎಂದರೆ ನಿಮ್ಮ ತರಹ ಇರಬೇಕು.


ನೀವು ನಡೆದುಬಂದ ದಾರಿಯೇ ಹಾಗಿದೆ.

ಬೀದಿ ಹೋರಾಟಗಾರ್ತಿಯಾಗಿ ಯಶಸ್ಸು ಗಳಿಸಿದಿರಿ. ಜನರಿಗೆ ಸ್ಫೂರ್ತಿ ತುಂಬಿದಿರಿ. ಸಮಸ್ಯೆ ಎದುರಿಸುವ ಕೆಚ್ಚು ನೀಡಿದಿರಿ. ಹೋರಾಟಕ್ಕೆ ...ವುಗೊಳಿಸಿದಿರಿ. ಅದನ್ನು ನಿಯಂತ್ರಿಸುವ ... ...ನ್ನು ಪಡೆದಿರಿ. ಯಶಸ್ಸನ್ನು ಕಂಡಿರಿ. ... ...ಲಯದ ಎತ್ತರಕ್ಕೆ ಬೆಳೆದು ... ನಿಮ್ಮ ನಡೆಯೇ ನಮಗೆ ಆದರ್ಶ. ಇಂತಹ ನಿಮ್ಮ ವ್ಯಕ್ತಿತ್ವವನ್ನು ಗುರುತಿಸಲು ವಿಶಾಲ ಹೃದಯ ಇರಬೇಕು. 'ಟೈಮ್ಸ್' ಪತ್ರಿಕೆಗೆ ಅದು ಇತ್ತು. ವಿಶ್ವದ ನೂರು ಪ್ರಭಾವಿ ವ್ಯಕ್ತಿಗಳಲ್ಲಿ ನೀವೂ ಒಬ್ಬರೆಂದು ಅದು ಸಾರಿತು!

ಟೈಮ್ಸ್ ಅಂತಹ ಟೈಮ್ಸ್ ಪತ್ರಿಕೆಯೇ ಹೀಗೆ ಹೇಳಬೇಕೆಂದರೆ ಅದೇನು ಕಡಿಮೆ ಸಾಧನೆಯೇ?

ನಿಮ್ಮ ಈ ಏಳಿಗೆಯನ್ನು ಕಂಡು ಹೆಮ್ಮೆ ಪಡಬೇಕಾಗಿತ್ತು. ಅಸೂಯಾಪರರು ಮೆಚ್ಚಿಕೊಳ್ಳಲಿಲ್ಲ. ನೀವು ಹೀಗೆಯೇ 'ಪ್ರಕಾಶಿ'ಸುತ್ತಿದ್ದರೆ ಮತ್ತೆ ಅಧಿಕಾರಕ್ಕೆ ನೀವೇ ಬರಬಹುದು; ನಾವು ಶಾಶ್ವತವಾಗಿ ವಿರೋಧ ಪಕ್ಷದಲ್ಲಿಯೇ ಇರಬೇಕಾಗಬಹುದು ಎಂಬ ಆತಂಕ ಕೆಲವರಿಗೆ. ಅಪಪ್ರಚಾರ ಮಾಡಲು ಪ್ರಾರಂಭಿಸಿದರು. ಇದಕ್ಕೆ ಬಳಸಿಕೊಂಡದ್ದಾದರೂ ಎಂತಹವುಗಳನ್ನು?

ಆಮ್ ಆದ್ಮಿಗಳ ಹಿತವೇ ನಿಮ್ಮ ಗುರಿಯಾಗಿತ್ತು. ನಿಮ್ಮ ಪಕ್ಷದವನೇ ರೈಲ್ವೆ ಮಂತ್ರಿಯಾಗಿದ್ದ. ಆಯವ್ಯಯ ಮಂಡಿಸುವ ಅವಕಾಶ ಸಿಕ್ಕಿತು. ಅದನ್ನ ದುರುಪಯೋಗಪಡಿಸಿಕೊಂಡ. ಮಂತ್ರಿ ದಿನೇಶ್ ತ್ರಿವೇದಿ ರೈಲು ಪ್ರಯಾಣ ದರ ಏರಿಸಿಬಿಟ್ಟ! ನೀವು ಬಡವರ ಉಸಿರಾಗಿದ್ದವರು. ಆ ಮಂತ್ರಿ ಉಸಿರುಗಟ್ಟಿಸುವ ವಾತಾವರಣ ನಿರ್ಮಾಣ ಮಾಡಿದ್ದ. ಸಹಜವಾಗಿಯೇ ನೀವು ಕೋಪಗೊಂಡಿರಿ. ಅವನನ್ನು ಕಿತ್ತೆಸೆದಿರಿ. ಮುಕುಲ್ ರಾಯ್ ನೇಮಿಸಿದಿರಿ. ಅವನು ನಿಮ್ಮ ಮನದಾಳದ ಆಸೆಯನ್ನು ಅರಿತಿದ್ದವನು. ಏರಿಸಿದ್ದ ಪ್ರಯಾಣದರ ಹಿಂತೆಗೆದುಕೊಂಡ. ಜನ, ನಿರಾಳವಾಗಿ ಉಸಿರಾಡುವಂತಾಯಿತು!




ಬಡವರ ಪರವಾದ ನಿಲುವು ಅಲ್ಲವೆ ಇದು? ಉಹುಂ. ಅಲ್ಲವಂತೆ. ಕುತಂತ್ರಿಗಳು ಈ ಅವಕಾಶವನ್ನು ದುರುಪಯೋಗಕ್ಕೆ ಬಳಸಿಕೊಂಡರು. ವ್ಯಂಗ್ಯ ಚಿತ್ರ ರೂಪಿಸಿದರು. ದೊಡ್ಡವರ ಹೆಸರಿದ್ದರೆ ತಮ್ಮ ಸಣ್ಣತನ ಬಯಲಾಗಲಾರದು ಎಂದೋ ಏನೋ ಸತ್ಯಜಿತ್ ರೇ ಅವರ 'ಸೋನಾರ್ ಕೆಲ್ಲ' ಸಿನಿಮಾ ಮರೆಯಲ್ಲಿ ತಮ್ಮ ವಿಕೃತಿಯನ್ನು ಕಾರಿಕೊಂಡರು.

ರೇ ಚಿತ್ರದ ಕತೆ ಹೀಗಿದೆ.

ಮುಕುಲ್ ಎಂಬ ಹುಡುಗ. ಅವನಿಗೆ ಪೂರ್ವಜನ್ಮದ ಸ್ಮರಣೆ ಕಾಡುತಿತ್ತಂತೆ. ಇದು ಒಬ್ಬ ಮನಶ್ಶಾಸ್ತ್ರಜ್ಞನ ಗಮನಕ್ಕೆ ಬಂತಂತೆ. ಅವನನ್ನು ರಾಜಾಸ್ಥಾನಕ್ಕೆ ಕರೆದುಕೊಂಡು ಹೋದರಂತೆ. ಅಲ್ಲಿ ಇಬ್ಬರು ವಂಚಕರು ಅವರಿಗೆ ಪರಿಚಯ ಆದರಂತೆ. ಪರಿಚಯ ಸ್ನೇಹಕ್ಕೆ ತಿರುಗಿತಂತೆ. ಅವರಿಬ್ಬರ ಹುನ್ನಾರ ಏನು ಅಂದರೆ ಹೇಗಿದ್ದರೂ ಹುಡುಗನಿಗೆ ಹಿಂದಿನ ಜನ್ಮದ ನೆನಪು ಇದೆ; ಅವನ ನೆರವಿನಿಂದ 'ಗುಪ್ತನಿಧಿ' ಇರುವ ಸ್ಥಳ ತಿಳಿದುಕೊಳ್ಳಬೇಕು ಅನ್ನೋದು. ಆದರೆ ಈ ಮನಶ್ಶಾಸ್ತ್ರಜ್ಞ ಅಡ್ಡಿ ಇದ್ದ. ಅದಕ್ಕೆ ಅವನನ್ನು ಉಪಾಯವಾಗಿ ಬೆಟ್ಟದ ಮೇಲಕ್ಕೆ ಕರೆದುಕೊಂಡು ಹೋಗಿ ಅಲ್ಲಿಂದ ಕೆಳಕ್ಕೆ ತಳ್ಳಿದರಂತೆ. ಬಡಪಾಯಿ ಹುಡುಗ 'ಅವರೆಲ್ಲಿ' ಅಂತ ಕೇಳಿದಾಗ ವಂಚಕರು 'ಅದೃಶ್ಯರಾದರು' ಎಂದರಂತೆ. ಅಂದಹಾಗೆ 'ಸೋನಾರ್ ಕೆಲ್ಲ' ಅಂದರೆ 'ಚಿನ್ನದ ಕೋಟೆ' ಅಂತ ಅರ್ಥ ಅಂತೆ.

ಸಿನಿಮಾದಲ್ಲಿ ವಂಚಕರು ಹಾಗೆ ಮಾಡಿದರಾ, ಇಲ್ಲಿ ವ್ಯಂಗ್ಯಚಿತ್ರದಲ್ಲಿ ಅಸೂಯಾಪರ ಜನ ಏನು ಮಾಡಿದಾರೆ... ಮೂರು ಚಿತ್ರ ಬರೆದಿದ್ದಾರೆ.

ಮೊದಲ ಚಿತ್ರದಲ್ಲಿ ದೀದಿ ಹಾಗೂ ಮುಕುಲ್ ರಾಯ್ ನಿಂತಿದ್ದಾರೆ. ಸಮೀಪದಲ್ಲೇ ಇರುವ ರೈಲ್ವೆ ಲೋಗೋ ತೋರಿಸುತ್ತಾ ದೀದಿ ಕೇಳುತ್ತಾರೆ- 'ಕಾಣುತ್ತಿದ್ದೆಯೇ ಮುಕುಲ್, ಚಿನ್ನದ ಕೋಟೆ?' ಮುಕುಲ್ ಆಲೋಚನಾಗುಳ್ಳೆ ಅದರತ್ತ ಹಾಯುತ್ತಿದೆ.



ಎಚ್.ಎಲ್. ಕೇಶವಮೂರ್ತಿ

ಅಣಕ

ಸಿನಿಮಾದಲ್ಲಿ ಮುಕುಲ್‌ಗೆ ಹಿಂದಿನ ನೆನಪು ಕಾಡುತ್... ಇವನಿಗೂ ಹಾಗೇ ಆಗುತ್ತೆ. ರೈಲು ಲೋಗೋ ಜಾಗದ... ದಿನೇಶ್ ತ್ರಿವೇದಿ ಕಾಣಿಸುತ್ತಾನೆ. ಮುಕುಲ್ ಉದ್ಗರಿಸುತ್ತಾ... 'ಅವನು ಕೆಟ್ಟ ಮನುಷ್ಯ'!!

ಮೂರನೆಯ ಚಿತ್ರ. ಸಿನಿಮಾದಲ್ಲಿ ಮುಕುಲ್ 'ಅವರೆ... ಅಂದಾಗ 'ಅದೃಶ್ಯ ಆದ' ಅಂತಾರಲ್ಲ ವಂಚಕರು ಹಾಗೆ... ಈ ಚಿತ್ರದಲ್ಲಿ ಮಮತಾ ದೀದಿ 'ಕೆಟ್ಟ ಮನುಷ್ಯ ಅದ... ಆಗು' ಅಂತಾರೆ! ಹಾಗೇ ಕೆಟ್ಟ ಮನುಷ್ಯ ಅದೃಶ್ಯ ಆಗುತ್ತಾ...

ಅಲ್ಲಿಗೇನಾಯಿತು? ದೀದಿ ವಂಚಕಿ ಅಂ... ಹಾಗಾಯಿತು! ಹೆಣ್ಣು ಮಗಳೊಬ್ಬಳ ಮರ್ಯಾ... ಹರಾಜಾಗಿತ್ತು!

ಇಂತಹ ವ್ಯಂಗ್ಯ ಚಿತ್ರ ಎಂಬ ಕೊಳಕನ್ನು ಕಂ... ಯಾರೇ ಆದರೂ ಅದನ್ನು ಅಲ್ಲೇ ನಾಶ ಮಾಡಬೇಕಿ... ವಿಕೃತ ಮನಸ್ಸಿನ ಒಬ್ಬನಿಗೆ ಹಾಗನ್ನಿಸಲಿಲ್ಲ. ಅದು ನ... ತರುವ ಸಂಗತಿ ಆಯಿತು. ಅವನ ಜೊತೆಗೆ ಒ... ಮುದಿಯನೂ ಸೇರಿಕೊಂಡನಂತೆ. ಹೆಣ್ಣಿನ ಘನತೆಯ... ಹೀಗೆ ಹೀನಾಯ ಮಾಡಿರುವುದನ್ನು ಜೊತೆ ಸೇ... ಆನಂದಿಸಿದರಂತೆ. ತಾವು ನೋಡಿ ಸಂತೋಷಿಸಿದ್ದು ಸಾಲ... ಅಂತ ಅಂತರ್ಜಾಲದ ಮುಖಾಂತರ ಬೇರೆಯವರಿಗ... ಕಳುಹಿಸಿ ವಿಕೃತ ಸಂತೋಷಪಟ್ಟರಂತೆ!


ಇಂತಹ ಅಶ್ಲೀಲ ಚಿತ್ರ ಅಂತರ್ಜಾಲದ... ಹರಿದಾಡುತ್ತಿದೆ ಎಂದು ತಿಳಿದಾಗ ತೃಣಮೂಲ ಕಾಂಗ್ರೆ... ಕಾರ್ಯಕರ್ತರು ಕೆಂಡಾಮಂಡಲ ಆದರು. ಇದ... ಮೂಲಕಾರಣ ಆದವರನ್ನು ಹಿಡಿದರು. ಚೆನ್ನಾಗಿ ತದುಕಿದರ... ಹೆಣ್ಣಿನ ಮರ್ಯಾದೆ ಪ್ರಶ್ನೆ ಹುದುಗಿತ್ತಲ್ಲ. ನೀವು ತಕ್ಷ... ಕಾರ್ಯಪ್ರವೃತ್ತರಾದಿರಿ. ಅವರಿಬ್ಬರನ್ನು ಜೈಲಿಗೆ ಅಟ್ಟಿದಿ...

ಭೇಷ್! ಅದ್ಭುತವಾದ ಕೆಲಸ!

ದೀದಿ ಅವರೆ, ಇದು ಏನೇನೂ ಸಾಲದು. ಪಶ್ಚಿ... ಬಂಗಾಳದಲ್ಲಿ ನಗುವುದನ್ನೇ ನಿಷೇಧಿಸಬೇಕು. ಇಲ್ಲವಾದ... ನಿಮ್ಮನ್ನು ಅಪಹಾಸ್ಯ ಮಾಡಿ ನಗುತ್ತಿದ್ದರೂ, ತಾ... ನಗುತ್ತಿದ್ದುದೇ ಬೇರೆಯ ಕಾರಣಕ್ಕೆ ಎಂದು ಹೇ... ಜಾರಿಕೊಳ್ಳುವ ಅಪಾಯ ಇದೆ! ಇದರ ಬಗ್ಗೆ ಯೋಚಿ...

ದಲಿತ ವಿದ್ಯಾರ್ಥಿಗೆ ಹಿಂಸೆ

ಬೆಳ್ತಂಗಡಿ ತಾಲೂಕಿನ ಕುತ್ಲೂರ್ ಎಂಬ ಕುಗ್ರಾಮದ ವಿಠಲನೆಂಬ ದಲಿತ ವಿದ್ಯಾರ್ಥಿಯೊಬ್ಬನು ಕೈಕೋಳ ಧರಿಸಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪತ್ರಿಕೋದ್ಯಮ ಪರಿಕ್ಷೆಗೆ ಹಾಜರಾಗಿರುವ ವರದಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ.



ವಿಠಲನು ನಕ್ಸಲೀಯರ ಸಹಾಯಕನೆಂಬ ನೆಲೆಯಲ್ಲಿ ಆತನನ್ನು ಬಂಧನದಲ್ಲಿ ಇರಿಸಲಾಗಿದೆ. ಈ ಕೃತ್ಯದಿಂದಾಗಿ ಜನರು ಆಕ್ರೋಶಿತರಾಗಿದ್ದಾರೆ. ಜನರ ಒಲವು ಮತ್ತು ಅನುಕಂಪ ವಿಠಲನಿಗೆ ದೊರಕುತ್ತಿದ್ದು ಸದಾನಂದ ಗೌಡರ ಸರಕಾರದ ವಿರುದ್ಧ ಜನಾಭಿಪ್ರಾಯ ರೂಪಿತವಾಗುತ್ತಿದೆ. ಮಾನವೀಯ ಹಕ್ಕುಗಳ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ರಾಜ್ಯ ಸರ್ಕಾರವು ಈ ವಿಚಾರವನ್ನು ಗಮನಿಸಿ ಆ ವಿದ್ಯಾರ್ಥಿಗೆ ಸೂಕ್ತ ವಾತಾವರಣದಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವಾಗಬೇಕಿದೆ. ಹಾಗೆಯೇ ವಿಠಲನಿಗೆ ಅನ್ಯಾಯವಾಗದಂತೆ ಸರ್ಕಾರ ನೋಡಿಕೊಳ್ಳಬೇಕಿದೆ.

- ಬಿ.ವಿ.ಕಕ್ಕಿಲಾಯ, ಮಂಗಳೂರು


ಇಂಟರ್‌ನೆಟ್ ಸೆನ್ಸಾರ್‌ಅನ್ನು ವಿರೋಧಿಸಿ

ಕೇಂದ್ರ ಸರ್ಕಾರವು ಕಾನೂನೊಂದನ್ನು ರೂಪಿಸಿದ್ದು ಅದರಿಂದ ಇಂಟರ್‌ನೆಟ್‌ನಲ್ಲಿಯ ಬ್ಲಾಗ್ ಬರಹಗಳನ್ನು ಸೆನ್ಸಾರ್ ಮಾಡಲು ಸರ್ಕಾರ ಮುಂದಾಗಿದೆ. ನಮ್ಮ ಫೇಸ್ ಬುಕ್ ಬರಹಗಳನ್ನು ನೋಡಲು, ಸ್ಕೈಪ್‌ನಂತಹ ಆನ್‌ಲೈನ್ ತಂತ್ರಜ್ಞಾನದ ಮೂಲಕ ನಾವು ನಡೆಸುವ ಸಂಭಾಷಣೆಗಳನ್ನು ಕದ್ದು ಕೇಳಲು, ನಾವು ಮಾಡುವ ಟ್ವಿಟ್ಟರ್‌ಗಳನ್ನು ನಿಯಂತ್ರಿಸಲು, ಆನ್‌ಲೈನ್‌ನಲ್ಲಿ ನಾವು ಸಂಗ್ರಹಿಸಿಡುವ ಖಾಸಗಿ ಫೋಟೋಗಳನ್ನು ಮತ್ತು ಡಾಕ್ಯುಮೆಂಟ್‌ಗಳನ್ನು ತೆಗೆದುಕೊಳ್ಳಲು, ನಮ್ಮ ಮೊಬೈಲ್ ಫೋನ್‌ಗಳನ್ನು ಮೂಲಕ ನಾವಿರುವ ಜಾಗವನ್ನು ಟ್ರ್ಯಾಕ್ ಮಾಡಿ ತಿಳಿಯಲು, ಎಲ್ಲರ ಆನ್‌ಲೈನ್ ಚಟುವಟಿಕೆಗಳ ಮೇಲೆ ಸರ್ಕಾರಕ್ಕೆ ಬೇಹುಗಾರಿಕೆ ನಡೆಸಲು ಈ ಹೊಸ ಕಾನೂನಿನಿಂದ ಸಾಧ್ಯವಾಗುತ್ತದೆ. ಇಂತಹ ಕಾನೂನುಗಳನ್ನು ಬಳಸಿಕೊಂಡು ಜನರ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳನ್ನು ಸರ್ಕಾರ ಕಿತ್ತುಕೊಳ್ಳಲು ಹೊರಟಿದೆ. ನಾವೆಲ್ಲರೂ ಇದನ್ನು ತಡೆಯಬೇಕಿದೆ.

ಕಳೆದ 2011 ಏಪ್ರಿಲ್ 11 ರಂದು ಕೇಂದ್ರ ಸರ್ಕಾರವು ಹೊಸ ಮಾಹಿತಿ ತಂತ್ರಜ್ಞಾನ ನಿಯಮಾವಳಿಗಳನ್ನು ಕುರಿತು ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯು ಮಾರ್ಗದರ್ಶಿ ತತ್ವಗಳನ್ನು ಎಲ್ಲ ಇಂಟರ್‌ನೆಟ್ ಸಂಬಂಧಿತ ಕಂಪನಿಗಳು ಪಾಲಿಸಬೇಕೆಂದು ಸರ್ಕಾರ ಠರಾವು ಹೊರಡಿಸಿದೆ. ಈ ನಿಯಮಾವಳಿಗಳ ಪರಿಣಾಮವೇನೆಂದರೆ:

1. ಖಾಸಗಿ ಕಂಪನಿಗಳ ಮೂಲಕ ಮೇಲೆ ಪಟ್ಟಿಮಾಡಿರುವ ಎಲ್ಲಾ ತಂತ್ರಜ್ಞಾನಗಳನ್ನು ಉಪಯೋಗಿಸುತ್ತಿರುವ ಜನರ ಮೇಲೆ ಸೆನ್ಸಾರ್ ವಿಧಿಸಿ ಭಾರತದ ಸಂವಿಧಾನದಲ್ಲಿ ನೀಡಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡಲಾಗುವುದು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



2. ಇಂಟರ್‌ನೆಟ್ ಬಳಕೆದಾರರ ಎಲ್ಲ ಆನ್‌ಲೈನ್ ಮಾಹಿತಿಗಳನ್ನು ನೀಡುವ ಮೂಲಕ ನಾಗರಿಕರ ಖಾಸಗಿ ಬದುಕಿನ ಹಕ್ಕನ್ನು ದಮನ ಮಾಡಲಾಗುವುದು.
3. ಭಾರತದಲ್ಲಿ ಇಂಟರ್‌ನೆಟ್ ಬಳಕೆ ಹರಡುವುದನ್ನು ಇದು ತಪ್ಪಿಸುತ್ತದೆ ಮತ್ತು ಇದರಿಂದಾಗಿ ಆರ್ಥಿಕ ಬೆಳವಣಿಗೆ ಕುಂಠಿತವಾಗುತ್ತದೆ.
4. ವಿವಿಧ ಐ.ಟಿ. ಸಂಬಂಧಿತ ಕೈಗಾರಿಕೆಗಳು ಮತ್ತು ಸೇವೆಗಳ (ವಿಶೇಷವಾಗಿ ಸೈಬರ್ ಕೆಫೆಗಳು, ಸರ್ಚ್ ಇಂಜಿನ್‌ಗಳು ಮತ್ತು ಬ್ಲಾಗರ್‌ಗಳು) ಬೆಳವಣಿಗೆಯನ್ನು ತಡೆಗಟ್ಟುತ್ತದೆ.




ಇದಲ್ಲದೆ ಬಳಕೆದಾರರನ್ನು ಕುರಿ... ಮಾಹಿತಿಯನ್ನು ರಹಸ್ಯವಾಗಿ ಸಂಗ್ರಹಿಸಿ... ಯಾವುದೇ ನ್ಯಾಯಾಲಯದ ಗಮನಕ್ಕೂ ತರದೇ, ಸರ್ಕಾರಕ್ಕೆ ಮತ್ತು ಅದರ ಏಜೆನ್ಸಿಗಳಿಗೆ ರವಾನಿಸಲಾಗುತ್ತದೆ. ಈ... ಎಲ್ಲ ಕಾರಣಗಳಿಗಾಗಿ ಈ ಕಾನೂನನ್ನು ಎಲ್ಲರೂ ವಿರೋಧಿಸಬೇಕಿದೆ.

- ವಿಘ್ನೇಶ್ ಪ್ರಭು, ಜೈಕುಮಾರ್ ಮತ್ತು ರಘುರಾಮ... ಬೆಂಗಳೂ...

ಸೋಮಯಾಜಿ ಮೇಲಿನ ಹಲ್ಲೆ ಖಂಡನೀಯ...

ಮಂಗಳೂರು ವಿಶ್ವವಿದ್ಯಾಲಯದ ಉಪನ್ಯಾಸಕ, ಹೋರಾಟಗಾ... ಪಟ್ಟಾಭಿರಾಮ ಸೋಮಯಾಜಿ ಅವರ ಮೇಲೆ ಮಂಗಳೂರಿನ ಮಾರಿಷ... ವಿದ್ಯಾರ್ಥಿ ಭರತ್ ಎಂಬಾತ ಸಗಣಿ ಬಿಸಾಡಿರುವುದು ಖಂಡನೀಯ ಸಂಗ...



ಸತ್ಯವನ್ನು ಅರಗಿಸಿಕೊಳ್ಳಲಾಗದ ಹಿಂದೂತ್ವ ಸಂಘಟನೆಯು ಆರೋಪಿ ಭರತನಿಗೆ ಶಹಭಾಸ್ ಹೇಳಿರುವುದು ಆ ಸಂಘಟನೆಯ ಸಂಸ್ಕೃತಿಯನ್ನು ಎತ್ತಿ ತೋರುತ್ತದೆ. ಗುರು ಆದವರಿಗೆ ಯಾವ ರೀತಿಯಲ್ಲಿ ಗೌರವ ನೀಡಬೇಕು ಎಂದು ಈ ಮೂಲಕ ಸಾರಿದೆ. ಈ ಕೋಮುವಾದಿಗಳು ಸಂವಿಧಾನಿಕ ಚರ್ಚೆಗೆ ಎದುರುಗೊಳ್ಳದೆ ಹಿಂದಿನಿಂದ ಚೂರಿ ಹಾಕುವ ಕೆಲಸ ಮಾಡುತ್ತಿದ್ದಾ...

ಗೋಹತ್ಯೆಯ ಬಗ್ಗೆ ಸಂವಿಧಾನಿಕವಾಗಿ ಮಾತನಾಡಿ... ಸೋಮಯಾಜಿ ಅವರು ಸಂವಿಧಾನ ವಿರೋಧಿ ಭಜರಂಗಿ... ಆಕ್ರೋಶಕ್ಕೆ ತುತ್ತಾಗಿರುವುದು ಇದು ಮೊದಲ ಬಾರಿ ಅಲ್ಲ.

ಏನೇ ಆಗಲಿ ಕಾನೂನು ವಿರೋಧಿ ಕೆಲಸ ಮಾಡಿದ ಆರೋಪಿ ಭರತ... ಬೆಂಬಲಕ್ಕೆ ಇಡೀ ಸಂಘ ಪರಿವಾರ ನಿಂತಿರುವುದು ಸುಳ್ಳಲ್ಲ. ಆದ್ದರಿಂ... ಬಂಧಿತನಿಗೆ ಕಠಿಣ ಶಿಕ್ಷೆ ನೀಡುವ ಮೂಲಕ ಕೋಮುವಾದಿಗಳಿಗೆ ಎಚ್ಚ... ರವಾನಿಸಬೇಕಿದೆ.


- ಮೊಹಮದ್ ಇರ್ಷಾದ್, ಮಂಗಳೂ...

ಬುದ್ಧಿಜೀವಿಗಳು ಜನಪರ ಅಲ್ಲ ಎಂಬ ಸತ್ಯ ನಿಮಗೆ ದೆ. ನಿಮ್ಮ ಇಂತಹ ಕಾರ್ಯಗಳನ್ನು ಗಮನಿಸಿದವರು ತ್ವಹನ', 'ದುರಹಂಕಾರದ ಪರಮಾವಧಿ', 'ಅಭಿವ್ಯಕ್ತಿ ತ್ಯದ ಕಗ್ಗೊಲೆ' ಎಂದೆಲ್ಲ ಕೂಗಾಡಬಹುದು. ಇಂತಹ ಚಾರ ಮಾಡುವ ಪತ್ರಿಕೆಗಳನ್ನು ನಿಯಂತ್ರಿಸಿದ್ದೀರಿ ಇಷ್ಟೇ ಸಾಲದು. ಬಾಯಿಮಾತಿಗೆ ಇಂತಹವರು ವುದಿಲ್ಲ. ವ್ಯಂಗ್ಯಚಿತ್ರ ರಚಿಸುವವರನ್ನು ಕೂಡಲೇ ಂದ ಗಡಿಪಾರು ಮಾಡಿ. ವ್ಯಂಗ್ಯ ಚಿತ್ರಗಳಿಗೆ ನಿಷೇಧ !

ಮಿಷ್ಟ 'ಕೆಂಪು' ಜನ ಗರಿಕೆ ಹುಲ್ಲಿನಂತೆ ಎಲ್ಲೆಡೆಯೂ ಕೊಂಡಿದ್ದಾರೆ. ಮಾಧ್ಯಮಗಳು ಅವರ ಕೈಲಿದೆ. ನ್ನು ಅಪಹಾಸ್ಯ ಮಾಡುವುದೇ ಅವುಗಳ ವ್ಯವಾಗಿರುವಂತಿದೆ. ನೀವು ಸುದ್ದಿವಾಹಿನಿಗಳನ್ನು ಡದಂತೆ, ಕೇವಲ ಮನರಂಜನಾ ವಾಹಿನಿಗಳಿಗೆ ತರಾಗುವಂತೆ ಜನತೆಗೆ ಕರೆ ನೀಡಿದ್ದೀರಿ. ನಿಮ್ಮ ರ ಮಾಡುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸುವುದರಿಂದ ವಂಚಿತರಾಗಬಾರದು ಎಂದು ಸರ್ಕಾರೀ ನಿ ತರಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ. ಪ್ರಮುಖವಾದದ್ದು ಎಂದರೆ ಖಾಸಗಿ ವಾಹಿನಿಗಳನ್ನು ಧಿಸುವುದು! ಅದರ ಬಗ್ಗೆ ತಜ್ಞರ ತಂಡದೊಡನೆ ಸಿ.

ಇನ್ನೂ ಒಂದು ವಿಷಯ. ಹಾಳಾದ 'ಕೆಂಪು' ಪಕ್ಷ ಚಿಹ್ನೆಯಾಗಿ ಸುತ್ತಿಗೆ, ಕುಡುಗೋಲು ಹೊಂದಿದೆ. ಎತ್ತಿದಾಗ, ಕುಡುಗೋಲು ಆಡಿಸಿದಾಗ ಹಾಳಾದ ಗೆ 'ಕೆಂಪು' ಪಕ್ಷವೇ ನೆನಪಿಗೆ ಬರಬಹುದು. ಪದೇ ಆ ಪಕ್ಷ ಜನರ ನೆನಪಿಗೆ ಬರುವುದು ಶುಭ ನೆ ಅಲ್ಲ. ಅವುಗಳ ಬದಲು ಬೇರೆ ಉಪಕರಣಗಳನ್ನು ವಂತೆ ಪ್ರಯತ್ನಿಸುವುದು ಪ್ರಯೋಜನ ತರಬಹುದು.

ಯುವಶಕ್ತಿಯೇ ಪಕ್ಷದ ಶಕ್ತಿ ಎಂಬುದನ್ನು ತಮ್ಮ ಅರಿತಿರುವುದು ಆಶಾದಾಯಕವಾಗಿದೆ. ನಿಮ್ಮ ಪಕ್ಷದ ತ್ರಿಗಳಿಗೂ ಇದು ಅಂತರ್ಗತವಾಗಿದೆ. ಈ ಯುವಶಕ್ತಿ ಪು' ರಕ್ತದೊಡನೆ ಕಲಬೆರಕೆಯಾಗಬಾರದೆಂದು ತ್ನಿಸುತ್ತಿರುವುದು ಸ್ವಾಗತಾರ್ಹ ಆಗಿದೆ. 'ಕೆಂಪು' ಪಕ್ಷದ ವಕ ಯುವತಿಯರು ವಂಚಕರು. ಅವರನ್ನು ಯಾರೂ ಸಬಾರದು. ಜನರ ರಕ್ತ ಮಲಿನಗೊಳ್ಳಲು ಅವಕಾಶ ಬಾರದು ಎಂದು ಓರ್ವ ಮಂತ್ರಿವರ್ಯರು ಇತ್ತೀಚೆಗೆ ವಕಯುವತಿಯರಿಗೆ ಕರೆ ನೀಡಿರುವುದು ಆಶಾದಾಯಕ ವೆ. ಇನ್ನೂ ಮುಂದುವರಿದು ಶ್ರೀಯುತರು ಸಗೋತ್ರ ಹವಿದ್ದಂತೆ ತೃಣಮೂಲ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಂವಣ ಯುವಕಯುವತಿಯರ ವಿವಾಹವೂ ರ್ಜಿತವಾಗುವುದಿಲ್ಲ ಎಂದಿದ್ದರೆ ಭೇಷಿತ್ತೇನೊ....




ಕೋಮಲ್ ಕೆಟ್ಟ ಬುದ್ಧಿ!

ಕಾಮಿಡಿ ಹೀರೋ ಕೋಮಲ್ ಹೊಸದೊಂದು ಕಾನೂನು ಮಾಡಿದ್ದಾರಂತೆ. ಅದೇನೆಂದರೆ ತಮ್ಮ ಚಿತ್ರದ ಪೋಸ್ಟರ್‌ಗಳ ತುಂಬಾ ತಾವೊಬ್ಬರೇ ರಾರಾಜಿಸಬೇಕು ಎಂಬುದು.

ಯಾವುದೇ ಚಿತ್ರವೊಂದರಲ್ಲಿ ನಟಿಸಿದ ಇತರೆ ಕಲಾವಿದರಿಗೂ ತಾವೂ ಪೋಸ್ಟರ್, ವಿನೈಲ್‌ಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಸಣ್ಣ ಬಯಕೆಯಿರುತ್ತದೆ. ಆದರೆ ಕೋಮಲ್ ತನ್ನ ಸಿನಿಮಾದಲ್ಲಿ ನಟಿಸಿದ ಸಹಕಲಾವಿದರ ಫೋಟೋಗಳು ಪೋಸ್ಟರ್‌ಗಳಲ್ಲಿ ಬರಬಾರದು ಎಂದು ನಿರ್ಮಾಪಕ, ನಿರ್ದೇಶಕರಿಗೆ ಆದೇಶಿಸಿಬಿಡುತ್ತಾರಂತೆ.

'ಗೋವಿಂದಾಯ ನಮಃ' ಚಿತ್ರದ ವಿಚಾರದಲ್ಲಿ ಆಗಿರುವುದೂ ಇದೇ. ಈ ಚಿತ್ರದಲ್ಲಿ ಕೋಮಲ್ ಜೊತೆ ಹರೀಶ್ ರಾಜ್ ಎರಡನೇ ನಾಯಕನಾಗಿ ನಟಿಸಿದ್ದಾರೆ. ಆದರೆ ಹರೀಶ್ ರಾಜ್ ಚಿತ್ರದಲ್ಲಿ ನಟಿಸಿರುವ ವಿಚಾರ ಸಿನಿಮಾ ನೋಡಿದವರಿಗೆ ಬಿಟ್ಟರೆ, ಮಿಕ್ಕ ಯಾರಿಗೂ ಗೊತ್ತೇ ಆಗುವುದಿಲ್ಲ. ಯಾಕೆಂದರೆ, ಚಿತ್ರದ ಪಬ್ಲಿಸಿಟಿಯಲ್ಲಾಗಲಿ, ಪ್ರೆಸ್‌ಮೀಟ್‌ಗಳಲ್ಲಾಗಲಿ ಹರೀಶ್ ರಾಜ್‌ರನ್ನು ಪ್ರೊಜೆಕ್ಟ್ ಮಾಡೇ ಇಲ್ಲ. ಈ ಬಗ್ಗೆ ಹರೀಶ್ ಸಿಕ್ಕಾಪಟ್ಟೆ ಬೇಸರಗೊಂಡಿದ್ದಾರೆ. ಕೋಮಲ್ ಕೂಡಾ ಸಹ ಕಲಾವಿದನಾಗಿ, ಸಣ್ಣ ಪುಟ್ಟ ಕಾಮಿಡಿ ರೋಲ್‌ಗಳಲ್ಲಿ ನಟಿಸುತ್ತಾ ಚಿತ್ರರಂಗದಲ್ಲಿ ನೆಲೆ ಕಂಡುಕೊಂಡವರು. ಇದೇ ಕೋಮಲ್ ಪೋಷಕ ಪಾತ್ರಗಳಲ್ಲಿ ನಟಿಸುತ್ತಿದ್ದ ಸಂದರ್ಭದಲ್ಲಿ 'ಪೋಸ್ಟರ್‌ಗಳಲ್ಲಿ ಹೀರೋಗಳನ್ನಷ್ಟೇ ಬಿಂಬಿಸುತ್ತಾರೆ. ನಮಗೆ ಯಾರೂ ಪಬ್ಲಿಸಿಟಿ ಕೊಡೋದೇ ಇಲ್ಲ' ಎಂದು ಹಲುಬಿದ್ದಿದೆ. ಹೀಗಿರುವಾಗ ಕೋಮಲ್ ಈಗ ಹೀರೋ ಆಗಿ, ಸ್ಟಾರ್‌ಗಿರಿ ಬರುತ್ತಿದ್ದಂತೇ ತನ್ನಂತೆಯೇ ಸಿನಿಮಾದಲ್ಲಿ ಶ್ರಮಪಟ್ಟು ನಟಿಸಿದ ಬೇರೆ ಕಲಾವಿದರಿಗೆ ಪ್ರಚಾರ ತಪ್ಪಿಸುವುದು ಸರಿಯಾ?

ಜೈ ಜೈ ಜಗದೀಶ



'ಸಿನಿಮಾ ಒಂದು ಫ್ಯಾಮಿಲಿ ಎಂಟರ್‌ಟೈನರ್ ಆಗಿದ್ದರೆ ಅದಕ್ಕೆ ಯಶಸ್ಸು ಸಿಗುವುದು ಕಷ್ಟವೇನಲ್ಲ' ಎಂಬ ಕೆಲವರ ವಾದವನ್ನು ನಟ, ನಿರ್ದೇಶಕ ಮತ್ತು ನಿರ್ಮಾಪಕ ಜೈಜಗದೀಶ್ ಸಾರಾಸಗಟಾಗಿ ತಳ್ಳಿಹಾಕಿದ್ದಾರೆ.

'ಗೋಕುಲ ಕೃಷ್ಣ' ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ತಂದೆಯ ಪಾತ್ರ ಮಾಡಿರುವ ಜೈ ಜಗದೀಶ್, ಆ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ "ಕೌಟುಂಬಿಕ ಸಿನಿಮಾಗಳು ಭಾರೀ ಮಟ್ಟದಲ್ಲಿ ಯಶಸ್ವಿಯಾಗುವ ಸಾಧ್ಯತೆಗಳು ಹಿಂದಿತ್ತು, ಈಗ ಆ ಸಾಧ್ಯತೆಗಳು ಕ್ಷೀಣಿಸಿವೆ. ಒಂದು ಸಿನಿಮಾ ನೋಡಲು ಕುಟುಂಬದವರು ಚಿತ್ರಮಂದಿರಕ್ಕೆ ಬರುವುದೇ ಮೂರು ನಾಲ್ಕು ವಾರದ ನಂತರ. ಆರಂಭದ ಗಜಿಬಿಜಿಗೆ ಅವರು ಸಿದ್ಧರಿರುವುದಿಲ್ಲ. ಮೊದಲೆಲ್ಲ ಅಲ್ಲಿತನಕವೂ ಸಿನಿಮಾಗಳು ಥೇಟರಿನಲ್ಲಿರುತ್ತಿತ್ತು. ಹಾಗಾಗಿ ನಿಧಾನವಾಗಿ ಸಿನಿಮಾ ಯಶಸ್ಸಿನ ಕಡೆ ಮುಖ ಮಾಡುತ್ತಿತ್ತು. ಆದರೆ ಇವತ್ತು ಅದಕ್ಕೆ ಆಸ್ಪದವೆಲ್ಲಿದೆ? ಚಿತ್ರವನ್ನು ಒಂದು ವಾರ ಚಿತ್ರಮಂದಿರದಲ್ಲಿ ನಿಲ್ಲಿಸುವುದೇ ಕಷ್ಟ. ಇನ್ನು ಮೂರ್‍ನಾಲ್ಕು ವಾರದ ನಂತರ ಬರುವ ಕುಟುಂಬಗಳನ್ನು ನಂಬಿಕೊಂಡು ಅವರಿಗಾಗಿಯೇ ಸಿನಿಮಾ ಮಾಡುವುದು ಹೇಗೆ? ಈಗೇನಿದ್ದರೂ ಮಾಸ್ ಚಿತ್ರಗಳಿಗಷ್ಟೇ ಕಾಲ" ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಜೈಜಗದೀಶ್ ಹೀಗೆ ಹೇಳುವಾಗ ಅವರ ಮುಖದಲ್ಲಿ ಅಪಾರವಾದ ವೇದನೆ ಎದ್ದುಕಾಣುತ್ತಿತ್ತು. ಯಾಕೆಂದರೆ ಜೈಜಗದೀಶ್ 'ಕಾಂಚನಗಂಗ', 'ಈ ಬಂಧನ', 'ಮಳೆ ಇರಲಿ ಮಂಜೂ ಬರಲಿ', 'ವಾರೆವ್ಹಾ'ದಂತಹ ಫ್ಯಾಮಿಲಿ ಎಂಟರ್‌ಟೈನರ್‌ಗಳನ್ನೇ ನಿರ್ಮಿಸಿದವರು. ಅಂಥ ಚಿತ್ರಗಳನ್ನು ನಿರ್ಮಿಸಿ ಮೇಲಿಂದ ಮೇಲೆ ನಷ್ಟ ಅನುಭವಿಸಿದವರು. ಹೀಗಾಗಿ ಜಗದೀಶ್‌ರ ಅನುಭವದ ವ್ಯಾಖ್ಯಾನಕ್ಕೆ 'ಜೈ' ಎನ್ನದೇ ವಿಧಿಯಿಲ್ಲ.

ಸಮಾಜಕ್ಕೆ ಕನ್ನಡಿ

ಕಂಡಹಾಗೆಯಲ್ಲಿ ಆಫ್ರಿನ್ ಬಗ್ಗೆ ಬರೆದ ಲೇಖನ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ.

- ಜೆ.ಎಂ. ಫೈಜೆ. ಕಲ್ಲಢ

ಪತ್ರಿಕಾರಂಗಕ್ಕೆ ಅಪಾಯ

'ಭೀಮಾತೀರದ'ಲ್ಲಿನ ರಚಾಟದ ವರದಿ ರಭ್ರೋಣಚಿತವಾಗಿತ್ತು. ಆದರೆ ದು ನೈಜ ಘಟನೆಯನ್ನು ರಾರರು ತಮ್ಮ ಲಾಭಕ್ಕೋಸ್ಕರ ಗೆ ಬೇಕಾದರೂ ಲಾಯಿಸಿಕೊಳ್ಳುತ್ತಿರುವುದು ಬಾ ಅಸಹ್ಯ ಹುಟ್ಟಿಸುತ್ತದೆ. ಧ್ಯಮಗಳ ಕತ್ತಲ ಲೋಕದ ಹೋಗುಗಳ ಬಗ್ಗೆ ದಿದ್ದರೆ ಚೆನ್ನಾಗಿತ್ತು.

- ಶಿವಣ್ಣ, ಚಾಮರಾಜನಗರ



ರವಿ ಬೆಳಗೆರೆಯಂಥವರಲ್ಲಿ ಬರವಣಿಗೆಯ ಪ್ರತಿಭೆ ದ್ದರೂ ಅವರೊಳಗೆ ರಾಧಿಗಳಿಗೆ ಮಾನ್ಯತೆ ತಂದು ಡುವ, ಅಪರಾಧಗಳನ್ನು ಪೋಷಿಸುವ ಮತ್ತು ಪೋಷಿಸುವ ತಣ್ಣಗಿನ ಹಿಟ್ಲರ್, ನರೇಂದ್ರ ಮೋದಿಗಳಿದ್ದಾರೆ. ಅದೇ ಕನ್ನಡ ಪತ್ರಿಕಾರಂಗಕ್ಕೆ ಘೋರ ಪಾಯ.

- ರವಿ ಕುಮಾರ, ಹಾಸನ

ವಿಭಿನ್ನವಾಗಿರುವ 'ಲಂಕೇಶ್'

ಕೊಡು ಮಠದ ಸ್ವಾಮೀಜಿ ಹಿಂದೊಮ್ಮೆ ಟಿವಿ ಚಾನೆಲ್ ದಲ್ಲಿ, "ಉತ್ತರ ಭಾರತದ ಪ್ರಸಿದ್ಧ ಮಹಿಳೆ ಯಾಗುತ್ತಾಳೆ" ಎಂದು ಭವಿಷ್ಯ ಹೇಳಿದ್ದರು. ಆದರೆ ಅದು ನಿಜವಾಗಲಿಲ್ಲ. ಅದು ನಿಜವಾಗಿದಿದ್ದರ ಬಗ್ಗೆ ಆ ಚಾನೆಲ್ ಪ್ರಸಾರವನ್ನು ಮಾಡಲೂ ಇಲ್ಲ.

ನಮ್ಮ ಸರ್ಕಾರಗಳು ಕಿವಿ ಕಳೆದುಕೊಳ್ಳುತ್ತಿವೆ. ಅದೇರೀತಿ ನಮ್ಮ ಮಾಧ್ಯಮಗಳು ತಮ್ಮ ಮೆದುಳನ್ನು ಕಳೆದುಕೊಳ್ಳುತ್ತಿವೆ. ಜನರು ಇಷ್ಟಪಡೋದೆಲ್ಲವನ್ನು ಕೊಡುವುದೇ ಮಾಧ್ಯಮದ ಕೆಲಸವೇ? ಈ ಪ್ರಶ್ನೆಗೆ 'ಲಂಕೇಶ್' ಉತ್ತರ ಕೊಡುತ್ತಿದೆ.

- ವಿ.ಆರ್.ಮೌರ್ಯ, ಬೆಂಗಳೂರು


ತುಂಟಾಟ ಬೇಕು

ಎಲ್ಲಾ ಮರೆತರೂ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ 'ತುಂಟಾಟ'ವನ್ನು ಮರೆಯುವುದಕ್ಕೆ ಆಗುತ್ತಿಲ್ಲ. ಪ್ಲೀಸ್, ಅದನ್ನು ಮತ್ತೆ ಪ್ರಾರಂಭಿಸಿ...

- ಸತೀಶ್ ಕೆ.ಜೆ., ಬೆಂಗಳೂರು

ಮುಂದುವರೆದಿರುವ ಸುಪಾರಿ ಕೊಲೆಗಳು

'ಭೀಮಾ ತೀರದಲ್ಲಿ' ಕನ್ನಡ ಸಿನಿಮಾದ ಲೇಖಕರ ಬಗೆಗಿನ ವಿವಾದದಿಂದ ಎಲ್ಲರಿಗೂ ಮರೆತುಹೋಗಿದ್ದ ಚಂದಪ್ಪನೆಂಬ ಭಯಂಕರ ಕ್ರಿಮಿನಲ್ ಕರ್ನಾಟಕದವರಿಗೆ ಮತ್ತೆ ನೆನಪಾದ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಆದರೆ ನಿಜವಾಗಿಯೂ ಚಂದಪ್ಪ ಸತ್ತು 12 ವರ್ಷಗಳಾಗಿದ್ದರೂ ಈಗಲೂ ಬಿಜಾಪುರ ಜಿಲ್ಲೆಯಲ್ಲಿ ಸುಪಾರಿ ಕಿಲ್ಲಿಂಗ್ ನಿಂತಿಲ್ಲ. ಚಂದಪ್ಪನಿಂದ ಹುಟ್ಟಿದ ರಕ್ತ-ಬಿಜಾಸುರರು ಬಿಜಾಪುರದಲ್ಲಿ ಹಾಗೂ ನೆರೆಯ ಬೆಳಗಾವಿ ಜಿಲ್ಲೆಯಲ್ಲಿ ಈಗಲೂ ಸಕ್ರಿಯರಾಗಿದ್ದಾರೆ. ಎರಡೂವರೆ ವರ್ಷಗಳ ಹಿಂದೆ ಬೆಳಗಾವಿಯಲ್ಲಿ ಪ್ಲೇಸ್‌ಮೆಂಟ್ ಏಜೆಂಟ್ ಆಗಿದ್ದ ನನ್ನ ಮಿತ್ರನನ್ನು ಅವನ ಪಾರ್ಟನರ್‌ಗಳೇ ಬಿಜಾಪುರದ ಕಂಟ್ರಾಕ್ಟ್ ಕಿಲ್ಲರ್‌ಗಳಿಗೆ ಸುಪಾರಿ ಕೊಟ್ಟು ಕೊಲ್ಲಿಸಿದ್ದರು. ಖೇದವೆಂದರೆ ಗೋಕಾಕದ ಪೊಲೀಸರು ಕೊಲೆಗಡುಕರ ಜೊತೆ ಕೈಜೋಡಿಸಿ ಹತ್ಯೆಯನ್ನು ಆತ್ಮಹತ್ಯೆಯೆಂದು ಬಗೆದು ಕೇಸ್ ಮುಚ್ಚಿ ಹಾಕಿದ್ದು.



ಕೊಲೆಯಾದವನ ಬಾಯಿಗೆ ಬಿಗಿಯಾಗಿ ಬಟ್ಟೆ ತುರುಕಿದ್ದರೂ, ಅವನ ಕುತ್ತಿಗೆಗೆ ಹಗ್ಗ ಕಟ್ಟದೇ ಸೊಂಟಕ್ಕೆ ಹಗ್ಗ ಕಟ್ಟಿ ಹೆಣವನ್ನು ನೇತಾಡಿಸಿದ್ದರೂ, ಅವನು ಜೀವಮಾನದಲ್ಲಿ ಕಂಪ್ಯೂಟರ್ ಮುಟ್ಟಿರದಿದ್ದರೂ ಅವನ ಆತ್ಮಹತ್ಯೆ ಪತ್ರ ಕಂಪ್ಯೂಟರ್‌ನಲ್ಲಿ ಪ್ರಿಂಟಾಗಿದ್ದರೂ, ಅವನಿಗೆ ಕನ್ನಡ ಭಾಷೆಯಲ್ಲಿ ಬರೆಯಲು ಬರದಿದ್ದರೂ ಅವನ ಕಿಸೆಯಲ್ಲಿ ಸಿಕ್ಕ ಆತ್ಮಹತ್ಯೆ ಪತ್ರ ಕನ್ನಡದಲ್ಲಿದ್ದರೂ (ಕಂಪ್ಯೂಟರ್ ಕನ್ನಡ ಪ್ರಿಂಟು), ಸಣ್ಣ ಮಗುವಿಗೂ ಅದು ಕೊಲೆಯೆಂದು ಸುಲಭವಾಗಿ ಅರ್ಥವಾಗಿದ್ದರೂ, ಸ್ಥಳೀಯ ಮರಾಠಿ ಪತ್ರಿಕೆಗಳು ಅದನ್ನು ಕೊಲೆಯೆಂದು ಸಾರಿ-ಸಾರಿ ಹೇಳುತ್ತಿದ್ದರೂ, ಬೆಳಗಾವಿ ಪೊಲೀಸರು ಅದನ್ನು ಆತ್ಮಹತ್ಯೆಯೆಂದು ಬರೆದು ತನಿಖೆ ನಡೆಸದೇ ಮುಚ್ಚಿ ಹಾಕಿದರು. ಇದಕ್ಕೆ ಕಾರಣ ಭೀಮಾ ತೀರದ ಸುಪಾರಿ ಹಂತಕರ ರಕ್ಷಣೆಗೆ ಈಗಲೂ ಪ್ರಭಾವಿ ರಾಜಕಾರಣಿಗಳು ನಿಂತಿರುವುದು.

- ಸೋಮೇಶ್ ನಾರಂಗದ್, ಬೆಳಗಾಂ

Registered No.KA/RNP/BGS/2036/2011-13 Posted at : GPO, Bangalore-01, Fri/Saturday R B P LANKESH, Kannada Weekly Price Rs. 14/- 09-05-2012 RNI No. KARKAN200

ಸ್ಟಾರ್ ಸ್ಟೇಟ್‌ಮೆಂಟ್ಸ್!

ಈ ವಾರ ಚಿತ್ರರಂಗದಲ್ಲಿ ಒಬ್ಬರ ವಿರುದ್ಧ ಮತ್ತೊಬ್ಬರು ತಿರುಗಿಬಿದ್ದ ಯಾವತ್ತೂ ಯಾವ ತಕರಾರುಗಳ ಇಂಟರ್‌ಫಿಯರ್ ಆಗದ ಶಿವಣ್ಣ ಮೊನ್ನೆ ನಿರ್ಮಾಪಕ ಮುನಿರತ್ನ ಪ ಹೌಹಾರಿದ್ದಾರೆ. ಅದೇ ಹೊತ್ತಿಗೆ " ಸೋಲಿಗೆ ಗಣೇಶನೇ ಕಾರಣ" ನಾಣಿ ನಿಲುವನ್ನು ಗಣೇಶ್ ವಿರೋಧಿಸಿದ್ದಾನೆ. ಇನ್ನು 'ಹೊಟ್ಟೆಡುಮ್ಮಣ್ಣ' ಎಂದು ಹಂಗಿಸುವವರ ಮೇಲೆ ಕೋಮಲ ಮುನಿಸಿಕೊಂಡಿದ್ದಾರೆ. ಇದೆಲ್ಲದರ ಜೊತೆಗೆ ದರ್ಶನ್ ತನ್ನನ್ನು ತಾನೇ ಎಂದು ಬಣ್ಣಿಸಿಕೊಂಡಿದ್ದಾನೆ. ಈ ವಿವಾದಗಳನ್ನು ಕುರಿತ ವಿವರಗಳು ಇಲ್ಲಿವೆ.

ಮುನಿರತ್ನ 'ಕಾಂಡೋಮ್' ಹೇಳಿಕೆಗಳನ್ನು ನಿಲ್ಲಿಸಲಿ



ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನ ಇತ್ತೀಚೆಗೆ "ಹೀರೋಗಳಿಗೆ ಕಾಂಡೋಮ್ ಒಂದು ಬಿಟ್ಟು ಎಲ್ಲವನ್ನೂ ನಾವೇ ಕೊಡಬೇಕು. ತಮ್ಮ ಖರ್ಚುಗಳಿಗೆಲ್ಲ ನಮ್ಮ ಜೇಬನ್ನೇ ಅವಲಂಬಿಸಿದ್ದಾರೆ" ಎಂದೆಲ್ಲ ಹೀರೋಗಳ ಬಗ್ಗೆ ಆರೋಪಿಸಿದ್ದರು. ಅದನ್ನು ಮೊದಲು ಟೀಕಿಸಿದ್ದು ಲೂಸ್ ಮಾದ ಅಲಿಯಾಸ್ ಯೋಗೀಶ್. ಆನಂತರ ಸಾರಾ ಗೋವಿಂದು ಕೂಡ ಮುನಿಯ ಮಾತನ್ನು ಖಂಡಿಸಿದ್ದರು. ಈಗ 'ಸೆಂಚುರಿ ಸ್ಟಾರ್' ಶಿವಣ್ಣ ಕೂಡ ಮುನಿಯ ವಿರುದ್ಧ ಮಾತಾಡಿದ್ದಾರೆ.

"ನಿರ್ಮಾಪಕರೆಂದರೆ ಅನ್ನದಾತರು ಎಂದು ಅಪ್ಪಾಜಿ ಹೇಳುತ್ತಿದ್ದರು. ಆದರೆ ಮುನಿರತ್ನರಂತಹ ನಿರ್ಮಾಪಕರು ಹೀಗೆ ಮಾತನಾಡಿದರೆ, ನಾವು ಕೊಂಚ ಖಾರವಾಗಿಯೇ ಪ್ರತಿಕ್ರಿಯಿಸಬೇಕಾಗುತ್ತದೆ. ಮೊದಲು ಮುನಿರತ್ನರಂತಹ ನಿರ್ಮಾಪಕರು 'ಕಾಂಡೋಮ್' ಹೇಳಿಕೆಗಳನ್ನು ನಿಲ್ಲಿಸಬೇಕು. ಹೀಗೆ ಮಾತನಾಡುವವರ ಮುಖ ನೋಡಲು ಕೂಡ ನನಗೆ ಇಷ್ಟವಿಲ್ಲ. ಛೀ. ಮುನಿರತ್ನ ಹೇಳಿರುವಂತೆ ನಿರ್ಮಾಪಕರ ಮನೆ ಬಾಗಿಲಿಗೆ ಯಾವ ಹೀರೋಗಳು ಹೋಗುವುದಿಲ್ಲ, ನಿರ್ಮಾಪಕರೇ ಕಲಾವಿದರ ಮನೆಗೆ ಬರುತ್ತಾರೆ. ಚಿತ್ರೀಕರಣದ ಸಂದರ್ಭದಲ್ಲಿ ಕಲಾವಿದರಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಬೇಕಾಗಿರುವುದು ನಿರ್ಮಾಪಕ ಎನಿಸಿಕೊಂಡವರ ಕರ್ತವ್ಯ. ನಾವು ಶೂಟಿಂಗ್ ಸ್ಪಾಟ್‌ಗೆ ಮನೆಯಿಂದ ಏನೂ ತೆಗೆದುಕೊಂಡು ಹೋಗುವುದಿಲ್ಲ. ಒಂದು ವೇಳೆ ಕಲಾವಿದರು ಅದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಅದು ನಿರ್ಮಾಪಕನ ಅಸಹಾಯಕತೆಯಷ್ಟೇ. ಯಾವ ನಿರ್ಮಾಪಕನೇ ಆದರೂ ತಮ್ಮ ಸಿನಿಮಾಗಳು ಗೆದ್ದಾಗ, ಅದರ ಲಾಭವನ್ನು ನಾಯಕರ ಜತೆ ಶೇರ್ ಮಾಡಿಕೊಳ್ಳುವುದಿಲ್ಲ."

ಈ ವಿಷಯವಲ್ಲದೆ ಕಳೆದೆರಡು ವಾರಗಳಿಂದ ಬೀದಿಗೆ ಬಿದ್ದಿರುವ ನಿರ್ಮಾಪಕರ ಜಗಳವನ್ನೂ ಕುರಿತು ಮಾತಾಡಿದ ಶಿವಣ್ಣ "ಕೆ. ಮಂಜು ಮತ್ತು ಮುನಿರತ್ನ ಅವರದ್ದು ಜಗಳವಲ್ಲ, ಅದು ಕಾಮಿಡಿ" ಎಂದು ಲೇವಡಿ ಮಾಡಿದರು. "ಇತ್ತೀಚೆಗೆ ಬಹಿರಂಗವಾಗಿ ನಿರ್ಮಾಪಕರು ಕಿತ್ತಾಡುತ್ತಿದ್ದಾರೆ. ಇದು ನಮ್ಮೊಳಗೆ ಇತ್ಯರ್ಥವಾಗಬೇಕಿದ್ದ ವಿಚಾರ. ಆದರೆ ಅದು ಮಾಧ್ಯಮಗಳ ಮುಂದೆ, ಅದರಲ್ಲೂ ಟಿವಿ ವಾಹಿನಿಗಳಲ್ಲಿ ಚರ್ಚೆಯಾಗುತ್ತಿದೆ. ನನಗಂತೂ ಇದು ಗಂಭೀರ ಚರ್ಚೆಯಂತೆ ಕಂಡುಬರುತ್ತಿಲ್ಲ, ಒಳ್ಳೆ ಕಾಮಿಡಿ ಶೋದಂತೆ ಕಾಣುತ್ತಿದೆ" ಎಂದು ಶಿವಣ್ಣ 'ಅಂದರ್ ಬಾಹರ್' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ತಮ್ಮ ಅಂದರ್‌ನಲ್ಲಿದ್ದ ಕೋಪವನ್ನೆಲ್ಲ ಬಾಹರ್‌ನಲ್ಲಿ ಬಿಚ್ಚಿಟ್ಟರು.

ಯಾವತ್ತೂ ಬೇರೊಬ್ಬರ ಬಗ್ಗೆ ಕಾಮೆಂಟ್ ಮಾಡದ ಶಿವಣ್ಣ ಏಕಾಏಕಿ ಮುನಿರತ್ನ ಬಗ್ಗೆ ಹೀಗೆ ಖಾರವಾಗಿ ಮಾತಾಡಲು ಮತ್ತೊಂದು ಕಾರಣವೂ ಇದೆ. ಅದೇನೆಂದರೆ ಇತ್ತೀಚೆಗೆ 'ಅಣ್ಣಾ ಬಾಂಡ್' ಸಿನಿಮಾ ಬಗ್ಗೆ ಮುನಿರತ್ನ "ಕನ್ನಡ ಚಿತ್ರರಂಗಕ್ಕೆ ಪುನೀತ್ ರಾಜ್‌ಕುಮಾರ್ ಒಬ್ಬರೇ ಹೀರೋ ಅಲ್ಲ, ಬೇರೆ ಸ್ಟಾರ್‌ಗಳೂ ಇದ್ದಾರೆ. ಅವರ ಸಿನಿಮಾ ರಿಲೀಸಾಗುತ್ತೆ ಅಂತ ನಾವೆಲ್ಲ ಸೈಲೆಂಟಾಗಿ ಸೈಡಿನಲ್ಲಿ ನಿಲ್ಲಲು ಸಾಧ್ಯವಿಲ್ಲ" ಎಂಬಂತೆ ಮಾತನಾಡಿದ್ದರು. ಬಹುಶಃ ಶಿವಣ್ಣ ಮುನಿ ಮೇಲೆ ಮುನಿಸಿಕೊಂಡಿರುವುದಕ್ಕೆ ಇದೂ ಕಾರಣವಿರಬಹುದು.

ನಾಣಿ ಸೋಲಿಗೆ ನಾನು ಕಾರಣನಲ್ಲ!



"ಗಣೇಶನಂಥ ಹೀರೋ ನನ್ನ ಚಿತ್ರದ ಪಬ್ಲಿಸಿಟಿ ಮಾಡದಿರುವುದರಿಂದ 'ಮುಂಜಾನೆ' ಸಿನಿಮಾ ಫ್ಲಾಪ್ ಆಯಿತು" ಎಂದು ನಾರಾಯಣ್ ಇತ್ತೀಚೆಗಷ್ಟೇ ಆರೋಪಿಸಿದ್ದರು. ನಾಣಿಯ ಮಾತಿನಿಂದ ವ್ಯಘ್ರಗೊಂಡಿದ್ದ 'ಗೋಲ್ಡನ್ ಸ್ಟಾರ್' ಗಣೇಶ ಈಗ ಬಾಯಿ ತೆರೆದಿದ್ದಾನೆ.

"ನಾರಾಯಣ್ ರಿಟೈರ್‌ಮೆಂಟ್ ತಗೊಂಡಿರೋದು ಅವರ ಖಾಸಗಿ ನಿರ್ಧಾರ. ಅವರ ಡಿಸೀಷನ್ನುಗಳಿಗೆ ನಾನು ಹೊಣೆಯಲ್ಲ, ಅವರ ಬಗ್ಗೆ ನಾನು ಯಾವತ್ತೂ ಕೆಟ್ಟದಾಗಿ ಕಾಮೆಂಟು ಮಾಡಿದವನಲ್ಲ, ನಾನು ನಟಿಸಿದ್ದ 'ಚೆಲುವಿನ ಚಿತ್ತಾರ' ಗೆದ್ದಾಗ ಇದೇ ನಾರಾಯಣ್ ಜೇಬು ಭರ್ತಿ ಮಾಡಿಕೊಂಡಾಗಲೂ ನನಗೆ ನೀಡಿದ್ದು ಪುಡುಬಿ ಹಣ. ಆದರೆ ಈ ವಿಚಾರದಲ್ಲಿ ನಾನು ಎಂದಾದರೂ ಕಿರಿಕ್ ಮಾಡಿ ಮತ್ತೆ ಅದೇ ನಾರಾಯಣ್‌ಗೆ 'ಶೈಲೂ' 'ಮುಂಜಾನೆ' ಸಿನಿಮಾಗಳಿಗೆ ಕಾಲ ಕೊಟ್ಟಿಲ್ವಾ? ಸಿನಿಮಾ ಬಿಡುಗಡೆಗೆ ನನ್ನನ್ನು ಇಂದ್ರ ಚಂದ್ರ ಅಟ್ಟಕ್ಕೇರಿಸುತ್ತಿದ್ದ ನಾರಾಯಣ್ ಈ ವಿರುದ್ಧ ಮಾತಾಡಿದರೆ ನಾನೇನು ಮ ಇತ್ತೀಚೆಗಷ್ಟೇ ಬಿಡುಗಡೆಗೊಂಡ 'ಮದುವೆ ಮನೆ' ಸೋತಿದೆ ಅನ್ ಒಪ್ಪಿಕೊಳ್ಳುತ್ತೇನೆ. ಆದರೆ ಕೆ. ನಿರ್ಮಾಣದ 'ಶೈಲೂ' ಚಿತ್ರದಿ ನಿರ್ಮಾಪಕರಿಗೆ ನಷ್ಟವಾಗಿಲ್ಲ. 'ಮು ನಿರ್ದೇಶಕರೇ ನಿರ್ಮಿಸಿದ ಸಿನಿಮಾ. ಅದು ಸೋ ಅದಕ್ಕೆ ಕಾರಣ ನಿರ್ದೇಶಕರೇ. ನಾರಾಯಣ್ ಕಥೆ ಹೇ ಬೇರೆಯದೇ ಕಲ್ಪನೆ ಹುಟ್ಟು ಹಾಕಿದ್ದರು. ಇಂತಹ ಬಂದೇ ಇಲ್ಲ ಎಂದಿದ್ದರು. ಆದರೆ ಚಿತ್ರೀಕರಣ ಮಾ ಬಂಡವಾಳ ಗೊತ್ತಾಯ್ತು, ಇದು ಎಲ್ಲೋ ಮಿಸ್ಟಾಗಿ ಎಂದು ಶೂಟಿಂಗ್ ಟೈಮಲ್ಲಿ ನೆನಪಿಸಿದಾಗ, ನಾರಾಯಣ್ ಕಿವಿಗೇ ಹಾಕಿಕೊಳ್ಳದೆ ಸುಮ್ಮನಾಗಿಬಿ ಈಗ ನನ್ನ ವಿರುದ್ಧ ಆರೋಪಿಸುತ್ತಿದ್ದಾರೆ."

ಗಣೇಶನ ಈ ಮಾತನ್ನು ಕೇಳುತ್ತಿದ್ದರೆ 'ಹ ನಾರಾಯಣ್‌ರಂಥ ನಿರ್ದೇಶಕರು ಗೆದ್ದಾಗ ತ ಸೋತಾಗ ಮಾತ್ರ ಹೀರೋಗಳ ಮೇಲೆ ಕಿಡಿಕಾರ ಸರಿಯೇ?' ಎಂದು ಎಂಥವರಿಗೂ ಅನ್ನಿಸದೇ ಇರ

'ನನ್ನದು ನರಿ ಬುದ್ಧಿ!'



"ದೊಡ್ಡ ದೊಡ್ಡ ಹೀರೋಗಳು ಬೇಡವೆಂದು ತಿರಸ್ಕರಿಸಿದ ಸಿನಿಮಾಗಳ ಬಗ್ಗೆ ತಿಳಿದುಕೊಂಡು ದೂರದಿಂದ ಕಲ್ಲೆಸೆಯುತ್ತಿದ್ದೆ. ಪ್ರತಿ ಬಾರಿಯೂ ನನ್ನ ಪ್ಲಾನ್ ವರ್ಕ್‌ಔಟ್ ಆಗುತ್ತಲೇ ಇತ್ತು, ನಾನು ಇಂತಹ 'ನರಿ ಬುದ್ಧಿ'ಯಿಂದಲೇ ಗೆಲುವು ಸಾಧಿಸಿದ್ದು..." ಹೀಗೆ ತಾನು ಗೆದ್ದು ಬಂದ ರೀತಿಯ ಬಗ್ಗೆ ಹೇಳಿಕೊಂಡಿದ್ದು ಹೀರೋ ದರ್ಶನ್!

"ನನ್ನ ಮೊದಲ ಸಿನೆಮಾ 'ಮೆಜೆಸ್ಟಿಕ್' ಗೆದ್ದಿದ್ದರೂ ಆನಂತರ ನನಗೆ ಒಳ್ಳೆಯ ಅವಕಾಶಗಳೇ ಸಿಗಲಿಲ್ಲ, ಆಗ ಛಾನ್ಸು ಪಡೆಯಲು ನಾನು ನರಿಯಂತಾಗಿದ್ದೆ. ನರಿ ನಾಯಿಯಂತೆ ಸಣ್ಣದಾಗಿದ್ದರೂ ಹೇಗೆ ದೊಡ್ಡ ಪ್ರಾಣಿಗಳ ವಿರುದ್ಧ ಜಾಣತನದಿಂದ ಹೋರಾಡಿ ಗೆಲ್ಲುತ್ತೋ, ಅದೇರೀತಿ ನಾನು ಕೂಡ ಬೇರೆ ಹೀರೋಗಳು ಬೇಡವೆಂದು ತಿರಸ್ಕರಿಸಿದ್ದ ಆಫರುಗಳನ್ನು ಪಡೆಯಲು ಪ್ಲಾನು ರೂಪಿಸುತ್ತಿದ್ದೆ. ದೊಡ್ಡ ದೊಡ್ಡ ಸ್ಟಾರುಗಳು ಬೇಡ ಎಂದು ಹೇಳಿದ್ದು ನನಗೆ ಗೊತ್ತಾಗುತ್ತಿದ್ದಂತೆ, ಉಪಾಯ ಮಾಡಿ ನನಗೆ ಅದು ಸಿಗುವಂತೆ ಸ್ಕೆಚ್ ಹಾಕುತ್ತಿದ್ದೆ. ನನ್ನ ಮೊದಮೊದಲ ಯಶಸ್ಸುಗಳ ಹಿಂದಿನ ಗುಟ್ಟು ಇದು. ಇದನ್ನು ಈಗ ಹೇಳಿಕೊಳ್ಳುವುದಕ್ಕೆ ನನಗೆ ಯಾವುದೇ ಹಿಂಜರಿಕೆಯಿಲ್ಲ, ಮಾಡಿದ್ದೇ ಉಂಟಂತೆ ಅದನ್ನು ಹೇಳಲು ಸಂಕೋಚ ಯಾಕೆ ಪಡಬೇಕು?" ಇದು ದರ್ಶನ್ ಹೊರಹಾಕಿರುವ ಆತನ ಪ್ರೊಫೆಷನಲ್ ಸೀಕ್ರೆಟ್!

ದೊಡ್ಹೊಟ್ಟೆ ಹೀರೋಗಳ ಗೇಲಿ ಮಾಡ್ಬೇಡಿ ಪ್ಲೀಸ್!



"ದೊಡ್ಡದಾಗಿ ಹೊಟ್ಟೆ ಬೆಳೆಸಿಕೊಂಡವರೂ ಈಗ ಹೀರೋಗಳಾಗಿದ್ದಾರೆ" ಎಂದು ಮಾಧ್ಯಮದವರು ಪ್ರೇಕ್ಷಕರು ಇತ್ತೀಚಿನ ಕನ್ನಡದ ಕೆಲವು ಹೀರೋಗಳ ಬಗ್ಗೆ ಅಣಕ ಮಾಡುತ್ತಿರುವುದು ವಾಸ್ತವ. ಈ ಟೀಕೆಯನ್ನು ಹೆಗಲ ಮೇಲೆ ಕುಂಬಳಕಾಯಿ ಹುಡುಕುತ್ತಿರುವವರಲ್ಲಿ ನಟ ಕೋಮಲ್ ಪ್ರಮುಖ!

"ಇದೇ ದೊಡ್ಡ ಹೊಟ್ಟೆಯನ್ನಿಟ್ಟುಕೊಂಡು ನಾನು 45 ಸೂಪರ್‌ಹಿಟ್ ಚಿತ್ರಗಳಲ್ಲಿ ಕಾಮಿಡಿ ನಟನಾಗಿದ್ದೇನೆ ಸೂಪರ್ ಸ್ಟಾರ್‌ಗಳ ಚಿತ್ರದಲ್ಲೂ ನಾನು ನಟಿಸಿದ್ದೇನೆ. ಆಗ ನನ್ನ ಹೊಟ್ಟೆ ಬಗ್ಗೆ ಯಾರೂ ಮಾತನಾಡಲಿಲ್ಲ, ಈಗ ಮಂಜ', 'ಮರ್ಯಾದೆ ರಾಮಣ್ಣ' ಚಿತ್ರಗಳ ಮೂಲಕ ನಾಯಕನಾದ ನಂತರ ಎಲ್ಲರಿಗೂ ನನ್ನ ಹೊಟ್ಟೆಯ ಕಣ್ಣು ಬಿದ್ದಿದೆ" ಎಂದ ಕೋಮಲ್ ತಮ್ಮ ಮುಂದಿನ ಚಿತ್ರ ಸೆಟ್ಟೇರುವ ಮುನ್ನ ತಮ್ಮ ಬೊಜ್ಜನ್ನು ಇಳಿಸಿಕೆ ಮೂಲಕ ಪ್ರೇಕ್ಷಕರ ಕಣ್ಣಿನ ಭಾರ ಇಳಿಸುವ ಭರವಸೆ ನೀಡಿದ್ದಾರೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediff...